ನಮ್ಮ ವ್ಯವಹಾರ ನೀತಿ ಸಂಹಿತೆ (“Code of Business Conduct”) .

TESCO

ಪರಿವಿಡಿ

ಪುಟ

ವಿಭಾಗ 1:ನಮ್ಮ ವ್ಯವಹಾರ ನೀತಿ ಸಂಹಿತೆ ("COBC")

- ಗ್ರೂಪ್ ಚೀಫ್ ಎಕ್ಸಿಕ್ಯುಟಿವ್ ಡೇವ್ ಲೆವಿಸ್ ರ ಸಂದೇಶ 3
- ಸಂಹಿತೆಯ ಆಚರಣೆ 6
- ನಾನು ಹೇಗೆ ಮಾತನಾಡಬಹುದು? 7
- ಗುಂಪಿನ ಸುತ್ತಲಿನ ಪ್ರೊಟೆಕ್ಟರ್ ಲೈನ್ Protector Line ಸಂಪರ್ಕಗಳು 9

□□□□□□ 2: ಸಂಹಿತೆ ಮಾರ್ಗದರ್ಶನ

ನಮ್ಮ ಗ್ರಾಹಕರನ್ನು ಕಾಳಜಿಯಿಂದ ನೋಡಿಕೊಳ್ಳುವುದು

- ಸ್ಪಷ್ಟ ಬೆಲೆಗಳು & ಮಾರ್ಕೆಟಿಂಗ್ 14
- ಆಹಾರ & ಉತ್ಪನ್ನದ ಮಾನದಂಡಗಳು 16
- ಗ್ರಾಹಕ ಮತ್ತು ಸಹೋದ್ಯೋಗಿ ಡೇಟಾ ರಕ್ಷಣೆ 18

ಒಟ್ಟಿಗೆ ಕೆಲಸ ಮಾಡುವುದು

- ಆರೋಗ್ಯ & ಸುರಕ್ಷತೆ 22
- ಸಮಾನ ಅವಕಾಶ, ಅಂತರ್ವೇಶನ ಮತ್ತು ವೈವಿಧ್ಯತೆ 24
- ಗೌರವ, ಘನತೆ ಮತ್ತು ನ್ಯಾಯಯುತ ಉಪಚಾರ 26

ಪುಟ

ನ್ಯಾಯೋಚಿತವಾಗಿ ವ್ಯವಹರಿಸುವುದು

- ಸ್ಪರ್ಧಾ ಕಾನೂನುಗಳು 30
- ಪ್ರತಿಷೇಧಗಳು & ರಫ್ತು ನಿಯಂತ್ರಣಗಳು 32
- ಮಾನವ ಹಕ್ಕುಗಳು & ನೈತಿಕ ವ್ಯಾಪಾರ 34
- ಪೂರೈಕೆದಾರರನ್ನು ರಕ್ಷಿಸುವ ಕಾನೂನುಗಳು 36
- ಬ್ರಾಂಡ್‌ಗಳು & ಬೌದ್ಧಿಕ ಆಸ್ತಿ 38

ನಮ್ಮ ಖ್ಯಾತಿಯ ರಕ್ಷಣೆ

- ವಂಚನೆ 42
- ಲಂಚ 44
- ಉಡುಗೊರೆಗಳು ಮತ್ತು ಮನರಂಜನೆ 46
- ಆಸಕ್ತಿ-ವೈರುಧ್ಯ 48
- ದತ್ತಿ ದೇಣಿಗೆ 48
- ಒಳ-ವ್ಯವಹಾರ ಮತ್ತು ಮಾರುಕಟ್ಟೆ ದುರುಪಯೋಗ 50
- ರಾಜಕೀಯ ಚಟುವಟಿಕೆಯಲ್ಲಿ ತೊಡಗುವುದು 52
- ನಿಖರವಾದ ಲೆಕ್ಕಪತ್ರ ನಿರ್ವಹಣೆ ಮತ್ತು ಹಣ ವರ್ಗಾವಣೆ 54
- ನಮ್ಮ ಮಾಹಿತಿಯನ್ನು ಸುರಕ್ಷಿತವಾಗಿರಿಸುವುದು 57
- ಬಾಹ್ಯ ಸಂವಹನ & ಸಾಮಾಜಿಕ ಮಾಧ್ಯಮವನ್ನು ಬಳಸುವುದು 59

ನಮ್ಮ ಮೌಲ್ಯಗಳು 63

ನಮ್ಮ ನಾಯಕತ್ವ ನಡುವಳಿಕೆಗಳು 64

ಗ್ರೂ ಚೀಫ್ ಎಕ್ಸಿಕ್ಯುಟಿವ್ ಕೆನ್ ಮರ್ಫಿ ರ ಸಂದೇಶ

ನಮ್ಮ ವ್ಯವಹಾರ ನೀತಿ ಸಂಹಿತೆಯು ("COBC") ನಾವು ನಮ್ಮ ವ್ಯವಹಾರವನ್ನು ಹೇಗೆ ನಡೆಸುತ್ತೇವೆ ಎಂಬುದರ ಹೃದಯಭಾಗದಲ್ಲಿದೆ ಮತ್ತು ಅದನ್ನು ನಮಗೆ ಸಹಾಯ ಮಾಡಲು ಮತ್ತು ನಮ್ಮನ್ನು ರಕ್ಷಿಸಲು ವಿನ್ಯಾಸಗೊಳಿಸಲಾಗಿದೆ. ನಮ್ಮ ಸಹೋದ್ಯೋಗಿಗಳನ್ನು ನೋಡಿಕೊಳ್ಳುವ ಸಲುವಾಗಿ, ಗ್ರಾಹಕರಿಗಾಗಿ ಉತ್ತಮ ಕೆಲಸ ಮಾಡಲು ಮತ್ತು ನಮ್ಮ ಖ್ಯಾತಿಯನ್ನು ರಕ್ಷಿಸಿಕೊಳ್ಳಲು ನಾವೆಲ್ಲರೂ ಅವಶ್ಯವಾಗಿ ಅನುಸರಿಸಬೇಕಾದ ನಿಯಮಗಳನ್ನು, ಮತ್ತು ನಮ್ಮಿಂದ ಅಪೇಕ್ಷಿಸಲಾದ ವರ್ತನೆಯನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯ.

ನೀವು Tesco ಗೆ ಹೊಸತಾಗಿ ಸೇರಿರಲಿ ಅಥವಾ ನಮ್ಮ ವ್ಯವಹಾರಕ್ಕಾಗಿ ಯಾವುದಾದರು ಕೆಲ ಸಮಯದವರೆಗೆ ಕೆಲಸ ಮಾಡಿದ್ದಿರಲಿ, ದಯವಿಟ್ಟು ನಮ್ಮ ಸಂಹಿತೆಯನ್ನು ಅರ್ಥೈಸಿಕೊಳ್ಳಲು ಮತ್ತು ಅದು ನಿಮಗೆ ಹೇಗೆ ಅನ್ವಯಿಸುತ್ತದೆ ಎಂದು ಅರಿತುಕೊಳ್ಳಲು ತುಸು ಸಮಯ ತೆಗೆದುಕೊಳ್ಳಿ.

ನಮ್ಮ ಸಂಹಿತೆ ಎಂದರೆ ಸುಮ್ಮನೆ ಕಾನೂನು ಮತ್ತು ನಮ್ಮ ನೀತಿಗಳನ್ನು ಅನುಸರಿಸುವುದಕ್ಕಿಂತಲೂ ಹೆಚ್ಚಿನದು. ಇದು ನಾವು ಪರಸ್ಪರರೊಂದಿಗೆ ಮತ್ತು ವ್ಯವಹಾರದಲ್ಲಿ ಯಾವಾಗಲೂ ಸರಿಯಾದ ಕ್ರಮವನ್ನೇ ಕೈಗೊಳ್ಳಲು ನಮ್ಮ ಮೌಲ್ಯಗಳು ಮತ್ತು ನಾಯಕತ್ವ ನಡುವಳಿಕೆಗಳನ್ನು ನಮ್ಮ ವರ್ತನೆ ಮತ್ತು ನಿರ್ಧಾರ ಪ್ರಕ್ರಿಯೆಗೆ ಮಾರ್ಗದರ್ಶನ ನೀಡಲು ಬಳಸುವುದರ ಕುರಿತದ್ದಾಗಿದೆ.

ನಿಮಗೆ ಎಂದಾದರೂ ನಿಮ್ಮ ಸ್ವಂತ ನಡವಳಿಕೆಯ ಬಗ್ಗೆ ಅಥವಾ ಯಾರೋ ಇನ್ನೊಬ್ಬ ವ್ಯಕ್ತಿಯ ವರ್ತನೆಯ ಬಗ್ಗೆ ಕಳವಳಗಳು ಉಂಟಾದರೆ, ಈ ಕುರಿತು ನೀವು ನೇರವಾಗಿ ನಿಮ್ಮ ಲೈನ್ ಮ್ಯಾನೇಜರ್‌ರಿಂದ ಪ್ರಾರಂಭಿಸಿ, ನೀವು ವಿಶ್ವಾಸಹೊಂದಿರು ಯಾರದರೊಬ್ಬರೊಂದಿಗೆ ಮಾತನಾಡಬೇಕು. ಅಥವಾ ಪರ್ಯಾಯವಾಗಿ, ನೀವು ನಿಮ್ಮ ಜನತಾ ಸಹಭಾಗಿ ಅಥವಾ ಕಾನೂನು ತಂಡದೊಂದಿಗೆ ಮಾತನಾಡಿ. ನೀವು ನಿಮ್ಮ ಕಳವಳವನ್ನು ಅನಾಮಧೇಯರಾಗಿದ್ದು ಎತ್ತಬೇಕಾದರೆ, ನೀವು ಸಂಪೂರ್ಣ ಗುಪ್ತತೆಯ ವಿಶ್ವಾಸದೊಂದಿಗೆ ಪ್ರೊಟೆಕ್ಟರ್ ಲೈನ್‌ಗೆ Protector Line ಕರೆ ಮಾಡಬಹುದು.

ನಾವೆಲ್ಲರೂ ನಮ್ಮ ವ್ಯವಹಾರದ ಬಗ್ಗೆ ಮತ್ತು ನಾವು ನೀಡುವ ಕೊಡುಗೆಯ ಬಗ್ಗೆ ಹೆಮ್ಮೆ ಪಡಬೇಕು ಮತ್ತು ನಮ್ಮ ಸಂಹಿತೆ ಅನ್ನು ಆಚರಿಸುವ ಮೂಲಕ, ನಾವು ಭವಿಷ್ಯದಲ್ಲಿ ಇನ್ನೂ ಬಲವಾದ ವ್ಯವಹಾರವನ್ನು ನಿರ್ಮಿಸಬಹುದು.

ಡೇವ್ ಲೆವಿಸ್,
ಗ್ರೂಪ್ ಚೀಫ್ ಎಕ್ಸೆಕ್ಯುಟಿವ್

TESCO
Fruit and Veg

ಸಂಹಿತೆಯ ಆಚರಣೆ

ನಾವು ನಮ್ಮ ಎಲ್ಲ ಸಹೋದ್ಯೋಗಿಗಳಿಂದ ನಿರೀಕ್ಷಿಸುವುದೇನೆಂದರೆ:

- ಸಂಹಿತೆ ಮತ್ತು ಅದನ್ನು ಹೇಗೆ ಬಳಸುವುದು ಎಂದು ತಿಳಿಯುವುದು;
- 8-59 ಪುಟಗಳಲ್ಲಿರುವ ಸಂಹಿತೆ ಮಾರ್ಗದರ್ಶನವನ್ನು ಅನುಸರಿಸಿ. ಸಂಹಿತೆ ಮಾರ್ಗದರ್ಶನವು, ಇದರಲ್ಲಿ ಯಾವ ನೀತಿಗಳನ್ನು ಓದಬೇಕು ಮತ್ತು ನಿಮಗೆ ಪ್ರಶ್ನೆಗಳಿದ್ದರೆ ಯಾರೊಂದಿಗೆ ಮಾತನಾಡಬೇಕು ಎಂಬುದು ಸೇರಿದಂತೆ ನಿಮ್ಮ ಕೆಲಸದಲ್ಲಿ ನೀವು ಎದುರಿಸಬಹುದಾದ 21 ಮುಖ್ಯ ಸವಾಲುಗಳಿಗೆ ಸಂಬಂಧಿಸಿದಂತೆ ಸಲಹೆ ಮತ್ತು ಸಹಾಯವನ್ನು ಒದಗಿಸುತ್ತದೆ;
- ಸಂಕೀರ್ಣ ಸಮಸ್ಯೆಗಳನ್ನು ಹೇಗೆ ನಿಭಾಯಿಸಬೇಕು ಎಂಬ ಬಗ್ಗೆ ನೀವು ವಿಶ್ವಾಸ ಸಾಧಿಸಲು ಸಾಧ್ಯವಾಗುವಂತೆ ಸಂಹಿತೆ ತರಬೇತಿಯನ್ನು ಪೂರ್ಣಗೊಳಿಸುವುದು;
- ಏನು ಮಾಡಬೇಕೆಂದು ನಿಮಗೆ ಖಾತ್ರಿಯಿಲ್ಲದಿದ್ದರೆ ಸಹಾಯಕ್ಕಾಗಿ ಕೇಳುವುದು;
- ಯಾವಾಗಲೂ ನೀವು ಏನು ಮಾಡುತ್ತೀರಿ ಎಂಬುದನ್ನು ಪರಿಗಣಿಸುವಷ್ಟೇ ಗಂಭೀರವಾಗಿ "ಹೇಗೆ" ಮಾಡುತ್ತೀರಿ ಎಂಬುದನ್ನೂ ಪರಿಗಣಿಸುವುದು (ಪುಟ 61 ನೋಡಿ); ಮತ್ತು
- ನಿಮಗೆ ಎಂದಾದರೂ ಸಂಹಿತೆ ಭಂಗವಾಗಿದೆ ಅಥವಾ ನಮ್ಮ ಮೌಲ್ಯಗಳನ್ನು ಕಡೆಗಾಣಿಸಲಾಗಿದೆ ಎಂದೆನಿಸಿದರೆ ಎದ್ದು ಮಾತನಾಡುವುದು.

ನೀವು ಇತರ ಜನರನ್ನು ನಿರ್ವಹಿಸುತ್ತಿದ್ದರೆ, ನಾವು ನಿಮ್ಮಿಂದ ನಿರೀಕ್ಷಿಸುವುದೇನೆಂದರೆ:

- ತಂಡದ ಸದಸ್ಯರು ತಮ್ಮ ಪಾತ್ರಗಳಿಗೆ ಅಗತ್ಯವಾದ ಕೌಶಲ್ಯ ಮತ್ತು ತರಬೇತಿಯನ್ನು ಹೊಂದಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳುವ ಮೂಲಕ ಅವರನ್ನು ರಕ್ಷಿಸಬೇಕು;
- ಸವಾಲುಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಬೇಕು ಮತ್ತು ಕಾನೂನುಬಾಹಿರ, ಅನೈತಿಕವಾದಂತ ಅಥವಾ ಸಹೋದ್ಯೋಗಿಗಳಿಗೆ, ಗ್ರಾಹಕರಿಗೆ, ನಮ್ಮ ಬ್ರ್ಯಾಂಡಿಗೆ ಅಥವಾ ನಾವು ಸಮಾಜದಲ್ಲಿ ಕೆಲಸ ಮಾಡುವ ಆಸಕ್ತ ವ್ಯಕ್ತಿಗಳಿಗೆ ಹಾನಿಯನ್ನುಂಟುಮಾಡುವಂತವು ಸೇರಿದಂತೆ ಅನಗತ್ಯ ಸವಾಲುಗಳನ್ನು ಎಂದಿಗೂ ತೆಗೆದುಕೊಳ್ಳಬಾರದು, ಅಥವಾ ಇತರರನ್ನು ತೆಗೆದುಕೊಳ್ಳುವಂತೆ ಕೇಳಬಾರದು;
- ಸಂಹಿತೆಗೆ ಸಂಬಂಧಿಸಿದ ವಿಷಯಗಳಲ್ಲಿ ಸ್ಪಷ್ಟ ಮತ್ತು ಸ್ಥಿರವಾದ ನಾಯಕತ್ವವನ್ನು ಒದಗಿಸಬೇಕು;
- ಮೌಲ್ಯಗಳಿಂದ-ಚಾಲಿತವಾದ ನಡವಳಿಕೆಯನ್ನು ಪುರಸ್ಕಾರಿಸಬೇಕು ಮತ್ತು ನಿಮ್ಮ ತಂಡಗಳಲ್ಲಿ ಅಂತರ್ವೇಶನ ಮತ್ತು ಸಮಗ್ರತೆಯ ಸಂಸ್ಕೃತಿಯನ್ನು ಪೋಷಿಸಬೇಕು; ಮತ್ತು
- ಅನೈತಿಕ ನಡವಳಿಕೆಯನ್ನು ಪ್ರಶ್ನಿಸದೆ ಹಾದುಹೋಗಲು ಅನುಮತಿಸಬಾರದು ಮತ್ತು ಸ್ವತಃ ನಿಮಗೆ ತಪ್ಪು ಕಂಡುಬಂದರೆ ಅಥವಾ ಅದನ್ನು ಇತರರು ನಿಮ್ಮ ಗಮನಕ್ಕೆ ತಂದರೆ ಆ ಕುರಿತು ಕ್ರಮ ತೆಗೆದುಕೊಳ್ಳಬೇಕು.

ನಾನು ಹೇಗೆ ಮಾತನಾಡಬಹುದು?

ನಾನು ಯಾರೊಂದಿಗೆ ಮಾತನಾಡಬೇಕು?

- ನಾವು ಮಾಡುವ ಎಲ್ಲದರಲ್ಲೂ, ನಿಮ್ಮ ಲೈನ್ ಮ್ಯಾನೇಜರ್‌ರೊಂದಿಗೆ ಯಾವಾಗಲೂ ಮುಕ್ತ ಮತ್ತು ಪ್ರಾಮಾಣಿಕ ಸಂಬಂಧವನ್ನು ಹೊಂದಿರುವುದು ಬಹುಮುಖ್ಯ.
- ಇದರ ಅರ್ಥವೇನೆಂದರೆ ನಿಮ್ಮ ಲೈನ್ ಮ್ಯಾನೇಜರ್ – ಸ್ವತಃ ಅವರೇ ಸಂಹಿತೆಯನ್ನು ಉಲ್ಲಂಘಿಸಿದ್ದಾರೆ ಎಂದು ನೀವು ಭಾವಿಸದ ಹೊರತು – ನೀವು ಮಾತನಾಡಬೇಕಾದ ಮೊದಲು ವ್ಯಕ್ತಿಯಾಗಿರುತ್ತಾರೆ.
- ನಿಮ್ಮ ಲೈನ್ ಮ್ಯಾನೇಜರ್‌ರೊಂದಿಗ□ ಮಾತನಾಡಲು ನಿಮಗೆ ಸಾಧ್ಯವಾಗದಿದ್ದರೆ, ನಿಮ್ಮ ಜನ ತಂಡ ನಿಮ್ಮ ಸ್ಥಳೀಯ ಕಾನೂನು ನಿರ್ದೇಶಕರು ಅಥವಾ ನಿಮ್ಮ ಸ್ಥಳೀಯ ಭದ್ರತಾ ನಿರ್ದೇಶಕರೊಂದಿಗೆ ಮಾತನಾಡಬಹುದು.
- ಪರ್ಯಾಯವಾಗಿ, ನಿಮ್ಮ ಲೈನ್ ವ್ಯವಸ್ಥಾಪಕರು ನಿಮ್ಮ ಕಳಕಳಿಯನ್ನು ಪರಿಹರಿಸಿರದಿದ್ದರೆ ನೀವು ನಿಮ್ಮ ಸ್ವಂತ ವ್ಯವಹಾರ ಕಾರ್ಯದೊಳಗೆ ನಿಮ್ಮ ಕಳವಳವನ್ನು ಎತ್ತಬಹುದು.
- ನಿಮ್ಮ ಕಳವಳವನ್ನು ನೀವು ಸಂಪೂರ್ಣ ಗುಪ್ತತೆಯಲ್ಲಿ ಎತ್ತಬೇಕಾಗಿದ್ದರೆ, ನೀವು ನಿಮ್ಮ ಸ್ಥಳೀಯ ಪ್ರೊಟೆಕ್ಟರ್ ಲೈನ್ Protector Line ಅನ್ನು ಸಂಪರ್ಕಿಸಬಹುದು.

ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

- ಧ್ಯಾನಾಕರ್ಷಣ ನೀತಿ

ನಮ್ಮ ಪ್ರೊಟೆಕ್ಟರ್ ಲೈನ್ Protector Line ಕುರಿತು

ಪ್ರೊಟೆಕ್ಟರ್ ಲೈನ್ Protector Line ನಿಮಗೆ ಕೆಲಸದಲ್ಲಿನ ದುರ್ವರ್ತನೆಯ ಬಗ್ಗೆ ನಿಮ್ಮ ಕಳವಳವನ್ನು ಎತ್ತುವುದಕ್ಕೆ ಅವಕಾಶ ಕಲ್ಪಿಸುತ್ತದೆ. ನಿಮಗೆ ನಿಮ್ಮ ಮ್ಯಾನೇಜರ್ ಅಥವಾ ನಿಮ್ಮ ಜನ ತಂಡದೊಂದಿಗೆ ಮಾತನಾಡುವುದು ಸಾಧ್ಯವಿಲ್ಲ ಎಂದು ನಿಮಗೆ ಅನಿಸಿದರೆ, ನೀವು ಪ್ರೊಟೆಕ್ಟರ್ ಲೈನ್‌ಗೆ Protector Line ಕರೆ ಮಾಡಿ:

- ನೀವು ಕಾನೂನುಬಾಹಿರ, ಸಂಹಿತೆಯನ್ನು ಉಲ್ಲಂಘಿಸುತ್ತದೆ ಅಥವಾ ಕಂಪನಿಯ ನೀತಿಗೆ ವಿರುದ್ಧವಾಗಿದೆ ಅನಿಸುವ ಯಾವುದೇ ಸಂಗತಿಯ ಬಗ್ಗೆ ನಿಮ್ಮ ಯಾವುದೇ ಕಳವಳವನ್ನು ಎತ್ತಿರಿ.
- ಸಹೋದ್ಯೋಗಿಗಳಿಗೆ, ಗ್ರಾಹಕರಿಗೆ ಅಥವಾ ಸಾರ್ವಜನಿಕರಿಗೆ ಅಪಾಯಕರವಾಗಿದೆ ಎಂದು ನೀವು ಭಾವಿಸುವ ಯಾವುದೇ ಸಂಗತಿಯನ್ನು ವರದಿ ಮಾಡಿ.
- ಈ ವಿಷಯಗಳ ಬಗ್ಗೆ ಮಾಹಿತಿಯನ್ನು ಉದ್ದೇಶಪೂರ್ವಕವಾಗಿ ಮರೆಮಾಡಲಾಗುತ್ತಿದೆ ಎಂಬುದಾಗಿ ನೀವು ಹೊಂದಿರುವ ಯಾವುದೇ ಕಳವಳಗಳನ್ನು ಹಂಚಿಕೊಳ್ಳಿ.

ಪ್ರೊಟೆಕ್ಟರ್ ಲೈನ್ Protector Line ಸಂಪೂರ್ಣ ಗೌಪ್ಯವಾಗಿದೆ ಮತ್ತು ಅದು ಟೆಸ್ಕೊಗಾಗಿ ಒಂದು ಸ್ವತಂತ್ರ ಕಂಪನಿಯಿಂದ ನಡೆಸಲ್ಪಡುತ್ತದೆ. ನೀವು ಕರೆ ಮಾಡಿದಾಗ ನಿಮ್ಮ ಹೆಸರನ್ನು ನೀಡಬೇಕಾಗಿಲ್ಲ, ಆದರೂ ಒಂದು ವೇಳೆ ನೀವು ನೀಡಿದರೆ, ಪ್ರೊಟೆಕ್ಟರ್ ಲೈನ್ Protector Line ತಂಡಕ್ಕೆ ನಿಮಗೆ ಯಾವುದೇ ತನಿಖೆಯ ಫಲಿತಾಂಶದ ಕುರಿತು ಪ್ರಸಕ್ತ ಮಾಹಿತಿ ಒದಗಿಸಲು ಮತ್ತು ಅಗತ್ಯವಿದ್ದರೆ ಹೆಚ್ಚುವರಿ ಮಾಹಿತಿಗಾಗಿ ನಿಮ್ಮನ್ನು ಸಂಪರ್ಕಿಸಲು ಸಹ ಸಾಧ್ಯವಾಗುತ್ತದೆ.

ಒಂದು ವ್ಯವಹಾರವಾಗಿ ನಾವು ದೂರುಗಳ ಗೌಪ್ಯತೆಯನ್ನು ರಕ್ಷಿಸುವ ಯುಕೆ ಸಾರ್ವಜನಿಕ ಹಿತಾಸಕ್ತಿ ಪ್ರಕಟಣೆ ಕಾಯ್ದೆ 1998 Interest Disclosure Act 1998 (ಮತ್ತು ಅದಕ್ಕೆ ಸಮಾನವಾಗಿರುವ ವಿದೇಶಿ ಕಾನೂನು) ಗಳನ್ನು ಬೆಂಬಲಿಸುತ್ತೇವೆ. ಇದರರ್ಥ – ನೀವು ತಪ್ಪುಗ್ರಹಿಕೆಗೆ ಒಳಗಾಗಿ ವರ್ತಿಸಿದ್ದರೂ ಕೂಡ –ನೀವು ಸದ್ಭಾವನೆಯೊಂದಿಗೆ ವರ್ತಿಸಿದ್ದರೆ ಮತ್ತು ನಿಮ್ಮ ಕಳವಳಗಳು ಪ್ರಾಮಾಣಿಕವಾಗಿದ್ದರೆ, ನೀವು ಕಾನೂನುಬದ್ಧವಾಗಿ ಕಿರುಕುಳಕ್ಕೊಳಗಾಗುವಿಕೆಯಿಂದ ರಕ್ಷಿಸಲ್ಪಡುತ್ತೀರಿ ಮತ್ತು ಕಳವಳವನ್ನು ಎತ್ತಿದ ಪರಿಣಾಮವಾಗಿ, ನಿಮ್ಮ ಕೆಲಸವನ್ನು

ಕಳೆದುಕೊಳ್ಳುವುದು ಸೇರಿದಂತೆ, ಯಾವುದೇ ರೀತಿಯ ಪ್ರತೀಕಾರದ ಆತಂಕಕ್ಕೆ ಒಳಗಾಗುವುದಿಲ್ಲ.

ಗುಂಪಿನ ಸುತ್ತಲಿನ ಪ್ರೊಟೆಕ್ಟರ್ ಲೈನ್ Protector Line ಸಂಪರ್ಕಗಳು

ಪ್ರೊಟೆಕ್ಟರ್ ಲೈನ್ Protector Line	ಇಮೇಲ್ ವಿಳಾಸ	ದೂರವಾಣಿ ಸಂಖ್ಯೆ
UK/OneStop	protectorline@expolink.co.uk	0800 374199
ಐರ್ಲೆಂಡ್	tescoireland@expolink.co.uk	1800 567014
ಪೋಲೆಂಡ್	bezpiecznaliniatesco@tesco.pl	0800 255 290
ಜೆಕ್ ಗಣರಾಜ್ಯ	linka_ochrany@tesco-europe.com	800 114 477
ಸ್ಲೋವಾಕಿಯಾ	etickalinka@tesco-europe.com	0800 188404
ಹಂಗೇರಿ	hu_security@hu.tesco-europe.com	0680 33 00 22
ಭಾರತ (ಸ್ಟಾರ್ ಬಜಾರ್)	ethics.counsellor@trenthyper-tata.com	00 91 22 4974 2274
ಟೆಸ್ಕೊ ಬೆಂಗಳೂರು	protectorline.tescobengaluru@expolink.co.uk	00 0800 440 1286
ಥೈಲ್ಯಾಂಡ್	lotusprotectorline@oto.samartcorp.com	1800 019099
ಮಲೇಷ್ಯಾ	protectorline@tipoffs.com.sg	1800 806524
ಹಾಂಗ್ ಕಾಂಗ್*	tescois@expolink.co.uk	0800 930770
ಟೆಸ್ಕೊ ಬ್ಯಾಂಕ್	tescobank@expolink.co.uk	0800 374199
ಬುಕರ್	booker@expolink.co.uk	0800 374199
ಡನ್ನಂಬಿ	speakup@dunnhumby.com	ದೇಶದ ದೂರವಾಣಿ ಸಂಖ್ಯೆಗಳಿಗಾಗಿ iSite ನೋಡಿ

*ಸೂಚನೆ: ಹಬ್ ಮತ್ತು ಹಬ್-ಯೇತರ ಸ್ಥಳಗಳಿಗೆ ಪ್ರತ್ಯೇಕ ದೂರವಾಣಿ ಸಂಖ್ಯೆಗಳಿವೆ

TESCO
Vinny

ಸಂಹಿತೆ ಮಾರ್ಗದರ್ಶನ

ಮುಂದಿನ ಪುಟಗಳು ನಿಮಗೆ ನಿಮ್ಮ ಕೆಲಸದಲ್ಲಿ ನೀವು ಎದುರಿಸಬಹುದಾದ 21 ಮುಖ್ಯ ಅಪಾಯಗಳನ್ನು ಎದುರಿಸಲು ಸಲಹೆ ಮತ್ತು ಸಹಾಯವನ್ನು ನೀಡುತ್ತವೆ. ಪ್ರತಿಯೊಂದು ವಿಭಾಗವು ಒಂದು ಪ್ರಶ್ನೋತ್ತರ, ಒಂದು ಸಂಬಂಧಿತ ನೀತಿಗಳ ಪಟ್ಟಿ ಮತ್ತು ಸಹಾಯಕ್ಕಾಗಿ ಯಾವ ತಂಡಗಳನ್ನು ಸಂಪರ್ಕಿಸಬೇಕು ಎಂಬುದನ್ನು ಹೊಂದಿರುತ್ತದೆ.

ಅಪಾಯಗಳನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿದೆ.

ನಮ್ಮ ಗ್ರಾಹಕರನ್ನು ಕಾಳಜಿಯಿಂದ ನೋಡಿಕೊಳ್ಳುವುದು ಪುಟ 12

ಒಟ್ಟಿಗೆ ಕೆಲಸ ಮಾಡುವುದು ಪುಟ 20

ನ್ಯಾಯೋಚಿತವಾಗಿ ವ್ಯವಹರಿಸುವುದು ಪುಟ 28

ನಮ್ಮ ಖ್ಯಾತಿಯ ರಕ್ಷಣೆ ಪುಟ 40

1. ನಮ್ಮ ಗ್ರಾಹಕರನ್ನು ಕಾಳಜಿಯಿಂದ ನೋಡಿಕೊಳ್ಳುವುದು

ನಮ್ಮ ಮೌಲ್ಯವಾದ "ಗ್ರಾಹಕರಿಗಾಗಿ ಬೇರಾರೂ ನಮಗಿಂತ ಕಷ್ಟಪಟ್ಟು ಪ್ರಯತ್ನಿಸುವುದಿಲ್ಲ" ಇದು ನಮ್ಮ ಯಶಸ್ಸಿಗೆ ಕೇಂದ್ರೀಯವಾಗಿದೆ ಮತ್ತು ನಮ್ಮ ಗ್ರಾಹಕರನ್ನು ಅರ್ಥಮಾಡಿಕೊಳ್ಳಲು ಮತ್ತು ಪ್ರತಿದಿನ ಅವರಿಗೆ ಸೇವೆ ನೀಡುವುದಕ್ಕೆ ನಮ್ಮನ್ನು ಪ್ರೋತ್ಸಾಹಿಸುತ್ತದೆ.

ಸಂಹಿತೆಯ ಈ ವಿಭಾಗವು ಗ್ರಾಹಕರಿಗೆ ಸ್ಪಷ್ಟ ಬೆಲೆ ಸಂದೇಶಗಳನ್ನು ನೀಡುವುದಕ್ಕೆ ಮತ್ತು ಅವರ ಮಾಹಿತಿ ಡೇಟಾವನ್ನು ರಕ್ಷಿಸುವುದಕ್ಕೆ ಸಂಬಂಧಿಸಿದ ಸಂಗತಿಗಳನ್ನು ಒಳಗೊಂಡಿದೆ.

ಸ್ಪಷ್ಟ ಬೆಲೆಗಳು & ಮಾರ್ಕೆಟಿಂಗ್ ಪುಟ 14

ಆಹಾರ & ಉತ್ಪನ್ನದ ಮಾನದಂಡಗಳು ಪುಟ 16

ಗ್ರಾಹಕ ಮತ್ತು ಸಹೋದ್ಯೋಗಿ ಡೇಟಾ ರಕ್ಷಣೆ ಪುಟ 18

ಸ್ಪಷ್ಟ ಬೆಲೆಗಳು & ಮಾರ್ಕೆಟಿಂಗ್

ಅದು ಏಕೆ ಮುಖ್ಯ?

ನಮ್ಮ ಗ್ರಾಹಕರೊಂದಿಗೆ ನಾವು ಮಾತನಾಡಲು ಬಳಸುವ ಅತ್ಯಂತ ಶಕ್ತಿಶಾಲಿ ಮಾರ್ಗಗಳೆಂದರೆ ಜಾಹೀರಾತು ಮತ್ತು ಮಾರ್ಕೆಟಿಂಗ್. ಗ್ರಾಹಕರು ನಮ್ಮ ಉತ್ಪನ್ನಗಳು ಮತ್ತು ಬೆಲೆಗಳ ಬಗ್ಗೆ ಸ್ಪಷ್ಟವಾದ ಸಂವಹನಗಳು ತಮಗೆ ಬಹುಮುಖ್ಯವೆಂದು ನಮಗೆ ಹೇಳುತ್ತಾರೆ. ದೂರದರ್ಶನ ಅಥವಾ ಮುದ್ರಣ ಜಾಹೀರಾತಿನ ಮೂಲಕವಾಗಲಿ, ಕ್ಲಬ್ ಕಾರ್ಡ್ ಅಂಚೆಗಳು, ಆನ್‌ಲೈನ್ ಸಂದೇಶಗಳು ಅಥವಾ ಮಾರಾಟದ ತಾಣಗಳಲ್ಲಿ ಆಗಿರಲಿ, ನಮ್ಮ ಸಂದೇಶಗಳು ನಮ್ಮ ಗ್ರಾಹಕರಿಗೆ ಅವರು ಎಲ್ಲಿ, ಹೇಗೆ ಮತ್ತು ಏಕೆ ನಮ್ಮೊಂದಿಗೆ ಖರೀದಿ ಮಾಡಲು ಆಯ್ಕೆ ಮಾಡುತ್ತಾರೆ ಎಂಬ ಬಗ್ಗೆ ನಿರ್ಧಾರಗಳನ್ನು ಕೈಗೊಳ್ಳುವುದರ ಮೇಲೆ ಪ್ರಭಾವ ಬೀರುತ್ತವೆ.

ನಾವು ನಮ್ಮ ಸಂದೇಶಗಳಲ್ಲಿ ತಪ್ಪು ಮಾಡಿದರೆ, ನಾವು ಗ್ರಾಹಕರನ್ನು ಅಸಮಾಧಾನಗೊಳಿಸುತ್ತೇವೆ ಮತ್ತು ನಿಯಂತ್ರಕ ಅಧಿಕಾರಿಗಳ ಮತ್ತು ಮಾಧ್ಯಮದ ಗಮನವನ್ನು ನಮ್ಮೆಡೆ ಸೆಳೆಯಬಹುದು. ನಾವು ಕಾರ್ಯನಿರ್ವಹಿಸುವ ಅನೇಕ ಮಾರುಕಟ್ಟೆಗಳಲ್ಲಿ ಜಾಹೀರಾತು ಮತ್ತು ಬೆಲೆ ಮಾನದಂಡಗಳನ್ನು ನಿಯಂತ್ರಿಸಲಾಗುತ್ತದೆ ಮತ್ತು ನಾವೇನಾದರೂ ಗ್ರಾಹಕರನ್ನು ದಾರಿ ತಪ್ಪಿಸುತ್ತಿರುವುದಾಗಿ ಕಂಡುಬಂದರೆ ನಾವು ದಂಡವನ್ನು ಎದುರಿಸಬಹುದು ಮತ್ತು ಗ್ರಾಹಕರ ವಿಶ್ವಾಸವನ್ನು ಕಳೆದುಕೊಳ್ಳಬಹುದು. ಆದ್ದರಿಂದ ನಮ್ಮ ಉತ್ಪನ್ನಗಳ ಬಗ್ಗೆ ನಾವು ಹೇಳುವ ಎಲ್ಲವೂ ನಿಜವಾಗಿರಬೇಕು – ಮತ್ತು, ನಾವು ಉತ್ತಮ ಬೆಲೆ ನೀಡುತ್ತಿದ್ದೇವೆ ಎಂದು ನಾವು ಹೇಳಿದರೆ, ಅದು ಕೇವಲ ಅದೇ ಆಗಿರಬೇಕು. ನಾವು ನಮ್ಮ ಸಂದೇಶಗಳನ್ನು ಸರಿಯಾಗಿ ನೀಡುವುದು ಗ್ರಾಹಕರು ನಮ್ಮಲ್ಲಿ ಇಡುವ ನಂಬಿಕೆಯ ಮೇಲೆ ನೇರವಾಗಿ ಪ್ರಭಾವ ಬೀರುತ್ತದೆ.

ನನ್ನ ಕುರಿತಂತೆ ಇದು ಏನು ಅರ್ಥ ನೀಡುತ್ತದೆ?

- ನೀವು ಯಾವುದಾದರು ಮಾರ್ಕೆಟಿಂಗ್ ಚಟುವಟಿಕೆಯಲ್ಲಿ ತೊಡಗಿದ್ದರೆ, ನಿಮ್ಮ ಎಲ್ಲ ಸಂದೇಶಗಳು ಪ್ರಾಮಾಣಿಕ, ನಿಖರ ಮತ್ತು ನ್ಯಾಯಸಮ್ಮತವಾಗಿಎಂಬುದಾಗಿ ಖಚಿತಪಡಿಸಿಕೊಳ್ಳಿ. ಬಹುಪಾಲು ಸಮಯ ನಾವು ಜಾಹೀರಾತಿನಲ್ಲಿ ನೀಡುವ ಸಾರಿಕೆಗಳನ್ನು ಸಮರ್ಥಿಸಬೇಕಾದ ಅವಶ್ಯಕತೆಯಿರುತ್ತದೆ.
- ಪ್ರಚಾರಗಳು ಮತ್ತು ಬೆಲೆಗಳನ್ನು ಸರಳವಾಗಿಡಿ: ಸಂಕೀರ್ಣ ಬೆಲೆ ಪ್ರಚಾರಗಳು ಮತ್ತು ಆಗಾಗ್ಗೆ ಬೆಲೆ ಬದಲಾವಣೆಗಳನ್ನು ತಪ್ಪಿಸಿ.
- ಎಲ್ಲ ಸಂದೇಶಗಳು ಜವಾಬ್ದಾರಯುತವಾಗಿವೆ ಎಂದು ಖಚಿತಪಡಿಸಿಕೊಳ್ಳಿ; ನಮ್ಮ ಜಾಹೀರಾತಿನಿಂದ ಎಂದಿಗೂ ಯಾವುದೇ ಗ್ರಾಹಕರು ನೊಂದುಕೊಳ್ಳಬಾರದು. ಮದ್ಯ ಜಾಹೀರಾತು ಮಾಡುವಾಗ ಇದು ವಿಶೇಷವಾಗಿ ಮುಖ್ಯವಾಗಿರುತ್ತದೆ.
- ನಿಮ್ಮ ಜಾಹೀರಾತು ನಿಮ್ಮ ಉತ್ಪನ್ನಗಳಿಗೆ ಸರಿಹೊಂದುತ್ತವೆ ಎಂಬುದಾಗಿ ಖಚಿತಪಡಿಸಿಕೊಳ್ಳಿ – ಎಲ್ಲ ಚಿತ್ರಗಳನ್ನು ಅವು ನೈಜವಾದಂತವು ಮತ್ತು ನಾವು ಮಾರಾಟ ಮಾಡುವ ಉತ್ಪನ್ನಗಳನ್ನು ಪ್ರತಿಬಿಂಬಿಸುತ್ತವೆ ಎಂಬುದಾಗಿ ಮೌಲ್ಯೀಕರಿಸಿ.
- ಒಬ್ಬ ಸರಬರಾಜುದಾರ ಅಥವಾ ಪ್ರತಿಸ್ಪರ್ಧಿಯಂತಹ ಯಾವುದೇ ತೃತೀಯ ಪಕ್ಷದ ಕುರಿತು ಎಂದಿಗೂ ಸುಳ್ಳು ಮಾರ್ಕೆಟಿಂಗ್ ಸಾರಿಕೆಗಳನ್ನು ನೀಡಬೇಡಿ.

ಪ್ರಶ್ನೆಗಳು & ಉತ್ತರಗಳು

Q ನಾನು ಒಂದು ಚಿಲಿಯ ವೈನ್ ಪ್ರಚಾರವನ್ನು ಯೋಜಿಸುತ್ತಿದ್ದೇನೆ ಮತ್ತು ಪೋಸ್ಟರ್‌ಗಳಿಗಾಗಿ ಒಂದು ದ್ರಾಕ್ಷಿತೋಟದ ಚಿತ್ರವನ್ನು ಬಳಸುತ್ತಿದ್ದೇನೆ. ಫೋಟೋ ಲೈಬ್ರರಿಯಲ್ಲಿ ನಾವು ಎಂದಿಗೂ ಬಳಸಿರದ ಒಂದು ಅರ್ಜೆಂಟೀನಾದ ದ್ರಾಕ್ಷಿತೋಟದ ಒಂದು ಉತ್ತಮ ಶಾಟ್ ಅನ್ನು ಹೊಂದಿದ್ದೇವೆ. ನನ್ನ ಪ್ರಚಾರಾಭಿಯಾನದಲ್ಲಿ ನಾನು ಅದನ್ನು ಬಳಸಬಹುದೇ?

A ಇಲ್ಲ. ನಿಮ್ಮ ಚಿತ್ರಗಳು ನೀವು ಜಾಹೀರಾತು ನೀಡುವ ಉತ್ಪನ್ನವನ್ನು ನಿಖರವಾಗಿ ಪ್ರತಿಬಿಂಬಿಸುತ್ತಿರಬೇಕು. ನೀವು ಛಾಯಾಚಿತ್ರವನ್ನು ನೀವು ಪ್ರೋತ್ಸಾಹಿಸುತ್ತಿರುವ ವೈನ್ ಅನ್ನು ಉತ್ಪಾದಿಸುವ ಚಿಲಿಯ ದ್ರಾಕ್ಷಿತೋಟದಿಂದಲೇ ಪಡೆಯಬೇಕಾಗುತ್ತದೆ.

Q ವೆಬ್ ಆಧಾರಿತ ಜಾಹೀರಾತಿಗೆ ಯಾವ ನಿಯಮಗಳು ಅನ್ವಯಿಸುತ್ತವೆ?

A ಬೇರೆ ಯಾವುದೇ ಜಾಹೀರಾತಿನ ರೀತಿಯೇ. ಸಂದೇಶಗಳು ನಿಖರವಾಗಿರಬೇಕು, ಸ್ಪಷ್ಟವಾಗಿರಬೇಕು ಮತ್ತು ದಾರಿತಪ್ಪಿಸುವಂತಿರಬಾರದು.

Q ಕೆಲವು ಉತ್ಪನ್ನಗಳ ಸಂದರ್ಭದಲ್ಲಿ ಅವುಗಳ ಬೆಲೆ ಅವು ಪ್ರಚಾರಕ್ಕೆ ಹೋಗುವ ತುಸು ಮುನ್ನವೇ ಹೆಚ್ಚುತ್ತಿದೆ ಎಂದು ನಾನು ಗಮನಿಸಿದ್ದೇನೆ. ಇದನ್ನು ಅನುಮತಿಸಲಾಗಿದೆಯೇ?

A ಅನೇಕ ಮಾರುಕಟ್ಟೆಗಳಲ್ಲಿ ಉತ್ಪನ್ನಗಳನ್ನು ಪ್ರಚಾರಾರ್ಥವಾಗಿ ಮಾರಾಟ ಮಾಡುವಾಗಲೆಲ್ಲಾ ಪಾಲಿಸಬೇಕಾದ ಕಟ್ಟುನಿಟ್ಟಾದ ನಿಯಮಗಳಿರುತ್ತವೆ. ನಿಮ್ಮ ಸ್ಥಳೀಯ ಕಾನೂನು ಅಥವಾ ವ್ಯಾಪಾರ ಕಾನೂನು ತಂಡಗಳು ನಿಮಗೆ ಈ ನಿಯಮಗಳು ನಿಮ್ಮ ಮಾರುಕಟ್ಟೆಯಲ್ಲಿ ಹೇಗೆ ಅನ್ವಯವಾಗುತ್ತವೆ ಎಂಬುದರ ಕುರಿತು ಸಲಹೆ ನೀಡಬಹುದು.

Q ನನ್ನ ಮಗುವಿನ ಪ್ರಾಥಮಿಕ ಶಾಲೆಯ ಪಕ್ಕದಲ್ಲಿ ಒಂದು ಎಕ್ಸ್ ಪ್ರೆಸ್ ಸ್ಟೋರ್‌ಯಿದೆ ಮತ್ತು ಅವರು ಒಂದು ಹೊಸ ಹಿಂಸಾತ್ಮಕ ಸಮರ ಕಲೆಗಳ ಎಕ್ಸ್-ಬಾಕ್ಸ್ ಆಟದ ಪ್ರಾರಂಭವನ್ನು ಜಾಹೀರಾತು ಮಾಡಲು ಪೋಸ್ಟರ್ ಒಂದನ್ನು ಹಾಕಿದ್ದಾರೆ. ಖಂಡಿತವಾಗಿ, ಬಹಳಷ್ಟು ಸಣ್ಣ ಮಕ್ಕಳು ಅದನ್ನು ನೋಡಬಹುದಾದಂತ ಸ್ಥಳದಲ್ಲಿ ಹಿಂಸಾಚಾರವನ್ನು ಜಾಹೀರಾತು ಮಾಡುವುದು ತಪ್ಪಲ್ಲವೇ?

A ನಾವು ಎಂದಿಗೂ ಜಾಹೀರಾತನ್ನು ಮನನೋಯಿಸುವುದಕ್ಕೆ ಕಾರಣವಾಗುವಂತ ಅಥವಾ ಮಕ್ಕಳಿಗೆ ಹಾನಿಕಾರಕವಾಗಬಹುದಾದಂತ ಸ್ಥಳದಲ್ಲಿ ಪ್ರದರ್ಶಿಸಲು ಬಯಸುವುದಿಲ್ಲ. ನೀವು ಮಾತನಾಡಿ ನಿಮ್ಮ ಕಳವಳವನ್ನು ನಿಮ್ಮ ಲೈನ್ ಮ್ಯಾನೇಜರ್‌ರೊಂದಿಗೆ, ವ್ಯಾಪಾರ ಕಾನೂನು ಅಥವಾ ಕಾನೂನು ತಂಡಗಳೊಂದಿಗೆ ಹಂಚಿಕೊಳ್ಳಬೇಕು.

ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

- ಯುಕೆ ಕಾನೂನು ಗ್ರಾಹಕ ತಂಡ ಅಥವಾ ಸ್ಥಳೀಯ ಕಾನೂನು ತಂಡ
- ಸ್ಥಳೀಯ ವ್ಯಾಪಾರ ಕಾನೂನು ತಂಡ (ಯುಕೆ ಹೊರಗೆ)

ಆಹಾರ & ಉತ್ಪನ್ನದ ಮಾನದಂಡಗಳು

ಅದು ಏಕೆ ಮುಖ್ಯ?

ನಮ್ಮ ಗ್ರಾಹಕರು ನಾವು ಕೇವಲ ಉತ್ತಮ ಗುಣಮಟ್ಟದೊಂದಿಗೆ ತಯಾರಿಸಿದ ಉತ್ಪನ್ನಗಳನ್ನು ಮಾತ್ರ ಮಾರಾಟ ಮಾಡಬೇಕೆಂದು ನಿರೀಕ್ಷಿಸುತ್ತಾರೆ ಮತ್ತು ನಮ್ಮ ಎಲ್ಲಾ ಉತ್ಪನ್ನಗಳು ಸುರಕ್ಷಿತವಾಗಿದೆಯೆ ಎಂದು ನಾವು ಖಚಿತಪಡಿಸಿಕೊಳ್ಳುತ್ತೇವೆ ಮತ್ತು ಅನ್ವಯವಾಗುವ ಎಲ್ಲಾ ಕಾನೂನು ಮತ್ತು ನಿಬಂಧನೆಗಳನ್ನು ನಾವು ಅನುಸರಿಸುತ್ತೇವೆ ಎಂದು ಅವರು ನಮ್ಮನ್ನು ನಂಬುತ್ತಾರೆ. ನಾವು ವಿತರಣೆಯನ್ನು ಪಡೆದುಕೊಂಡ ಕ್ಷಣದಿಂದ ಅವುಗಳನ್ನು ನಮ್ಮ ಗ್ರಾಹಕರು ಖರೀದಿಸುವ ಸಮಯದವರೆಗೆ ನಮ್ಮ ಎಲ್ಲ ಉತ್ಪನ್ನಗಳ ಸುರಕ್ಷತೆ ಮತ್ತು ಗುಣಮಟ್ಟವನ್ನು ಖಚಿತಪಡಿಸಿಕೊಳ್ಳಲು ನಾವು ಬದ್ಧರಾಗಿದ್ದೇವೆ.

ನಮ್ಮ ರೈತರು ಮತ್ತು ಪೂರೈಕೆದಾರರೊಂದಿಗೆ ಉತ್ತಮ ಸಂಬಂಧಗಳನ್ನು ಬೆಳೆಸಲು ಮತ್ತು ನಾವು ಪಡೆದುಕೊಳ್ಳುವ ಎಲ್ಲಾ ಉತ್ಪನ್ನಗಳು ಸುರಕ್ಷಿತವಾಗಿರುತ್ತವೆ, ಕಾನೂನುಬದ್ಧವಾಗಿರುತ್ತವೆ ಮತ್ತು ನಮ್ಮ ಕಟ್ಟುನಿಟ್ಟಿನ ಗುಣಮಟ್ಟದ ಮಾನದಂಡಗಳನ್ನು ಪೂರೈಸುತ್ತವೆ ಎಂಬುದನ್ನು ಖಚಿತಪಡಿಸಿಕೊಳ್ಳುವುದಕ್ಕೆ ಸಹಾಯ ಮಾಡಲು ನಾವು ನಮ್ಮ ಪೂರೈಕೆ ಸರಪಳಿಯನ್ನು ಸರಳೀಕರಿಸಿದ್ದೇವೆ.

ನಮ್ಮ ಮಳಿಗೆಗಳು ಮತ್ತು ವಿತರಣ□ ಕೇಂದ್ರಗಳಲ್ಲಿ ನಾವು ಸುಸ್ಥಾಪಿತ ಮತ್ತು ಸಮಗ್ರ ಆಹಾರ ಸುರಕ್ಷತಾ ನಿರ್ವಹಣಾ ವ್ಯವಸ್ಥೆಯನ್ನು ಹೊಂದಿದ್ದೇವೆ. ನಮ್ಮ ಮಾನದಂಡಗಳನ್ನು ಕಾಯ್ದುಕೊಳ್ಳಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ನಾವು ಪ್ರತಿದಿನ ನಮ್ಮ ಆಹಾರದ ಗುಣಮಟ್ಟ ಮತ್ತು ಸುರಕ್ಷತೆಯ ಮೇಲ್ವಿಚಾರಣೆ ಮಾಡುತ್ತೇವೆ ಮತ್ತು ಪರಿಶೀಲಿಸುತ್ತೇವೆ. ಅಂತಹ ತಪಾಸಣೆಗಳಲ್ಲಿ ನಮ್ಮ ಉತ್ಪನ್ನಗಳ ತಾಪಮಾನ, ವೈಯಕ್ತಿಕ ನೈರ್ಮಲ್ಯ, ನಮ್ಮ ಮಳಿಗೆಗಳು ಮತ್ತು ಸಲಕರಣೆಗಳ ಸ್ವಚ್ಛತೆ, ಆಹಾರವನ್ನು ಕಶ್ಮಲೀಕರಣದಿಂದ ರಕ್ಷಿಸುವುದು ಮತ್ತು ನಮ್ಮ ಆಹಾರ ಉತ್ಪನ್ನಗಳ ಆವರ್ತನದ ನಿರ್ವಹಣೆಗಳು ಸೇರಿವೆ.

ನನ್ನ ಕುರಿತಂತೆ ಇದು ಏನು ಅರ್ಥ ನೀಡುತ್ತದೆ?

- ನಮ್ಮ ಪೂರೈಕೆದಾರರು ನಮ್ಮ ಉತ್ಪನ್ನ ಸುರಕ್ಷತಾ ಮತ್ತು ಗುಣಮಟ್ಟದ ಮಾನದಂಡಗಳನ್ನು ಪೂರೈಸುತ್ತಾರೆಯೇ ಮತ್ತು ಉತ್ಪನ್ನ ಸುರಕ್ಷತಾ, ಗುಣಮಟ್ಟ ಮತ್ತು ಕಾನೂನುಬದ್ಧತೆಯನ್ನು ಕಾಯ್ದುಕೊಳ್ಳುವುದರ ಕುರಿತ ನಮ್ಮ ನೀತಿಗಳನ್ನು ಅನುಸರಿಸುತ್ತಾರೆಯೇ ಎಂದು ಖಚಿತಪಡಿಸಿಕೊಳ್ಳಿ.
- ನಮ್ಮ ಪೂರೈಕೆ ಸರಪಳಿಯಲ್ಲಿ ಗಮನಕ್ಕೆ ಬರುವ ಯಾವುದೇ ವಂಚನೆಯ ಪ್ರಕರಣಗಳು ಅಥವಾ ಅನುಮಾನಗಳನ್ನು ವರದಿ ಮಾಡಿ.
- ನಮ್ಮ ಖ್ಯಾತಿಯನ್ನು ರಕ್ಷಿಸಿ ಮತ್ತು ನಮ್ಮ ಉತ್ಪನ್ನಗಳು ಸುರಕ್ಷಿತ ಮತ್ತು ಜವಾಬ್ದಾರಿಯುತವಾಗಿ ಆಯ್ದಂತವಾಗಿರುತ್ತವೆ ಎಂಬ ನಮ್ಮ ಗ್ರಾಹಕರ ಭರವಸೆಯನ್ನು ಕಾಪಾಡಿಕೊಳ್ಳಿ.
- ನಮ್ಮ ಪೂರೈಕೆ ಸರಪಳಿಯಲ್ಲಿ ಉತ್ಪನ್ನಗಳ ಮೂಲವನ್ನು ಸಂಪೂರ್ಣವಾಗಿ ಜಾಡುಹಿಡಿಯಬಹುದು ಎಂಬುದನ್ನು ನಾವು ಖಚಿತವಾಗಿ ಹೇಳಬಹುದಾಗುವಂತೆ ನಾವು ಯಾರಿಂದ ಖರೀದಿಸುತ್ತೇವೆಂಬುದನ್ನು ತಿಳಿದುಕೊಳ್ಳಿ ಮತ್ತು ನಾವು ಮಾರಾಟ ಮಾಡುವ ಪ್ರತಿಯೊಂದು ಉತ್ಪನ್ನವನ್ನು ಎಚ್ಚರಿಕೆಯಿಂದ ಮೌಲ್ಯಮಾಪನ ಮಾಡಿ.
- ನೀವು ಒಬ್ಬ ಮಳಿಗೆ ಅಥವಾ ವಿತರಣಾ ಸಹೋದ್ಯೋಗಿಯಾಗಿದ್ದರೆ, ನೀವು ಎಲ್ಲ ಆಹಾರ ಸುರಕ್ಷತಾ ಮತ್ತು ನೈರ್ಮಲ್ಯ ತರಬೇತಿ ಮತ್ತು ಪುನರ್ಮನನ ತರಬೇತಿಯನ್ನು ಪೂರ್ಣಗೊಳಿಸಿದ್ದೀರಿ ಎಂಬುದನ್ನು ಖಚಿತಪಡಿಸಿಕೊಳ್ಳಿ ಮತ್ತು ಎಲ್ಲ ಉತ್ಪನ್ನಗಳನ್ನು ಸರಿಯಾದ ತಾಪಮಾನದಲ್ಲಿ ಶೇಖರಿಸಲು ಮತ್ತು ಮಾಲಿನ್ಯದಿಂದ ರಕ್ಷಿಸಲು ಕ್ರಮ ತೆಗೆದುಕೊಳ್ಳಿ. ನೀವೇನಾದರು ಕಳಪೆ ಗುಣಮಟ್ಟದ ಅಥವಾ ಅಸುರಕ್ಷಿತ ಉತ್ಪನ್ನಗಳನ್ನು ನೋಡಿದರೆ, ಅವುಗಳನ್ನು ಮಾರಾಟದಿಂದ ತೆಗೆದುಹಾಕುವುದನ್ನು ಖಚಿತಪಡಿಸಿಕೊಳ್ಳಿ.

ಪ್ರಶ್ನೆಗಳು & ಉತ್ತರಗಳು

Q ಪೂರೈಕೆದಾರನೊಬ್ಬ ಟೆಸ್ಕೊ ಉತ್ಪನ್ನಗಳಲ್ಲಿ ಒದಗಿಸಬೇಕಾದ ಪದಾರ್ಥಗಳನ್ನು ಅಗ್ಗದ, ಕಳಪೆ ಗುಣಮಟ್ಟದ ಪರ್ಯಾಯಗಳಿಂದ ಬದಲಿಸುತ್ತಿರಬಹುದು ಎಂದು ನನಗೆ ಕಳವಳವಿದೆ. ನಾನು ಏನು ಮಾಡಬೇಕು?

A **ನೀವು ತಕ್ಷಣ ನಿಮ್ಮ ಕಳವಳಗಳನ್ನು ನಿಮ್ಮ ಲೈನ್ ಮ್ಯಾನೇಜರ್, ಉತ್ಪನ್ನ ತಾಂತ್ರಿಕ ವ್ಯವಸ್ಥಾಪಕ, ನಿಮ್ಮ ಉತ್ಪನ್ನ ನಿಯಂತ್ರಣ ಅನುಸರಣಾ ತಂಡ ಅಥವಾ ಸ್ಥಳೀಯ ವ್ಯಾಪಾರ ಕಾನೂನು ತಂಡ (ಯುಕೆ ಹೊರಗೆ) ಗಳೊಂದಿಗೆ ವ್ಯಕ್ತಪಡಿಸಬೇಕು. ಕಳವಳವು ಆಧಾರರಹಿತವಾಗಿದೆ ಎಂದು ಸಾಬೀತಾದರೂ, ಆ ಬಗ್ಗೆ ನೀವು ಮಾತನಾಡುವುದು ಮುಖ್ಯ.**

Q ನಾನು ಒಂದು ಹೊಸ ಸ್ವಂತ ಬ್ರಾಂಡ್ ಉತ್ಪನ್ನಕ್ಕಾಗಿ ಒಬ್ಬ ಹೊಸ ಪೂರೈಕೆದಾರರನ್ನು ಪಟ್ಟಿಗೆ ಸೇರಿಸಲು ನೋಡುತ್ತಿದ್ದೇನೆ. ನಮ್ಮ ಪೂರೈಕೆದಾರರು ನಮಗೆ ಸರಬರಾಜು ಮಾಡುವ ಮೊದಲು ಉತ್ಪನ್ನದ ಗುಣಮಟ್ಟ, ಸುರಕ್ಷತೆ ಮತ್ತು ಕಾನೂನುಬದ್ಧತೆಗಾಗಿ ಯಾವ ಮಾನದಂಡಗಳನ್ನು ಪೂರೈಸಬೇಕು?

A **ಟೆಸ್ಕೊ ಬ್ರಾಂಡ್‌ಗಳಿಗೆ ಉತ್ಪನ್ನಗಳನ್ನು ತಯಾರಿಸುವಾಗ ನಮ್ಮ ಪೂರೈಕೆದಾರರು ಸಾಧಿಸಬೇಕೆಂದು ನಾವು ಬಯಸುವ ಟೆಸ್ಕೊ ಉತ್ಪಾದನೆ ಮತ್ತು ಸಂಗ್ರಹಣೆ ಮಾನದಂಡಗಳನ್ನು ನಾವು ಸ್ಪಷ್ಟವಾಗಿ ವ್ಯಾಖ್ಯಾನಿಸಿದ್ದೇವೆ. ಉತ್ಪಾದನೆಗೆ ಮೊದಲು ನಾವು ಈ ಮಾನದಂಡಗಳನ್ನು ಪೂರೈಸಲಾಗಿದೆಯೆ ಎಂದು ಪರಿಶೀಲಿಸಲು ತಾಣಗಳಿಗೆ ಭೇಟಿ ನೀಡುತ್ತೇವೆ ಮತ್ತು ಅನುಮೋದಿಸುತ್ತೇವೆ. ಹೆಚ್ಚಿನ ಮಾಹಿತಿಗಾಗಿ ನಿಮ್ಮ ಸ್ಥಳೀಯ ಉತ್ಪನ್ನ ನಿಯಂತ್ರಣ ಅನುಸರಣಾ ತಂಡ ಅಥವಾ ತಾಂತ್ರಿಕ ತಂಡದೊಂದಿಗೆ ಮಾತನಾಡಿ.**

Q ನಾವು ಉತ್ಪನ್ನದ ಗುಣಮಟ್ಟ, ಸುರಕ್ಷತೆ ಮತ್ತು ಕಾನೂನುಬದ್ಧತೆಯನ್ನು ನಿರ್ವಹಿಸಬೇಕಾದ ಪ್ರಕ್ರಿಯೆಗಳ ಬಗ್ಗೆ ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ಕಲಿಯಬಹುದು?

A **ಟೆಸ್ಕೊ ಉತ್ಪನ್ನ ಗುಣಮಟ್ಟ ನಿಯಮಗಳು ನಮ್ಮ ಉತ್ಪನ್ನಗಳನ್ನು ತಯಾರಿಸಲಾಗುವ ತತ್ವಗಳಿಗೆ ಮೂಲ ಮಾರ್ಗದರ್ಶಿಯಾಗಿವೆ. ಇದು ಉತ್ಪನ್ನ ನಿಯಂತ್ರಣ ಅನುಸರಣಾ ತಂಡ ಅಥವಾ ನಿಮ್ಮ ತಾಂತ್ರಿಕ ವ್ಯವಸ್ಥಾಪಕರಲ್ಲಿ ಲಭ್ಯವಿರುತ್ತದೆ.**

Q ನಾನು ನಾವು ಮಳಿಗೆಯಲ್ಲಿ ಉತ್ಪನ್ನವನ್ನು ನಿಭಾಯಿಸುವ ವಿಧಾನವನ್ನು ಬದಲಾಯಿಸುವಂತಹ ಒಂದು ಹೊಸ ಕಾರ್ಯ ದಿನಚರಿಯನ್ನು ಅಭಿವೃದ್ಧಿಪಡಿಸುತ್ತಿದ್ದೇನೆ. ನಾನು ಯಾರನ್ನು ಸಂಪರ್ಕಿಸಬೇಕು?

A **ನೀವೇನಾದರು ಆಹಾರ ಸುರಕ್ಷತೆ ಅಥವಾ ಗುಣಮಟ್ಟದ ಸುತ್ತ ಮಳಿಗೆಯ ದಿನಚರಿಯನ್ನು ಬದಲಾಯಿಸಬೇಕಾಗಿದ್ದರೆ, ಮೊದಲ ಬಾರಿಗೆ ನೀವು (ತಾಂತ್ರಿಕ ಮತ್ತು / ಅಥವಾ ಯುಕೆ ಹೊರಗೆ ಅಂಗಡಿ ಕಾರ್ಯಾಚರಣೆಗಳ ಸಂದರ್ಭದಲ್ಲಿ) ಉತ್ಪನ್ನ ನಿಯಂತ್ರಣ ಅನುಸರಣಾ ತಂಡವನ್ನು ಸಂಪರ್ಕಿಸಬೇಕು. ಅವರು, ಯಾವುದೇ ಬದಲಾವಣೆಗಳ ಕುರಿತು ಮಳಿಗೆ ಸಹೋದ್ಯೋಗಿಗಳಿಗೆ ಸರಿಯಾಗಿ ತರಬೇತಿ ನೀಡಲಾಗಿದೆಯೇ ಮತ್ತು ಸಂವಹನ ಮಾಡಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳುವ ಉತ್ತಮ ಮಾರ್ಗದ ಬಗ್ಗೆ ಸಲಹೆ ನೀಡಬಹುದು.**

ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

- ಉತ್ಪನ್ನ ನಿಯಂತ್ರಣ ಅನುಸರಣಾ ತಂಡ
- ಸ್ಥಳೀಯ ಉತ್ಪನ್ನ ತಾಂತ್ರಿಕ ತಂಡ
- ಸ್ಥಳೀಯ ವ್ಯಾಪಾರ ಕಾನೂನು ತಂಡ (ಯುಕೆ

ಗ್ರಾಹಕ ಮತ್ತು ಸಹೋದ್ಯೋಗಿ ಡೇಟಾ ರಕ್ಷಣೆ

ಅದು ಏಕೆ ಮುಖ್ಯ?

ಡೇಟಾ ನಮ್ಮ ವ್ಯವಹಾರದ ಹೃದಯಭಾಗದಲ್ಲಿದೆ. ನಮ್ಮ ಗ್ರಾಹಕರೊಂದಿಗೆ ಸಂಪರ್ಕಿಸಿದಾಗಲೆಲ್ಲಾ ನಾವು ಡೇಟಾವನ್ನು ಸಂಗ್ರಹಿಸುತ್ತೇವೆ, ಸಂಸ್ಕರಿಸುತ್ತೇವೆ ಮತ್ತು ಉಪಯೋಗಿಸುತ್ತೇವೆ. ಉದಾಹರಣೆಗೆ, ಶಾಪಿಂಗ್ ಹವ್ಯಾಸಗಳ ಕುರಿತ ಡೇಟಾ ನಮಗೆ ಗ್ರಾಹಕರು ಖರೀದಿಸಲು ಇಷ್ಟಪಡುವ ಉತ್ಪನ್ನಗಳ ಬಗ್ಗೆ ಹೆಚ್ಚಿನ ಡೀಲುಗಳನ್ನು ನೀಡುವುದನ್ನು ನಮಗೆ ಅನುಮತಿಸುತ್ತದೆ. ಹೆಚ್ಚುವರಿಯಾಗಿ, ಎಲ್ಲ ಸಮಯಗಳಲ್ಲೂ ಗ್ರಾಹಕರಿಗೆ, ತಮ್ಮ ಡೇಟಾವನ್ನು ನಾವು ಹೇಗೆ ಬಳಸುತ್ತೇವೆ ಎಂಬುದರ ಮೇಲೆ ಆಯ್ಕೆಗಳನ್ನು ಒದಗಿಸಲಾಗಿದೆ ಎಂಬುದಾಗಿ ನಾವು ಖಚಿತಪಡಿಸುತ್ತೇವೆ ಮತ್ತು ನಾವು ಇದನ್ನು ಹೇಗೆ ಮಾಡುತ್ತೇವೆ ಎಂಬುದರ ಕುರಿತು ಅವರೊಂದಿಗೆ ನಾವು ಪಾರದರ್ಶಕವಾಗಿರುತ್ತೇವೆ. ವ್ಯವಹಾರ ಉದ್ದೇಶಗಳಿಗಾಗಿ ನಾವು ನಮ್ಮ ಸಹೋದ್ಯೋಗಿಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿಟ್ಟುಕೊಳ್ಳುತ್ತೇವೆ ಮತ್ತು ಬಳಸುತ್ತೇವೆ.

ನಮ್ಮ ಗ್ರಾಹಕರು ಮತ್ತು ಸಹೋದ್ಯೋಗಿಗಳು ತಮ್ಮ ಡೇಟಾವನ್ನು ನಾವು ಜವಾಬ್ದಾರಿಯುತವಾಗಿ ಮತ್ತು ಕಾನೂನುಬದ್ಧವಾಗಿ ಪರಿಗಣಿಸುತ್ತೇವೆ ಎಂಬುದಾಗಿ ನಮ್ಮನ್ನು ನಂಬುತ್ತಾರೆ. ನಾವು ಇದನ್ನು ಮಾಡುತ್ತಿದ್ದೇವೆ ಎಂದು ಖಚಿತಪಡಿಸಿಕೊಳ್ಳಲು, ನಮ್ಮಲ್ಲಿ ನೀತಿಗಳು ಮತ್ತು ಕಾರ್ಯವಿಧಾನಗಳಿವೆ ಮತ್ತು ಅವರು ಅರ್ಥಮಾಡಿಕೊಳ್ಳುತ್ತಾರೆ ಮತ್ತು ಅನುಸರಿಸುತ್ತಾರೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು ಎಲ್ಲಾ ಸಹೋದ್ಯೋಗಿಗಳ ಜವಾಬ್ದಾರಿಯಾಗಿದೆ.

ಹಾಗಾಗಿ ನಾವು ಡೇಟಾವನ್ನು ಬಳಸಿದಾಗಲೆಲ್ಲಾ ನಾವು ಯಾವಾಗಲೂ ಈ ತತ್ವಗಳನ್ನು ಅನುಸರಿಸಬೇಕು:

ಸುರಕ್ಷೆ: ನಾವು ನಮ್ಮ ಗ್ರಾಹಕರು ಮತ್ತು ಸಹೋದ್ಯೋಗಿಗಳ ಡೇಟಾವನ್ನು ಸುರಕ್ಷಿತವಾಗಿ ಇರಿಸುತ್ತೇವೆ.

ಸೂಕ್ತ: ನಾವು ಡೇಟಾವನ್ನು ಗ್ರಾಹಕರು ಮತ್ತು ಸಹೋದ್ಯೋಗಿಗಳಿಂದ ಯಾವ ಉದ್ದೇಶಕ್ಕಾಗಿ ಸಂಗ್ರಹಿಸಿರುತ್ತೇವೋ ಆ ಉದ್ದೇಶಕ್ಕಾಗಿ ಮಾತ್ರ ಬಳಸುತ್ತೇವೆ ಮತ್ತು ಬೇರಾವುದಕ್ಕೂ ಅಲ್ಲ.

ಮುಕ್ತ: ನಾವು ಯಾವ ಡೇಟಾವನ್ನು ಹೊಂದಿದ್ದೇವೆ ಮತ್ತು ಅದನ್ನು ಏಕೆ ಬಳಸುತ್ತೇವೆ ಎಂಬುದರ ಕುರಿತು ನಾವು ಮುಕ್ತ, ಪ್ರಾಮಾಣಿಕ ಮತ್ತು ಪಾರದರ್ಶಕವಾಗಿರುತ್ತೇವೆ.

ಧಾರಣ: ನಾವು ಡೇಟಾವನ್ನು ಏಕೆ ಬಳಸುತ್ತಿದ್ದೇವೆ ಮತ್ತು ಅದನ್ನು ಎಷ್ಟು ಸಮಯದವರೆಗೆ ಇರಿಸಿಕೊಳ್ಳಬಹುದು ಎಂಬುದನ್ನು ನಾವು ಅರ್ಥಮಾಡಿಕೊಂಡಿದ್ದೇವೆ.

ನನ್ನ ಕುರಿತಂತೆ ಇದು ಏನು ಅರ್ಥ ನೀಡುತ್ತದೆ?

- ನಮ್ಮ ನೀತಿಗಳು ಮತ್ತು ಕಾರ್ಯವಿಧಾನಗಳು ಮತ್ತು ಮೇಲೆ ತಿಳಿಸಲಾದ ತತ್ವಗಳನ್ನು ಅನುಸರಿಸಿ ಮತ್ತು ನಿಮ್ಮ ತರಬೇತಿಯನ್ನು ಮಾಡಿ - ಈ ರೀತಿಯಾಗಿ ನಿಮ್ಮ ಜವಾಬ್ದಾರಿಗಳನ್ನು ನೀವು ಅರ್ಥಮಾಡಿಕೊಳ್ಳುವಿರಿ. ಎಲ್ಲಾ ಸಂಬಂಧಿತ ದಾಖಲೆಗಳನ್ನು ಗೌಪ್ಯತಾ ಪೋರ್ಟಲ್‌ನಲ್ಲಿ ಸಂಗ್ರಹಿಸಲಾಗಿದೆ.
- ಉತ್ಪನ್ನ ಅಥವಾ ಸೇವೆಯನ್ನು ಅಭಿವೃದ್ಧಿಪಡಿಸುವಾಗ "ಗೌಪ್ಯತಾ ಹಕ್ಕುಗಳು" ಪರಿಗಣನೆಯಲ್ಲಿರಲಿ. ನಿಮಗೆ ಯಾವುದಾದರು ಕಳವಳಗಳಿದ್ದರೆ, ನಿಮ್ಮ ಸ್ಥಳೀಯ ಗೌಪ್ಯತಾ ತಂಡವನ್ನು ಸಂಪರ್ಕಿಸಿ.
- ಟೆಸ್ಕೊ ಯಾವ ಡೇಟಾವನ್ನು ಸಂಗ್ರಹಿಸುತ್ತದೆ ಮತ್ತು ಟೆಸ್ಕೊ ಅದರೊಂದಿಗೆ ಏನು ಮಾಡುತ್ತದೆ ಎಂಬುದರ ಕುರಿತು ಗ್ರಾಹಕರು ಮತ್ತು ಸಹೋದ್ಯೋಗಿಗಳೊಂದಿಗೆ ಸ್ಪಷ್ಟವಾಗಿರಿ.
- ಗೌಪ್ಯತಾ ಬೆಂಬಲ ಪೋರ್ಟಲ್ ಬಳಸಿ (ಅಥವಾ ನಿಮ್ಮ ವ್ಯವಹಾರ ಘಟಕದಲ್ಲಿ ಯಾವುದೇ ಪೋರ್ಟಲ್ ಇಲ್ಲದಿದ್ದರೆ ಸ್ಥಳೀಯ ಗೌಪ್ಯತಾ ತಂಡಕ್ಕೆ) ಡೇಟಾವನ್ನು ಒಳಗೊಂಡ ಎಲ್ಲಾ ಪ್ರಸಂಗಗಳನ್ನು ತಕ್ಷಣ ವರದಿ ಮಾಡಿ.

ಪ್ರಶ್ನೆಗಳು & ಉತ್ತರಗಳು

Q ಗ್ರಾಹಕರ ಡೇಟಾ ಎಂದರೇನು?

A **ನಮ್ಮ ಗ್ರಾಹಕರಿಗೆ ಅಥವಾ ಟೆಸ್ಕೊದಲ್ಲಿನ ಅವರ ಚಟುವಟಿಕೆಗಳಿಗೆ ಸಂಬಂಧಿಸಿದ ಯಾವುದೇ ಡೇಟಾ. ಇದರಲ್ಲಿ ಹೆಸರುಗಳು, ವಿಳಾಸಗಳು ಮತ್ತು ಸಂಪರ್ಕ ವಿವರಗಳು, ವಹಿವಾಟು ಡೇಟಾ, ಇನ್‌ವಾಯ್ಸ್‌ಗಳು, ಮೊಬೈಲ್ ಫೋನ್ ದಾಖಲೆಗಳು, ಮೊಬೈಲ್ ಅಪ್ಲಿಕೇಶನ್ ಡೇಟಾ, ಬ್ಯಾಂಕಿಂಗ್ ಡೇಟಾ, ಕ್ಲಬ್‌ಕಾರ್ಡ್ ಡೇಟಾ ಮತ್ತು ಗ್ರಾಹಕರು ಟೆಸ್ಕೊಗೆ ಕಳುಹಿಸಿದ ಪತ್ರವ್ಯವಹಾರವನ್ನು ಒಳಗೊಂಡಿರಬಹುದು.**

Q ಕಾರ್ ಪಾರ್ಕ್‌ನಲ್ಲಿ ಗ್ರಾಹಕರೊಬ್ಬರು ಅಪಘಾತಕ್ಕೀಡಾಗಿದ್ದು, ಅವರು ಸಿಸಿಟಿವಿ ದೃಶ್ಯಾವಳಿಗಳನ್ನು ನೋಡಲು ಬಯಸುತ್ತಾರೆ. ನಾನು ಅದನ್ನು ಅವರಿಗೆ ತೋರಿಸಬಹುದೇ?

A **ಇಲ್ಲ.ಸಿಸಿಟಿವಿ ವೀಡಿಯೊ ತುಣುಕನ್ನು ವೀಕ್ಷಿಸಲು ಅಧಿಕಾರವುಳ್ಳ ಜನರು ಮಾತ್ರ ನೋಡಬೇಕು ಮತ್ತು ಅದನ್ನು ಎಂದಿಗೂ ತೋರಿಸಬಾರದು, ಚಿತ್ರೀಕರಿಸಬಾರದು ಅಥವಾ ನಕಲಿಸಬಾರದು. ಗ್ರಾಹಕರು ವೀಡಿಯೊ ತುಣುಕಿನ ನಕಲನ್ನು ಕೇಳಬಹುದು. ಇದನ್ನು ಮಾಡಲು ಸಹಾಯ ಮಾಡಲು ನೀವು ಸಿಸಿಟಿವಿ ಪ್ರವೇಶ ಮತ್ತು ಪ್ರಕಟಣೆಗಳ ಕೋರಿಕೆಗಳ ಮಾರ್ಗದರ್ಶಿ ಸೂತ್ರವನ್ನು ಅನುಸರಿಸಬೇಕು.**

Q ನಮ್ಮ ತಂಡದ ಜನ್ಮದಿನಗಳ ಪಟ್ಟಿಯನ್ನು ರಚಿಸಲು ನಾನು ನಮ್ಮ ವೇತನಪಟ್ಟಿ ವ್ಯವಸ್ಥೆಯನ್ನು ಪ್ರವೇಶಿಸಬಹುದೇ?

A **ಇಲ್ಲ.ನಿಮಗೆ ಅಧಿಕಾರವಿಲ್ಲದ ಹೊರತು ವೇತನಪಟ್ಟಿ ಡೇಟಾವನ್ನು ಪ್ರವೇಶಿಸಲು ನಿಮಗೆ ಅನುಮತಿ ಇಲ್ಲ ಮತ್ತು ಅದು ಅವರ ಸಂಬಳದಲ್ಲಿ ಬದಲಾವಣೆಗಳನ್ನು ಮಾಡುವುದು ಅಥವಾ ಅವರ ಹೆಸರು ಮತ್ತು ವಿಳಾಸದಂತಹ ವೈಯಕ್ತಿಕ ವಿವರಗಳಂತಹ ಕೆಲಸದ ವಿಷಯಕ್ಕೆ ಸಂಬಂಧಿಸಿದೆ. ಮತ್ತೆ ಈ ಮಾಹಿತಿಗಾಗಿ ನೀವು ಅದನ್ನು ಒದಗಿಸುವಂತೆ ನಿಮ್ಮ ತಂಡವನ್ನು ಕೇಳುವುದು ಉತ್ತಮ ಉಪಾಯವಾಗಿದೆ.**

Q ನನ್ನ ವ್ಯವಹಾರ ಪ್ರದೇಶದಲ್ಲಿ ನಾನು ಒಂದು ಹೊಸ ಮಾರ್ಕೆಟಿಂಗ್ ಅಭಿಯಾನ ಹಮ್ಮಿಕೊಳ್ಳುವುದರ ಮೇಲೆ ಕೆಲಸ ಮಾಡುತ್ತಿದ್ದೇನೆ. ಈಗಾಗಲೇ ತಮ್ಮ ಇ-ಮೇಲ್ ವಿಳಾಸವನ್ನು ಒದಗಿಸಿದ ಗ್ರಾಹಕರನ್ನು ನಾನು ಸಂಪರ್ಕಿಸಬಹುದೇ?

A **ನಮ್ಮ ಗ್ರಾಹಕರ ವೈಯಕ್ತಿಕ ಡೇಟಾವನ್ನು ನಾವು ಅವರು ಅದನ್ನು ಒದಗಿಸಿದ ಕಾರಣಕ್ಕಾಗಿ ಮಾತ್ರ ಬಳಸಬಹುದು. ಗ್ರಾಹಕರು ತಮ್ಮ ಮಾಹಿತಿಯನ್ನು ಒದಗಿಸುವ ಸಮಯದಲ್ಲಿ, ನಾವು ಅದನ್ನು ಅವರನ್ನು ಸಂಪರ್ಕಿಸಲು ಬಳಸುವುದಕ್ಕೋಸ್ಕರ, ನಮ್ಮಿಂದ ಮಾರ್ಕೆಟಿಂಗ್ ಸಂವಹನಗಳನ್ನು ಸ್ವೀಕರಿಸುವುದಕ್ಕೆ ಒಪ್ಪಿಕೊಂಡಿರಬಹುದು. ನಾವು ಗ್ರಾಹಕರ ಮಾರ್ಕೆಟಿಂಗ್ ಆದ್ಯತೆಗಳನ್ನು ಕೂಡ ಪರಿಗಣಿಸಬೇಕು: ಅವರು ನಮ್ಮ ಮಾರ್ಕೆಟಿಂಗ್ ಸಂಪರ್ಕದಿಂದ ಹೊರಗುಳಿಯಲು ನಿರ್ಧರಿಸಿದ್ದರೆ, ನಾವು ಅವರ ಆಯ್ಕೆಗಳನ್ನು ಗೌರವಿಸಬೇಕು. ಮಾರ್ಗದರ್ಶನಕ್ಕಾಗಿ ನೀವು ನಿಮ್ಮ ಸ್ಥಳೀಯ ಗೌಪ್ಯತಾ ತಂಡವನ್ನು ಸಂಪರ್ಕಿಸಬಹುದು.**

ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

- ಗುಂಪು ಕಾನೂನು ಗೌಪ್ಯತಾ ತಂಡ ಅಥವಾ ಸ್ಥಳೀಯ ಗೌಪ್ಯತಾ ತಂಡ
- ಡೇಟಾ ಸಂರಕ್ಷಣಾ ನೀತಿ
- ಗೌಪ್ಯತೆ ಬೆಂಬಲ ಪೋರ್ಟಲ್

2. ಒಟ್ಟಿಗೆ ಕೆಲಸ ಮಾಡುವುದು

ನಮ್ಮ ಯಶಸ್ಸು ನಮ್ಮ ಜನರ ಮೇಲೆ ಅವಲಂಬಿತವಾಗಿರುತ್ತದೆ. ಟೆಸ್ಕೊ ಮೌಲ್ಯವಾದ "ಪ್ರತಿಯೊಬ್ಬರನ್ನೂ ಅವರು ಹೇಗೆ ಉಪಚರಿಸಲ್ಪಡಲು ಬಯಸುವರೋ ಹಾಗೆಯೇ ಉಪಚರಿಸಿ" ಇದು ನಾವು ನಮ್ಮ ತಂಡಗಳಿಂದ ಅತ್ಯಧಿಕವನ್ನು ಪಡೆಯುತ್ತೇವೆ ಎಂಬುದನ್ನು ಖಚಿತಪಡಿಸುತ್ತದೆ ಮತ್ತು ಸಹೋದ್ಯೋಗಿಗಳಿಗೆ ತಮ್ಮ ಮಹತ್ವಾಕಾಂಕ್ಷೆಗಳನ್ನು ಸಾಧಿಸಲು ಸಹಾಯ ಮಾಡುತ್ತದೆ.

ಸಂಹಿತೆಯ ಈ ವಿಭಾಗವು ಜನರಿಗೆ ಸಂಬಂಧಿಸಿದ ಪ್ರಮುಖ ವಿಷಯಗಳನ್ನು ಒಳಗೊಂಡಿದೆ.

ಆರೋಗ್ಯ & ಸುರಕ್ಷತೆ ಪುಟ 22

ಸಮಾನ ಅವಕಾಶ, ಅಂತರ್ವೇಶನ ಮತ್ತು ವೈವಿಧ್ಯತೆ ಪುಟ 24

ಗೌರವ, ಘನತೆ ಮತ್ತು ನ್ಯಾಯಯುತ ಉಪಚಾರ ಪುಟ 26

ಆರೋಗ್ಯ & ಸುರಕ್ಷತೆ

ಅದು ಏಕೆ ಮುಖ್ಯ?

ಟೆಸ್ಕೊದಲ್ಲಿ ನಾವು ನಮ್ಮ ಸಹೋದ್ಯೋಗಿಗಳು, ಗ್ರಾಹಕರು ಮತ್ತು ನಮ್ಮ ವ್ಯವಹಾರಗಳಿಂದ ಪ್ರಭಾವಿತರಾದಂತ ಯಾರೊಬ್ಬರ ಆರೋಗ್ಯ ಮತ್ತು ಸುರಕ್ಷತೆಯ ಬಗ್ಗೆಯೂ ಕಾಳಜಿ ವಹಿಸುತ್ತೇವೆ. ಪ್ರತಿಯೊಬ್ಬರೂ ಪ್ರತಿದಿನ ಸುರಕ್ಷಿತವಾಗಿ ಮನೆಗೆ ಹೋಗಬೇಕೆಂದು ನಾವು ಬಯಸುವುದರಿಂದ ಇದು ನಾವು ಹೇಗೆ ವ್ಯಾಪಾರ ಮಾಡುತ್ತೇವೆ ಎಂಬುದರ ಹೃದಯಭಾಗದಲ್ಲಿದೆ.

ಸುರಕ್ಷಿತವಾಗಿ ಕೆಲಸ ಮಾಡುವ ಮೂಲಕ, ನಮ್ಮ ಅಪಾಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಮೂಲಕ ಮತ್ತು ಕಳಕಳಿಯ ಸಂಸ್ಕೃತಿಯನ್ನು ಸೃಷ್ಟಿಸುವ ಮೂಲಕ, ನಮ್ಮ ಸಹೋದ್ಯೋಗಿಗಳು ಮತ್ತು ಗ್ರಾಹಕರಿಗೆ ಉಂಟಾಗುವ ಗಾಯಗಳಿಂದ ಉಂಟಾಗುವ ತೊಂದರೆ ಮತ್ತು ಕೆಲವೊಮ್ಮೆ ದೀರ್ಘಕಾಲೀನ ಪರಿಣಾಮವನ್ನು ನಾವು ಕಡಿಮೆ ಮಾಡಬಹುದು. ಕೆಲಸದಿಂದ ಗೈರು ಇರುವುದರಿಂದ ಮತ್ತು ತನಿಖೆ, ವೈದ್ಯಕೀಯ ಚಿಕಿತ್ಸೆ ಮತ್ತು ಪರಿಹಾರಗಳ ವೆಚ್ಚಗಳಿಂದ ವ್ಯವಹಾರಕ್ಕೆ ಉಂಟಾಗುವ ಅಡ್ಡಿಗಳನ್ನು ಕೂಡ ನಾವು ಕಡಿಮೆ ಮಾಡಬಹುದು. ನಾವೇನಾದರೂ ನಮ್ಮ ಕಳಕಳಿಯನ್ನು ತೋರುವ ಕರ್ತವ್ಯದಲ್ಲಿ ವಿಫಲರಾದರೆ ಅದು ನಮ್ಮ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಕ್ಕೆ ಕಾರಣವಾಗಬಹುದು, ನಮ್ಮ ಗ್ರಾಹಕರು ಮತ್ತು ಸಹೋದ್ಯೋಗಿಗಳು ನಮ್ಮಲ್ಲಿರುವ ಮೌಲ್ಯಯುತ ವಿಶ್ವಾಸವನ್ನು ನಷ್ಟಗೊಳಿಸುತ್ತದೆ.

ಪ್ರತಿಯೊಬ್ಬರೂ ತಮ್ಮ ಸುರಕ್ಷತೆಯನ್ನು ಗಂಭೀರವಾಗಿ ಪರಿಗಣಿಸಲಾಗಿದೆ ಎಂದು ಭಾವಿಸುವುದನ್ನು ಖಚಿತಪಡಿಸಿಕೊಳ್ಳಲು ನಾವು ಬದ್ಧರಾಗಿದ್ದೇವೆ ಮತ್ತು ನಮ್ಮ ಜನರ ಪ್ರತಿ ನಮ್ಮ ಭರವಸೆ ಹೀಗಿದೆ:

- ಯಾವಾಗಲೂ ಕಾನೂನಿಗೆ ವಿಧೇಯವಾಗಿರುತ್ತೇವೆ.
- ಅಪಘಾತಗಳ ಕಾರಣಗಳನ್ನು ಆಮೂಲಕ ನಾವು ಅವು ಮರುಕಳಿಸುವುದನ್ನು ತಡೆಯಬಹುದಾಗುವಂತೆ ಅರ್ಥಮಾಡಿಕೊಳ್ಳುತ್ತೇವೆ.
- ನಾವು ಯಾವಾಗಲೂ ನಮ್ಮ ಚಟುವಟಿಕೆಗಳಿಂದ ಪ್ರಭಾವಿತರಾದಂತ ಯಾರೇ ಆಗಲಿ ಅವರಿಗೆ ಯಾವುದೇ ಹಾನಿಯಾಗುವ ಅಪಾಯವನ್ನು ಕಡಿಮೆ ಮಾಡಲು ಪ್ರಯತ್ನಿಸುತ್ತವೆ.

ನನ್ನ ಕುರಿತಂತೆ ಇದು ಏನು ಅರ್ಥ ನೀಡುತ್ತದೆ?

- ನಿಮ್ಮ ಪಾತ್ರಕ್ಕೆ ಅನ್ವಯವಾಗುವ ತರಬೇತಿ ಮತ್ತು ಸುರಕ್ಷತಾ ಸೂಚನೆಗಳನ್ನು ಯಾವಾಗಲೂ ಅನುಸರಿಸಿ.
- ನೀವು ಒಬ್ಬ ವ್ಯವಸ್ಥಾಪಕರಾಗಿದ್ದರೆ, ನಿಮ್ಮನ್ನು ನೀವು ಒಂದು ಸುರಕ್ಷಿತ ನಡವಳಿಕೆಗಳ ಉದಾಹರಣೆಯನ್ನಾಗಿ ಸ್ಥಾಪಿಸಿ ಮತ್ತು ಸಹೋದ್ಯೋಗಿಗಳಿಗೆ ತಮ್ಮನ್ನು ತಾವು ಹಾನಿಗೊಳಪಡಿಸಿಕೊಳ್ಳುವಂತೆ ಎಂದಿಗೂ ಕೇಳಬೇಡಿ.
- ಅಪಾಯಗಳನ್ನು ಅರ್ಥಮಾಡಿಕೊಳ್ಳಲಾಗಿದೆ ಎಂದು ಖಚಿತಪಡಿಸಿಕೊಳ್ಳಿ ಮತ್ತು ಅವುಗಳ ಸಂಭವನೀಯ ಹಾನಿಯನ್ನು ಕಡಿಮೆ ಮಾಡಲು ಸರಿಯಾದ ಯೋಜನೆಗಳನ್ನು ಹೊಂದಿರಿ.
- ಸುರಕ್ಷತೆಯು ಪ್ರತಿಯೊಬ್ಬರ ಜವಾಬ್ದಾರಿಯಾಗಿದೆ – ಯಾವುದಾದರು ಸಂಗತಿ ಅಸುರಕ್ಷಿತ ಅಥವಾ ಅಪಘಾತಕ್ಕೆ ಕಾರಣವಾಗುವಂತೆ ಇರಬಹುದು ಎಂದು ನಿಮಗೆ ಅನಿಸಿದರೆ, ಅದನ್ನು ಎದುರಿಸಲು ಕ್ರಮ ತೆಗೆದುಕೊಳ್ಳಿ ಮತ್ತು ತಕ್ಷಣ ಅದನ್ನು ವರದಿ ಮಾಡಿ.
- ಸಹೋದ್ಯೋಗಿಯೊಬ್ಬ ಸ್ವತಃ ಅವರಿಗೆ ಅಥವಾ ಇತರರಿಗೆ ಹಾನಿಯಾಗುವ ರೀತಿಯಲ್ಲಿ ಕೆಲಸ ಮಾಡುವುದನ್ನು ನೀವು ನೋಡಿದರೆ, ಒಳಸೇರಿ ಕೆಲಸ ಮಾಡುವ ಸುರಕ್ಷಿತ ವಿಧಾನವನ್ನು ಅವರಿಗೆ ಜ್ಞಾಪಿಸಿ.
- ಸುರಕ್ಷಿತವಾಗಿ ನಿರ್ವಹಿಸಲು ನಿಮಗೆ ಸರಿಯಾದ ಜ್ಞಾನ ಅಥವಾ ತರಬೇತಿ ಇಲ್ಲದಿದ್ದರೆ ಅಂತಹ ಏನನ್ನೂ ಮಾಡಲು ಎಂದಿಗೂ ಒಪ್ಪಬೇಡಿ.

ಪ್ರಶ್ನೆಗಳು & ಉತ್ತರಗಳು

Q ನಾನು ಈಗ ತಾನೇ ಟೆಸ್ಕೊಗೆ ಸೇರಿಕೊಂಡಿದ್ದೇನೆ ಮತ್ತು ಸಹೋದ್ಯೋಗಿಗಳು ಸುರಕ್ಷತಾ ತರಬೇತಿ ಪೂರ್ಣಗೊಳ್ಳಲು ಸ್ವಲ್ಪ ಸಮಯ ತೆಗೆದುಕೊಳ್ಳುತ್ತದೆ ಮತ್ತು ಅದು ಸುಮ್ಮನೆ "ಕಾಮನ್ ಸೆನ್ಸ್" ಎಂದು ಹೇಳಿದ್ದಾರೆ. ನಾನು ನಿಜವಾಗಿಯೂ ತರಬೇತಿ ಮಾಡಬೇಕೇ?

A **ಹೌದು. ಎಲ್ಲಾ ಹೊಸ ಸಹೋದ್ಯೋಗಿಗಳು ತಮ್ಮ ಕೆಲಸದ ಸ್ಥಳಕ್ಕೆ ಅಗತ್ಯವಾಗಿರುವಂತ ಸುರಕ್ಷತಾ ಮುನ್ನೆಚ್ಚರಿಕೆಗಳನ್ನು ಮತ್ತು ತುರ್ತು ಪರಿಸ್ಥಿತಿಯಲ್ಲಿ ಏನು ಮಾಡಬೇಕು ಎಂಬುದನ್ನು ತಿಳಿದಿರಬೇಕು. ಎಲ್ಲಾ ಕೆಲಸದ ಸ್ಥಳಗಳು ಒಂದೇ ಆಗಿರುವುದಿಲ್ಲ ಮತ್ತು ನಾವೆಲ್ಲರೂ ಬೇರೆಬೇರೆ ಮಟ್ಟಗಳ ಅನುಭವಗಳನ್ನು ಹೊಂದಿರುತ್ತೇವೆ. ನಮ್ಮ ಸುರಕ್ಷತಾ ತರಬೇತಿಯು ಸುರಕ್ಷಿತವಾಗಿರಲು ನಾವೆಲ್ಲರೂ ಒಟ್ಟಾಗಿ ಕೆಲಸ ಮಾಡುತ್ತೇವೆ ಎಂದು ಖಚಿತಪಡಿಸುತ್ತದೆ.**

Q ಒಂದು ಹೊಸ ಉಪಕರಣದ ಸುರಕ್ಷತೆಯ ಬಗ್ಗೆ ನನಗೆ ಚಿಂತೆ ಇದೆ. ನಾನು ಏನು ಮಾಡಬೇಕು?

A **ಯಾವುದೇ ಸೂಚನೆಗಳು ಅಥವಾ ತರಬೇತಿಯನ್ನು ನೀಡಿರದಿದ್ದರೆ, ಅದನ್ನು ಬಳಸಬಾರದು. ಅದರ ಅಪಾಯದ ಮೌಲ್ಯಮಾಪನವನ್ನು ಪೂರೈಸಬೇಕಾಗಿದ್ದ ಮತ್ತು ಸರಿಯಾದ ನಿಯಂತ್ರಣಗಳನ್ನು ವಿನ್ಯಾಸಗೊಳಿಸಬೇಕಾಗಿದ್ದ ಪೂರೈಕೆದಾರರೊಂದಿಗೆ ನೀವು ಪರಿಶೀಲಿಸಬೇಕು. ಅಲ್ಲಿ ಸೂಚನೆಗಳು ಇದ್ದರೆ ಮತ್ತು ನೀವು ಇನ್ನೂ ಕಳವಳ ಪಡುತ್ತಿದ್ದರೆ, ನಿಮ್ಮ ಸ್ಥಳೀಯ ಆರೋಗ್ಯ ಮತ್ತು ಸುರಕ್ಷತಾ ತಜ್ಞರನ್ನು ಅಥವಾ ಜನ ಸುರಕ್ಷತಾ ತಂಡವನ್ನು ಸಂಪರ್ಕಿಸಿ – ಅವರ ವಿವರಗಳನ್ನು ನೀವು ನಿಮ್ಮ ಸ್ಥಳೀಯ ಆರೋಗ್ಯ ಮತ್ತು ಸುರಕ್ಷತಾ ಸೂಚನೆ ಫಲಕದಲ್ಲಿ ಕಾಣುತ್ತೀರಿ.**

ನಮ್ಮ ಸಹೋದ್ಯೋಗಿಗಳನ್ನು ಮತ್ತು ನಮ್ಮ ವ್ಯವಹಾರವ

Q ನಮ್ಮ ಆರೋಗ್ಯ ಮತ್ತು ಸುರಕ್ಷತಾ ತಜ್ಞರು ಯಾರು?

A **ಪ್ರತಿಯೊಂದು ವ್ಯವಹಾರ ಘಟಕವು ಆರೋಗ್ಯ ಮತ್ತು ಸುರಕ್ಷತೆ (ಜನ ಸುರಕ್ಷತಾ ವ್ಯವಸ್ಥಾಪಕ) ಯಲ್ಲಿ ತಾಂತ್ರಿಕ ಪ್ರಶ್ನೆಗಳೊಂದಿಗೆ ವ್ಯವಹರಿಸಬಹುದಾದಂತ ಮತ್ತು ಅಪಾಯದ ಮೌಲ್ಯಮಾಪನ ಪ್ರಕ್ರಿಯೆಯನ್ನು ನಿಭಾಯಿಸಬಹುದಾದಂತ ತಜ್ಞರನ್ನು ನೇಮಿಸಿಕೊಳ್ಳುತ್ತದೆ. ಈ ಸಹೋದ್ಯೋಗಿಗಳೆಲ್ಲರೂ ಒಟ್ಟಾಗಿ ಅವರನ್ನು ತಮ್ಮ ಕ್ಷೇತ್ರದಲ್ಲಿ ಸಮರ್ಥರನ್ನಾಗಿ ಮಾಡುವಂತ ಸುರಕ್ಷತಾ ಅರ್ಹತೆಗಳನ್ನು ಮತ್ತು ಸಾಕಷ್ಟು ಅನುಭವವನ್ನು ಹೊಂದಿರುತ್ತಾರೆ. ಅವರ ವಿವರಗಳನ್ನು ಸಹೋದ್ಯೋಗಿ ಅಥವಾ ಸುರಕ್ಷತಾ ಸೂಚನೆ ಫಲಕದಲ್ಲಿ ಪಟ್ಟಿ ಮಾಡಬೇಕು.**

Q ಯಾವುದೇ ಒಂದು ಸುರಕ್ಷತಾ ಕಳವಳವನ್ನು ಗೌಪ್ಯವಾಗಿ ನಾನು ಹೇಗೆ ವರದಿ ಮಾಡಬಹುದು?

A **ಮೊತ್ತಮೊದಲಿಗೆ, ನಿಮ್ಮ ಲೈನ್ ಮ್ಯಾನೇಜರ್ ಅಥವಾ ಜನ ತಂಡದೊಂದಿಗೆ ಮಾತನಾಡಿ. ಸಹೋದ್ಯೋಗಿಗಳಿಗೆ ಸುರಕ್ಷತೆಯ ಬಗ್ಗೆ ವರದಿ ಮಾಡಲು ಪ್ರೊಟೆಕ್ಟರ್ ಲೈನ್** Protector Line **ಸಹ ಇದೆ. ಇದನ್ನು ಸಂಪೂರ್ಣ ಗೌಪ್ಯವಾಗಿ ಬಳಸಬಹುದು ಮತ್ತು ಪ್ರತಿ ವರದಿಯನ್ನು ಸ್ವತಂತ್ರವಾಗಿ ತನಿಖೆ ಮಾಡಲಾಗುತ್ತದೆ.**

Q ಕೆಲಸ ಮಾಡುವಾಗ ನಾನು ಒಂದು ಅಪಘಾತಕ್ಕೆ ಒಳಗಾಗಿದ್ದೇನೆ, ನಾನು ಏನು ಮಾಡಬೇಕು?

A **ಕೆಲಸದಲ್ಲಿ ಜರಗುವ ಎಲ್ಲ ಅಪಘಾತಗಳನ್ನು ತಕ್ಷಣ ನಿಮ್ಮ ಲೈನ್ ಮ್ಯಾನೇಜರ್‌ಗೆ ವರದಿ ಮಾಡಬೇಕು ಆಮೂಲಕ ಅವರು ಬೆಂಬಲವನ್ನು ನೀಡಬಹುದು ಮತ್ತು ಸ್ಥಳೀಯ ಗಾಯ ವರದಿ ಮಾಡುವ ಅವಶ್ಯಕತೆಗಳನ್ನು ಅನುಸರಿಸಬಹುದು. ಅಪಘಾತಗಳನ್ನು ವರದಿ ಮಾಡುವುದು ನಮ್ಮ ವ್ಯವಹಾರದ ವಿವಿಧ ಕ್ಷೇತ್ರಗಳಲ್ಲಿ ನಮ್ಮ ಸಹೋದ್ಯೋಗಿಗಳು ಎದುರಿಸುತ್ತಿರುವ ಅಪಾಯಗಳನ್ನು ಚೆನ್ನಾಗಿ ಅರ್ಥಮಾಡಿಕೊಳ್ಳಲು ಅನುವು ಮಾಡಿಕೊಡುತ್ತದೆ.**

ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

- ಆರೋಗ್ಯ ಮತ್ತು ಸುರಕ್ಷತಾ ಸೂಚನಾ ಫಲಕಗಳು
- ಜನ ಸುರಕ್ಷತಾ ವ್ಯವಸ್ಥಾಪಕ ಅಥವಾ ಸ್ಥಳೀಯ ಆರೋಗ್ಯ & ಸುರಕ್ಷತಾ ತಜ್ಞ
- ಜನ ಸುರಕ್ಷತಾ ನೀತಿಗಳು

ಸಮಾನ ಅವಕಾಶ, ಅಂತರ್ವೇಶನ ಮತ್ತು ವೈವಿಧ್ಯತೆ

ಅದು ಏಕೆ ಮುಖ್ಯ?

ಪ್ರತಿಯೊಬ್ಬರೂ ಸ್ವಾಗತಿಸಲ್ಪಡುವಂತ ಜಾಗತಿಕವಾಗಿ ವೈವಿಧ್ಯಮಯ ಅಂತರ್ಗತ ಸಂಸ್ಕೃತಿಯನ್ನು ಸೃಷ್ಟಿಸಲು ನಾವು ಶ್ರಮಿಸುತ್ತೇವೆ. ನಮ್ಮ ಸಹೋದ್ಯೋಗಿಗಳು ಸಮಾಜದ ವೈವಿಧ್ಯಮಯ ಸ್ವರೂಪವನ್ನು ಪ್ರತಿಬಿಂಬಿಸುತ್ತಾರೆ ಮತ್ತು ನಮ್ಮ ವ್ಯವಹಾರವು ಬೆಳೆಯಲು ಸಹಾಯ ಮಾಡುವಲ್ಲಿ ನೀಡಿದ ಪ್ರತಿಯೊಬ್ಬ ವ್ಯಕ್ತಿಯ ಕೊಡುಗೆಯನ್ನು ನಾವು ಗೌರವಿಸುತ್ತೇವೆ.

ವಯಸ್ಸು, ಲಿಂಗ, ಅಂಗವೈಕಲ್ಯ, ಲೈಂಗಿಕ ಒಲವು, ಲಿಂಗ ಪುನರ್ವಿತರಣೆ, ಜನಾಂಗ, ಜಾತಿ, ಧರ್ಮ, ರಾಜಕೀಯ ಮತ, ಮದುವೆ/ನಾಗರಿಕ ಸಹದಾಂಪತ್ಯ ಸ್ಥಿತಿ ಅಥವಾ ಗರ್ಭಧಾರಣೆ / ಮಾತೃತ್ವದ ಸ್ಥಿತಿಗಳನ್ನು ಲೆಕ್ಕಿಸದೆ ನಾವು ಎಲ್ಲರನ್ನೂ ನ್ಯಾಯಯುತವಾಗಿ, ಸಮಾನವಾಗ ಮತ್ತು ತಾರತಮ್ಯವಿಲ್ಲದೆ ಉಪಚರಿಸಬೇಕು. ನಮ್ಮ ಮಳಿಗೆಗಳು, ವಿತರಣಾ ಕೇಂದ್ರಗಳು ಮತ್ತು ಕಚೇರಿಗಳಲ್ಲಿ ಸಹೋದ್ಯೋಗಿಗಳನ್ನು ನೇಮಕ ಮಾಡುವಾಗ, ಪೋಷಿಸುವಾಗ ಮತ್ತು ಬಡ್ತಿ ನೀಡುವಾಗ, ಉದ್ಯೋಗ ನಿರ್ಧಾರಗಳನ್ನು ನಾವು ಕೇವಲ, ಉದ್ಯೋಗ-ಸಂಬಂಧಿತ ಕೌಶಲ್ಯಗಳು, ಸಾಧನೆಗಳು ಮತ್ತು ಕಾರ್ಯಕ್ಷಮತೆಯ ಆಧಾರದ ಮೇಲೆ ಸ್ಪಷ್ಟವಾಗಿ ವ್ಯಾಖ್ಯಾನಿಸಲಾದ ಮತ್ತು ನ್ಯಾಯಯುತವಾದ ಮಾನದಂಡಗಳನ್ನು ಮಾತ್ರ ಬಳಸಿಕೊಂಡು ತೆಗೆದುಕೊಳ್ಳುತ್ತೇವೆ. ನಾವು ಯಾವುದೇ ತಾರತಮ್ಯಕರ ಅಭ್ಯಾಸಗಳು ಅಥವಾ ನಡವಳಿಕೆಗಳನ್ನು ಒಪ್ಪುವುದಿಲ್ಲ, ಏಕೆಂದರೆ ಇವು ಸಹೋದ್ಯೋಗಿಗಳಲ್ಲಿ ತಾವು ಬೇಡವಾದವರು ಮತ್ತು ಹೊರಗಿಟ್ಟಲ್ಪಟ್ಟವರು ಎಂಬ ಭಾವನೆ ಮೂಡುವಂತೆ ಮಾಡಿ, ನಮ್ಮ ಖ್ಯಾತಿಗೆ ಹಾನಿಯನ್ನು ಮತ್ತು ವ್ಯವಹಾರದ ವಿರುದ್ಧ ಕಾನೂನು ಕ್ರಮವನ್ನು ತರುವುದಕ್ಕೆ ಕಾರಣವಾಗಬಹುದು.

ನಾವು ಸಹೋದ್ಯೋಗಿಗಳಿಗೆ ಅವರ ಪರಿಸ್ಥಿತಿಗಳಿಗೆ ತಕ್ಕಂತೆ ಕೆಲಸ ಮಾಡಲು ಕೂಡ ಅವಕಾಶಗಳನ್ನು ನೀಡುತ್ತೇವೆ – ಉದಾಹರಣೆಗೆ ಹೊಂದಿಸಿಕೊಳ್ಳಬಹುದಾದ ಅವಧಿಯ ಕೆಲಸ, ಅರೆಕಾಲಿಕ ಹುದ್ದೆಗಳು ಮತ್ತು ಉದ್ಯೋಗ-ಹಂಚಿಕೊಳ್ಳುವಿಕೆಯ ಅವಕಾಶಗಳನ್ನು ನೀಡುತ್ತೇವೆ. ನಮ್ಮ ಸಹೋದ್ಯೋಗಿಗಳು ಮತ್ತು ವ್ಯವಹಾರದ ಬದಲಾಗುತ್ತಿರುವ ಅಗತ್ಯಗಳಿಗೆ ತಕ್ಕಂತೆ ನಾವು ನಮ್ಮ ಕೆಲಸದ ಅಭ್ಯಾಸಗಳು ಮತ್ತು ಒಪ್ಪಂದಗಳನ್ನು ನಿರಂತರವಾಗಿ ಅವಲೋಕಿಸುತ್ತಿರುತ್ತೇವೆ.

ನನ್ನ ಕುರಿತಂತೆ ಇದು ಏನು ಅರ್ಥ ನೀಡುತ್ತದೆ?

- ನಿಮ್ಮ ಸಹೋದ್ಯೋಗಿಗಳು ಮತ್ತು ವ್ಯಾಪಕ ವ್ಯವಹಾರವನ್ನು ಬೆಂಬಲಿಸಲು ಸಮಗ್ರತೆಯಿಂದ ಮತ್ತು ಸದ್ಭಾವನೆಯಿಂದ ವರ್ತಿಸಿ.
- ಯಾವುದೇ ಸಾಮಾಜಿಕ ಅಥವಾ ಸಾಂಸ್ಕೃತಿಕ ಭಿನ್ನತೆಗಳನ್ನು ಲೆಕ್ಕಿಸದೆ ಎಲ್ಲಾ ಸಹೋದ್ಯೋಗಿಗಳು, ಗ್ರಾಹಕರು, ಪೂರೈಕೆದಾರರು ಅಥವಾ ಇತರ ಪಕ್ಷಗಳನ್ನು ಗೌರವಿಸಿ.
- ಮುಕ್ತತೆ ಮತ್ತು ಸಹಯೋಗದ ವಾತಾವರಣವನ್ನು ಖಚಿತಪಡಿಸಿಕೊಳ್ಳಲು ನಿಮ್ಮ ತಂಡದಲ್ಲಿ ಆದರ್ಶ ಅಂತರ್ಗತ ನಡವಳಿಕೆಯನ್ನು ಪ್ರದರ್ಶಿಸಿ ಆಮೂಲಕ ನಮ್ಮ ಸಹೋದ್ಯೋಗಿಗಳ ವೈವಿಧ್ಯತೆ, ಜ್ಞಾನ ಮತ್ತು ಅನುಭವದಿಂದ ನಾವು ಹೆಚ್ಚಿನದನ್ನು ಪಡೆದುಕೊಳ್ಳಬಹುದು.
- ಪ್ರಸ್ತುತವಾದಂತ ವಾಹಿನಿಗಳ ಮೂಲಕ ನಿಮ್ಮ ಅಭಿಪ್ರಾಯಗಳು ಮತ್ತು ಕಾಳಜಿಗಳಿಗೆ ಧ್ವನಿ ನೀಡಿ, ಆಮೂಲಕ ಟೆಸ್ಕೊವನ್ನು ಒಂದು ಕೆಲಸ ಮಾಡಲು ಉತ್ತಮ ಸ್ಥಳವಾಗಿಸಲು ನಾವೆಲ್ಲರೂ ಒಟ್ಟಾಗಿ ಶ್ರಮಿಸಬಹುದು.
- ಅರ್ಹತೆ ಮತ್ತು ವ್ಯವಹಾರ ಪರಿಗಣನೆಗಳನ್ನು ಆಧರಿಸಿ ಹೊಸ ಸಹೋದ್ಯೋಗಿಗಳನ್ನು ನೇಮಕ ಮಾಡಿಕೊಳ್ಳುವಾಗ ಮತ್ತು ಪ್ರಸ್ತುತ ಸಹೋದ್ಯೋಗಿಗಳಿಗೆ ಬಡ್ತಿನೀಡುವಾಗ ಅಥವಾ ಅವರನ್ನು ಪೋಷಿಸುವಾಗ ಸರಿಯಾದ ಉದ್ಯೋಗ ನಿರ್ಧಾರಗಳನ್ನು ತೆಗೆದುಕೊಳ್ಳಿ.

ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

- ಜನ ತಂಡ
- ಸಮಾನ ಅವಕಾಶಗಳು & ವೈವಿಧ್ಯತೆ ನೀತಿ

ಪ್ರಶ್ನೆಗಳು & ಉತ್ತರಗಳು

Q ನಾನು ಒಬ್ಬ ಮ್ಯಾನೇಜರ್ ಮತ್ತು ನಾನು ಇಬ್ಬರು ಸಹೋದ್ಯೋಗಿಗಳ ಪೈಕಿ ಒಬ್ಬರಿಗೆ ಬಡ್ತಿ ನೀಡುವ ಕುರಿತು ನಿರ್ಧಾರ ತೆಗೆದುಕೊಳ್ಳಬೇಕಾಗಿದೆ. ಒಬ್ಬ ಸಹೋದ್ಯೋಗಿಯು 55 ರವನಾಗಿದ್ದು, ನಿವೃತ್ತಿಯ ವಯಸ್ಸನ್ನು ಸಮೀಪಿಸುತ್ತಿದ್ದರೆ ಮತ್ತು ಇನ್ನೊಬ್ಬ ಕೇವಲ 30 ರವನಾಗಿರುವುದರಿಂದ, ಆತ ಇನ್ನೂ ಹಲವಾರು ವರ್ಷಗಳ ಕಾಲ ನಮಗಾಗಿ ಕೆಲಸ ಮಾಡಬಹುದಾದ್ದರಿಂದ ನಾನು ಕಿರಿಯ ಸಹೋದ್ಯೋಗಿಗೇ ಬಡ್ತಿನೀಡಬೇಕೇ?

A **ಇಲ್ಲ.ನಾವು ಕೇವಲ ಉದ್ಯೋಗ ಸಂಬಂಧಿತ ಕೌಶಲ್ಯಗಳು, ಸಾಧನೆಗಳು ಮತ್ತು ಕಾರ್ಯಕ್ಷಮತೆಯ ಆಧಾರದ ಮೇಲೆ ಮಾತ್ರ ಉದ್ಯೋಗ ನಿರ್ಧಾರಗಳನ್ನು ತೆಗೆದುಕೊಳ್ಳುತ್ತೇವೆ. ವಯಸ್ಸು ಅಥವಾ ಉದ್ಯೋಗೇತರ ಗುಣಲಕ್ಷಣಗಳ ಆಧಾರದ ಮೇಲೆ ನಾವು ಎಂದಿಗೂ ನಿರ್ಧಾರಗಳನ್ನು ತೆಗೆದುಕೊಳ್ಳುವುದಿಲ್ಲ.**

Q ನನ್ನ ವ್ಯವಸ್ಥಾಪಕ ಸಹೋದ್ಯೋಗಿಗಳನ್ನು ತರಬೇತಿ ಅವಕಾಶಗಳಿಗಾಗಿ ಒಡ್ಡುತ್ತಲೇ ಇಲ್ಲ. ಇದು ಅವರು ಗರ್ಭಿಣಿಯಾಗಿದ್ದಾರೆ ಎಂಬ ಕಾರಣದಿಂದ ಇರಬಹುದು ಎಂದು ನಾನು ಭಾವಿಸುತ್ತೇನೆ, ಅದು ಸರಿಯೇ?

A **ಇಲ್ಲ.ತರಬೇತಿ ಅವಕಾಶಗಳಿಗೆ ಎಲ್ಲಾ ಸಹೋದ್ಯೋಗಿಗಳಿಗೂ ನ್ಯಾಯಯುತ ಪ್ರವೇಶ ಇರಬೇಕು. ನಿಮಗೆ ಯಾವುದೇ ಒಂದು ಕಾಳಜಿ ಇದ್ದು, ನೇರವಾಗಿ ಅದನ್ನು ನಿಮ್ಮ ವ್ಯವಸ್ಥಾಪಕರೊಂದಿಗೆ ಎತ್ತಲು ಸಾಧ್ಯವಿಲ್ಲ ಎಂದು ನಿಮಗನಿಸಿದರೆ, ನೀವು ಇನ್ನೊಬ್ಬ ವ್ಯವಸ್ಥಾಪಕ ಅಥವಾ ನಿಮ್ಮ ನಿರ್ದೇಶಕರೊಂದಿಗೆ ಮಾತನಾಡಬಹುದು ಅಥವಾ ನಿಮ್ಮ ಜನ ತಂಡ ಅಥವಾ ಪ್ರೊಟೆಕ್ಟರ್ ಲೈನ್ Protector Line ಅನ್ನು ಸಂಪರ್ಕಿಸಬಹುದು.**

Q ಅಂಗವೈಕಲ್ಯ ಹೊಂದಿರುವ ಸಂದರ್ಶನ ಅಭ್ಯರ್ಥಿಯೊಬ್ಬರು ತಮ್ಮ ಸಂದರ್ಶನವನ್ನು ಯಾವುದಾದರು ಸುಲಭವಾಗಿ ಬಳಸಬಹುದಾದ ಸೌಲಭ್ಯಗಳ ಬಳಿ ನಡೆಸಬೇಕೆಂದು ವಿನಂತಿಸಿದ್ದಾರೆ. ನಾನು ಈ ಹೊಂದಾಣಿಕೆ ಮಾಡಬೇಕೇ?

A **ಹೌದು, ಅವರು ಪ್ರತಿಕೂಲ ಸ್ಥಿತಿಯನ್ನು ಎದುರಿಸುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ಅಂಗವೈಕಲ್ಯ ಹೊಂದಿರುವ ಅಭ್ಯರ್ಥಿಗಳನ್ನು, ಸಮಂಜಸವಾಗಿ ಪ್ರಾಯೋಗಿಕವಾಗಿರುವ, ಯುಕ್ತ ಹೊಂದಾಣಿಕೆಗಳೊಂದಿಗೆ ಬೆಂಬಲಿಸಬೇಕು.**

Q ನನ್ನ ವ್ಯವಸ್ಥಾಪಕರು, ಆಕೆ ನಮ್ಮೊಂದಿಗೆ ಪರಿಶೀಲಿಸಬಹುದು ಮತ್ತು ವಾರಕ್ಕಾಗಿ ಯೋಜನೆ ಮಾಡಬಹುದು ಎಂದು, ಸೋಮವಾರಗಳಂದು ನಮ್ಮ ತಂಡದ ಸಭೆಗಳನ್ನು ನಡೆಸುತ್ತಾರೆ. ನಮ್ಮ ಇಬ್ಬರು ಸಹೋದ್ಯೋಗಿಗಳು ಅರೆಕಾಲಿಕರಾಗಿ ಕೆಲಸ ಮಾಡುತ್ತಾರೆ ಮತ್ತು ಸೋಮವಾರದಂದು ಕೆಲಸದಲ್ಲಿರುವುದಿಲ್ಲ. ಈ ಅಭ್ಯಾಸವು ಅವರನ್ನು ಹೊರಗಿಡುವುದರಿಂದ ಇದು ಅನುಚಿತವಾಗಿದೆ ಎಂದು ನಾನು ಭಾವಿಸುತ್ತೇನೆ. ನಾನು ನನ್ನ ವ್ಯವಸ್ಥಾಪಕರೊಂದಿಗೆ ಮಾತನಾಡಬೇಕೇ?

A **ಹೌದು, ನಿಮ್ಮ ಕಾಳಜಿಯನ್ನು ನಿಮ್ಮ ವ್ಯವಸ್ಥಾಪಕರೊಂದಿಗೆ ಹಂಚಿಕೊಳ್ಳಿ. ಸಾಧ್ಯವಾದರೆ, ನಿಮ್ಮ ವ್ಯವಸ್ಥಾಪಕರು ಎಲ್ಲಾ ಸಹೋದ್ಯೋಗಿಗಳು ಭಾಗವಹಿಸಬಹುದಾಗುವಂತೆ ತಂಡದ ಸಭೆಗಳನ್ನು ಏರ್ಪಡಿಸಬೇಕು.**

ಗೌರವ, ಘನತೆ ಮತ್ತು ನ್ಯಾಯಯುತ ಉಪಚಾರ

ಅದು ಏಕೆ ಮುಖ್ಯ?

ಒಂದು ವ್ಯವಹಾರವಾಗಿ ಟೆಸ್ಕೊಗೆ ನಮ್ಮ ಎಲ್ಲ ಸಹೋದ್ಯೋಗಿಗಳ ಯೋಗಕ್ಷೇಮ, ಸುರಕ್ಷತೆ ಮತ್ತು ಘನತೆಯು ಅತ್ಯಂತ ಮಹತ್ವದ್ದಾಗಿದೆ. ನಮ್ಮ ವ್ಯವಹಾರದ ಯಾವುದೇ ಕ್ಷೇತ್ರದಲ್ಲಿ ಸ್ವೀಕಾರಾರ್ಹವಲ್ಲದ ನಡವಳಿಕೆಯನ್ನು ನಾವು ಸಹಿಸುವುದಿಲ್ಲ, ಅದು ನಮ್ಮ ಗ್ರಾಹಕರ ಕಡೆಗೆ ಆಗಲಿ, ಇತರ ಸಹೋದ್ಯೋಗಿಗಳು, ಪೂರೈಕೆದಾರರು ಅಥವಾ ಬೇರೆಯವರ ಕಡೆಗೆ ಆಗಲಿ. ಸಹೋದ್ಯೋಗಿಗಳಿಗೆ ಕೆಲಸ ಮಾಡಲು ಟೆಸ್ಕೊ ಒಂದು ಸುರಕ್ಷಿತ ಮತ್ತು ಮುಕ್ತ ವಾತಾವರಣವನ್ನು ಒದಗಿಸುತ್ತದೆ ಎಂದು ಖಚಿತಪಡಿಸಿಕೊಳ್ಳುವ ಜವಾಬ್ದಾರಿಯನ್ನು ನಾವೆಲ್ಲರೂ ಹಂಚಿಕೊಳ್ಳುತ್ತೇವೆ.

ಒಂದು ಸಂಸ್ಕೃತಿಯಲ್ಲಿ ಸ್ವೀಕಾರಾರ್ಹವಾದ ಆದರೆ ಇನ್ನೊಂದು ಸಂಸ್ಕೃತಿಯಲ್ಲಿ ಸ್ವೀಕಾರಾರ್ಹವಲ್ಲದಿರಬಹುದಾದ ಕ್ರಿಯೆಗಳು ಅಥವಾ ನಡವಳಿಕೆಗಳಿಗೆ ನಾವು ಸಂವೇದನಾಶೀಲರಾಗಿರಬೇಕು. ಈ ಕೆಲವು ನಡವಳಿಕೆಗಳು ನಾವು ಕಾರ್ಯನಿರ್ವಹಿಸುವ ಇತರ ದೇಶಗಳಲ್ಲಿ ಕಾನೂನುಬಾಹಿರವೂ ಆಗಿರಬಹುದು. ಟೆಸ್ಕೊದಲ್ಲಿ ಬೆದರಿಸುವಿಕೆ ಮತ್ತು ಕಿರುಕುಳ ಸ್ವೀಕಾರಾರ್ಹವಲ್ಲ. ಈ ವರ್ತನೆಗಳು ನಮ್ಮ ಮೌಲ್ಯಗಳಿಗೆ ವಿರುದ್ಧವಾಗಿರುತ್ತವೆ ಮತ್ತು ಸಹೋದ್ಯೋಗಿಯ ಕೆಲಸದಲ್ಲಿ ತಮ್ಮ ಕರ್ತವ್ಯಗಳನ್ನು ನಿರ್ವಹಿಸುವ ಸಾಮರ್ಥ್ಯದ ಮೇಲೆ ಗಮನಾರ್ಹ ಪರಿಣಾಮ ಬೀರುತ್ತವೆ. ಸ್ವೀಕಾರಾರ್ಹವಲ್ಲದ ನಡವಳಿಕೆಯಲ್ಲಿ ತೊಡಗಿರುವ ಸಹೋದ್ಯೋಗಿಗಳು ವಜಾಗೊಳಿಸುವಿಕೆ ಸೇರಿದಂತೆ ಶಿಸ್ತು ಕ್ರಮ ಮತ್ತು ಕಾನೂನು ಕ್ರಮಗಳಂತಹ ಗಂಭೀರ ಪರಿಣಾಮಗಳನ್ನು ಎದುರಿಸಬಹುದು.

ನನ್ನ ಕುರಿತಂತೆ ಇದು ಏನು ಅರ್ಥ ನೀಡುತ್ತದೆ?

- ಸ್ವಾಗತಾರ್ಹ ಮತ್ತು ಗೌರವಾನ್ವಿತ ಕೆಲಸದ ವಾತಾವರಣವನ್ನು ಸೃಷ್ಟಿಸಿ, ಎಲ್ಲರನ್ನೂ ನೀವು ಉಪಚರಿಸಲ್ಪಡಲು ಬಯಸಿದಂತೆ ಉಪಚರಿಸಿ.
- ಅನುಚಿತ ಹಾಸ್ಯ ಅಥವಾ ಟಿಪ್ಪಣಿಗಳನ್ನು ಮಾಡುವುದು ಸೇರಿದಂತೆ, ತಂಡದ ಯಾವುದೇ ಸದಸ್ಯರು ಅದು ಪ್ರತಿಕೂಲಕರ ಅಥವಾ ಭಯಪಡಿಸುವ ಕೆಲಸದ ವಾತಾವರಣವನ್ನು ಸೃಷ್ಟಿಸುತ್ತದೆ ಎಂದು ಪರಿಗಣಿಸುವ ನಡವಳಿಕೆಯಲ್ಲಿ ತೊಡಗಬೇಡಿ.
- ಅವಹೇಳನಕಾರಿ, ಮಾನಹಾನಿಕರ, ಕಿರುಕುಳ ಅಥವಾ ಆಕ್ರಮಣಕಾರಿ ಎಂದು ಪರಿಗಣಿಸಬಹುದಾದ ದುರುದ್ದೇಶಪೂರಿತ ವದಂತಿಗಳು ಅಥವಾ ಊಹಾಪೋಹಗಳನ್ನು ಹರಡಬೇಡಿ.
- ಡ್ರಗ್ಸ್ ಅಥವಾ ಮದ್ಯದ ಪ್ರಭಾವದಿಂದ ಮುಕ್ತವಾಗಿ ಸುರಕ್ಷಿತ ರೀತಿಯಲ್ಲಿ ಕೆಲಸ ಮಾಡುವ ಮೂಲಕ ನಿಮ್ಮ ಕಾರ್ಯಕ್ಷಮತೆಯ ಜವಾಬ್ದಾರಿಯನ್ನು ತೆಗೆದುಕೊಳ್ಳಿ. ಡ್ರಗ್ಸ್ ಅಥವಾ ಮದ್ಯದ ಪ್ರಭಾವದಡಿ ಕೆಲಸ ಮಾಡುವುದು ಸ್ವತಃ ನಿಮಗೆ ಮತ್ತು ಇತರರಿಗೆ ಅಪಾಯಕಾರಿ ಮತ್ತು ಅದು ಸಹಿಸಿಕೊಳ್ಳಲಾಗದ ಸುರಕ್ಷತೆಯ ಅಪಾಯಗಳನ್ನು ಹೊಂದಿದೆ ಮತ್ತು ಅದು ಕಾನೂನುಬಾಹಿರವಾಗಿರಬಹುದು.
- ಆಫ್-ಸೈಟ್ ಘಟನೆಗಳನ್ನು ನಿಭಾಯಿಸುವಾಗ ನೀವು ಕೆಲಸ ಮಾಡುವಾಗ ನಡೆದುಕೊಳ್ಳುವಂತೆಯೇ ನಡೆದುಕೊಳ್ಳಿ. ಕಂಪನಿ-ಆಯೋಜಿತ ಸಮಾರಂಭಗಳಲ್ಲಿ ಕ್ರಿಸ್‌ಮಸ್ ಪಾರ್ಟಿಗಳು, ತಂಡದ ಸಮಾರಂಭಗಳು ಮತ್ತು ಸಾಮಾಜಿಕ ಪ್ರವಾಸಗಳಂತಹ ಸಾಮಾಜಿಕ ಸಮಾರಂಭಗಳು ಸೇರಿವೆ.

ಪ್ರಶ್ನೆಗಳು & ಉತ್ತರಗಳು

Q ನನ್ನ ಲೈನ್ ಮ್ಯಾನೇಜರ್ ನಮ್ಮ ತಂಡದ ಸಹೋದ್ಯೋಗಿಗಳೊಂದಿಗೆ ಹೆದರಿಸುವಂತ ಮತ್ತು ನಿಂದಿಸುವ ವರ್ತನೆಯಲ್ಲಿ ತೊಡಗಬಹುದು. ಆತ ಒಬ್ಬ ಪರಿಪೂರ್ಣತಾವಾದಿ ಎಂದು ನಮಗೆ ತಿಳಿದಿದೆ, ಆದರೆ ಇದು ನಮ್ಮ ಕೆಲಸವನ್ನು ಆನಂದಿಸಲಾಗದಂತೆ ಮತ್ತು ಕಷ್ಟಕರವಾಗಿಸುತ್ತದೆ. ನಾನೇನಾದರೂ ಎದ್ದು ಮಾತನಾಡಿದರೆ ಅವನು ಇನ್ನೂ ಕೆಟ್ಟವನಾಗಬಹುದು ಎಂದು ನಾನು ಭಾವಿಸುತ್ತೇನೆ. ನಾನು ಏನು ಮಾಡಬೇಕು?

A **ಅದನ್ನು ಯಾರೇ ಮಾಡುತ್ತಿದ್ದರೂ ನಿಂದನೆ ಅಥವಾ ಹೆದರಿಸುವ ವರ್ತನೆ ಎಂದಿಗೂ ಸ್ವೀಕಾರಾರ್ಹವಲ್ಲ. ನಮ್ಮ ಸಂಸ್ಕೃತಿ ಗೌರವ ಮತ್ತು ಅಂತರ್ಗತತೆಯದಾಗಿದೆ ಮತ್ತು ಅಂತಹ ಯಾವುದೇ ವರ್ತನೆಗಳನ್ನು ಇನ್ನೊಬ್ಬ ವ್ಯವಸ್ಥಾಪಕರಿಗೆ, ಜನ ತಂಡಕ್ಕೆ ಅಥವಾ ಪ್ರೊಟೆಕ್ಟರ್ ಲೈನ್ Protector Line ಮೂಲಕ ವರದಿ ಮಾಡಬೇಕು. ಒಳ್ಳೆಯ ನಂಬಿಕೆಯಲ್ಲಿ ಕಳವಳ ವ್ಯಕ್ತಪಡಿಸುವ ಸಹೋದ್ಯೋಗಿಗಳನ್ನು ನಾವು ಯಾವಾಗಲೂ ಬೆಂಬಲಿಸುತ್ತೇವೆ.**

Q ಸ್ನೇಹಿತನೊಬ್ಬ ನನಗೆ ತುಂಬಾ ತಮಾಷೆ ಅನಿಸುವ ಕೆಲವು ಅಸಭ್ಯ ಜೋಕ್‌ಗಳೊಂದಿಗೆ ಇಮೇಲ್ ವೊಂದನ್ನು ಕಳುಹಿಸಿದ್ದಾನೆ. ಅವುಗಳನ್ನು ನಾನು ನನ್ನ ತಂಡದ ಸಹೋದ್ಯೋಗಿಗಳಿಗೆ ಇಮೇಲ್ ಮಾಡಬಹುದೇ?

A **ಇಲ್ಲ. ನಾವು ಎಲ್ಲ ಸಹೋದ್ಯೋಗಿಗಳನ್ನು ಗೌರವ ಮತ್ತು ಘನತೆಯೊಂದಿಗೆ ಕಾಣುತ್ತೇವೆ ಮತ್ತು ನೀವು ತಮಾಷೆಯೆಂದು ಪರಿಗಣಿಸುವದನ್ನು ಇತರರು ನಿಂದನೀಯ ಅಥವಾ ಆಕ್ರಮಣಕಾರಿ ಎಂದು ಪರಿಗಣಿಸಬಹುದು. ನಿಮ್ಮ ಕಾರ್ಯಗಳು ಆಕ್ರಮಣಕಾರಿ, ನಿಂದನೀಯ ಅಥವಾ ಇತರರನ್ನು ಬೆದರಿಸುವಂತಹದ್ದಾಗಿರಬಹುದೇ ಎಂದು ಯಾವಾಗಲೂ ನಿಮ್ಮನ್ನು ನೀವು ಕೇಳಿಕೊಳ್ಳಿ. ಇದರಲ್ಲಿ ನೀವು ಕೆಲಸದಲ್ಲಿರುವಾಗ ಯಾವುದೇ ಸೂಕ್ತವಲ್ಲದ ಸಂಗತಿಗಳನ್ನು ವೀಕ್ಷಿಸುವುದು ಸೇರಿದೆ.**

Q ಸಹೋದ್ಯೋಗಿಯೊಬ್ಬ ಮನೆಯಲ್ಲಿ ಕೆಲವು ಕಷ್ಟದ ಸಮಯಗಳನ್ನು ಅನುಭವಿಸುತ್ತಿರುವುದು ನನಗೆ ತಿಳಿದಿದೆ. ಇತ್ತೀಚೆಗೆ, ಆತ ಕೆಲಸಕ್ಕೆ ತಡವಾಗಿ ಬರುತ್ತಿದ್ದಾರೆ ಮತ್ತು ಕೆಲವೊಮ್ಮೆ ನಶೆಯಲ್ಲಿರುವಂತೆ ಕಾಣಿಸಿಕೊಳ್ಳುತ್ತಾರೆ. ಅವರು ಇನ್ನೂ ತಮ್ಮ ಕೆಲಸವನ್ನು ಪೂರ್ಣಗೊಳಿಸುತ್ತಿದ್ದಾರೆ ಆದ್ದರಿಂದ ನಾನು ಏನನ್ನಾದರೂ ಹೇಳಬೇಕೆ ಬೇಡವೇ ಎಂದು ನನಗೆ ಖಚಿತವಿಲ್ಲ. ನಾನು ಮಾತನಾಡಬೇಕೇ?

A **ಹೌದು. ನಿಮ್ಮ ಸಹೋದ್ಯೋಗಿಯ ಒಳಿತಿಗಾಗಿ ಅವರು ತಮ್ಮ ಅಥವಾ ಇತರರಿಗೆ ಅಪಾಯಕಾರಿಯಾದ ನಡವಳಿಕೆಗಳಲ್ಲಿ ತೊಡಗಿಕೊಂಡಿದ್ದಾರೆ ಎಂದು ನಿಮಗನಿಸಿದರ ನೀವು ಯಾವಾಗಲೂ ನಿಮ್ಮ ಕಳವಳವನ್ನು ಎತ್ತಬೇಕು. ಇದು ಡ್ರಗ್ಸ್ ಅಥವಾ ಮದ್ಯದ ಬಳಕೆಯನ್ನೂ ಒಳಗೊಂಡಿದೆ. ನಿಮಗೆ ಅವರೊಂದಿಗೆ ನೇರವಾಗಿ ಮಾತನಾಡಲು ಸಾಧ್ಯವಾಗದಿದ್ದರೆ, ನಿಮ್ಮ ಜನ ತಂಡ ಅಥವಾ ಲೈನ್ ಮ್ಯಾನೇಜರ್‌ರೊಂದಿಗೆ ಮಾತನಾಡಿ.**

Q ಪುರುಷ ವ್ಯವಸ್ಥಾಪಕರೊಬ್ಬರು ಒಬ್ಬ ಮಹಿಳಾ ಸಹೋದ್ಯೋಗಿಯೊಂದಿಗೆ ಅನುಚಿತವಾಗಿ ವರ್ತಿಸುತ್ತಿದ್ದಾರೆ ಎಂದು ನನಗೆ ಹೆದರಿಕೆ ಇದೆ. ಅವರು ಮಾತನಾಡುವಾಗ ಅವನು ಅವಳೊಂದಿಗೆ ತುಂಬಾ ಹತ್ತಿರದಲ್ಲಿ ನಿಲ್ಲುತ್ತಾನೆ ಮತ್ತು WhatsAppನಲ್ಲಿ ಅವನು ಅವಳಿಗೆ ವೈಯಕ್ತಿಕ ಸಂದೇಶಗಳನ್ನು ಕಳುಹಿಸುತ್ತಿದ್ದಾನೆ ಎಂದು ನನಗೆ ತಿಳಿದಿದೆ. ನಾನು ಏನು ಮಾಡಬೇಕು?

A **ನೀವು ಮೊದಲು ನಿಮ್ಮ ಕಳವಳಗಳ ಬಗ್ಗೆ ನಿಮ್ಮ ವ್ಯವಸ್ಥಾಪಕರಿಗೆ ತಿಳಿಸಬೇಕು. ನಿಮ್ಮ ಕಳವಳವನ್ನು ನಿಮ್ಮ ವ್ಯವಸ್ಥಾಪಕರಿಗೆ ತಿಳಿಸಲು ನಿಮಗೆ ಸೌಖ್ಯವಾಗದಿದ್ದರೆ, ನೀವು ನಿಮ್ಮ ಜನ ತಂಡವನ್ನು ಸಂಪರ್ಕಿಸಬಹುದು ಅಥವಾ ಇದನ್ನು ಪ್ರೊಟೆಕ್ಟರ್ ಲೈನ್ Protector Line ಮೂಲಕ ಎತ್ತಬಹುದು. ಕಿರುಕುಳಕ್ಕೆ ಸಂಬಂಧಿಸಿದ ಎಲ್ಲಾ ಕಳವಳಗಳನ್ನು ಗಂಭೀರವಾಗಿ ಪರಿಗಣಿಸಲಾಗುವುದು ಮತ್ತು ತನಿಖೆ ನಡೆಸಲಾಗುವುದು.**

ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

- ಜನ ತಂಡ
- ಬೆದರಿಸುವ & ಕಿರುಕುಳ ನೀತಿ

3. ನ್ಯಾಯೋಚಿತವಾಗಿ ವ್ಯವಹರಿಸುವುದು

ನಮ್ಮ ಮೌಲ್ಯಗಳು ನಮಗೆ ಪೂರೈಕೆದಾರರೊಂದಿಗಿನ ನಮ್ಮ ಬಲವಾದ ಸಂಬಂಧಗಳನ್ನು ರಾಜಿ ಮಾಡಿಕೊಳ್ಳದೆಯೇ ನಮ್ಮ ಗ್ರಾಹಕರಿಗೆ ನಾವೇ ಮೊದಲಿಗರಾಗಿರಲು ಸಹಾಯ ಮಾಡುತ್ತವೆ.

ಸಂಹಿತೆಯ ಈ ವಿಭಾಗವು ನಮ್ಮ ಮಳಿಗೆಗಳಲ್ಲಿ ಮಾರಾಟವಾಗುವ ಉತ್ಪನ್ನಗಳನ್ನು ನಾವು ಹೇಗೆ ಖರೀದಿಸುತ್ತೇವೆ ಎಂಬುದಕ್ಕೆ ನಿರ್ಣಾಯಕವಾದಂತ ಸಮಸ್ಯೆಗಳನ್ನು ಒಳಗೊಂಡಿದೆ.

ಸ್ಪರ್ಧಾ ಕಾನೂನುಗಳು ಪುಟ 30

ಪ್ರತಿಷೇಧಗಳು & ರಫ್ತು ನಿಯಂತ್ರಣಗಳು ಪುಟ 32

ಮಾನವ ಹಕ್ಕುಗಳು & ನೈತಿಕ ವ್ಯಾಪಾರ ಪುಟ 34

ಪೂರೈಕೆದಾರರನ್ನು ರಕ್ಷಿಸುವ ಕಾನೂನುಗಳು ಪುಟ 36

ಬ್ರ್ಯಾಂಡ್‌ಗಳು & ಬೌದ್ಧಿಕ ಆಸ್ತಿ ಪುಟ 38

ಸ್ಪರ್ಧಾ ಕಾನೂನುಗಳು

ಅದು ಏಕೆ ಮುಖ್ಯ?

ನಮ್ಮ ಗ್ರಾಹಕರು ನಾವು ಪ್ರತಿ ಮಾರುಕಟ್ಟೆಯಲ್ಲಿ ನ್ಯಾಯಯುತವಾಗಿ ಮತ್ತು ಸ್ವತಂತ್ರವಾಗಿ ಸ್ಪರ್ಧಿಸಬೇಕೆಂದು ನಿರೀಕ್ಷಿಸುತ್ತಾರೆ. ಆರೋಗ್ಯಕರ ಸ್ಪರ್ಧೆಯು ಬೆಲೆಗಳನ್ನು ಇಳಿಸುತ್ತದೆ, ವ್ಯಾಪಕ ಆಯ್ಕೆಯನ್ನು ಒದಗಿಸುತ್ತದೆ ಮತ್ತು ಉತ್ತಮ ಉತ್ಪನ್ನಗಳನ್ನು ತರುತ್ತದೆ. ನಮ್ಮ ಗ್ರಾಹಕರಿಗೆ ಉತ್ತಮ ಕೊಳ್ಳುವಿಕೆ ಅನುಭವವನ್ನು ನೀಡಲು ನಾವು ನಮ್ಮ ಸ್ಪರ್ಧಿಗಳೊಂದಿಗೆ ತೀವ್ರವಾಗಿ ಸ್ಪರ್ಧಿಸುತ್ತೇವೆ.

ಸ್ಪರ್ಧೆಯನ್ನು ರಕ್ಷಿಸಲು ನಮ್ಮ ಎಲ್ಲಾ ಮಾರುಕಟ್ಟೆಗಳಲ್ಲಿ ಶಾಸನಗಳು ಅಸ್ತಿತ್ವದಲ್ಲಿವೆ ಮತ್ತು ಕಾನೂನನ್ನು ಮುರಿಯುವ ಕಂಪನಿಗಳು ಮತ್ತು ವ್ಯಕ್ತಿಗಳಿಗೆ ಗಮನಾರ್ಹವಾದ ದಂಡಗಳಿವೆ. ತನಿಖೆಗಳು ವ್ಯವಹಾರಕ್ಕೆ ವಿಚ್ಛಿದ್ರಕಾರಕ ಮತ್ತು ದುಬಾರಿಯಾಗಿರುತ್ತವೆ ಮತ್ತು ಗ್ರಾಹಕರು ನಮ್ಮಲ್ಲಿ ಇರಿಸಿದ ನಂಬಿಕೆಯನ್ನು ಹಾನಿಗೊಳಿಸಬಹುದು.

ನನ್ನ ಕುರಿತಂತೆ ಇದು ಏನು ಅರ್ಥ ನೀಡುತ್ತದೆ?

ಸ್ಪರ್ಧಿಗಳೊಂದಿಗೆ ಸಂಪರ್ಕ

- ಯಾವಾಗಲೂ ಸ್ವತಂತ್ರವಾಗಿ ವರ್ತಿಸಿ. ನಮ್ಮ ನಡುವಿನ ಸ್ಪರ್ಧೆಯನ್ನು ಕಡಿಮೆ ಮಾಡಲು ಎಂದಿಗೂ ಸ್ಪರ್ಧಿಗಳೊಂದಿಗೆ ಒಪ್ಪಬೇಡಿ. ಬೆಲೆಗಳನ್ನು ಅಥವಾ ನಾವು ಎಲ್ಲಿ ಕಾರ್ಯನಿರ್ವಹಿಸುತ್ತೇವೆ ಅಥವಾ ಕಾರ್ಯನಿರ್ವಹಿಸುವುದಿಲ್ಲ ಎಂಬುದಾಗಿ ಹೊಂದಾಣಿಕೆ ಮಾಡಿಕೊಳ್ಳಲು ನೀವು ಒಪ್ಪುವಂತಿಲ್ಲ.
- ಪ್ರತಿಸ್ಪರ್ಧಿಗಳಿಂದ ನೀವು ಗೌಪ್ಯ, ವಾಣಿಜ್ಯಿಕವಾಗಿ ಸೂಕ್ಷ್ಮ ಮಾಹಿತಿಯನ್ನು ಕೇಳಬಾರದು, ಸ್ವೀಕರಿಸಬಾರದು ಅಥವಾ ಅವರೊಂದಿಗೆ ಹಂಚಿಕೊಳ್ಳಬಾರದು. ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯವಾಗುವಂತೆ ನೀವು ಸಾರ್ವಜನಿಕ ವ್ಯಾಪ್ತಿಯಲ್ಲಿನ ಮಾಹಿತಿಯನ್ನು ಬಳಸಬಹುದು.

ಪೂರೈಕೆದಾರರೊಂದಿಗೆ ಸಂಪರ್ಕ

- ನೀವು ಪೂರೈಕೆದಾರರಿಂದ ಯಾವುದೇ ಪ್ರತಿಸ್ಪರ್ಧಿಯ ಬಗ್ಗೆ ಗೌಪ್ಯ, ವಾಣಿಜ್ಯಿಕವಾಗಿ ಸೂಕ್ಷ್ಮ ಮಾಹಿತಿಯನ್ನು ಕೇಳಬಾರದು ಅಥವಾ ಸ್ವೀಕರಿಸಬಾರದು.
- ನಮ್ಮ ಪೂರೈಕೆದಾರರ ಗೌಪ್ಯ ಮಾಹಿತಿಯನ್ನು ಗೌಪ್ಯವಾಗಿಡಿ ಮತ್ತು ಅದನ್ನು ಅವರ ಪ್ರತಿಸ್ಪರ್ಧಿಗಳೊಂದಿಗೆ ಹಂಚಿಕೊಳ್ಳಬೇಡಿ.
- ನೀವು ಪೂರೈಕೆದಾರರನ್ನು ನಮಗೆ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯವಾಗುವಂತ ಸಾರ್ವಜನಿಕ ವ್ಯಾಪ್ತಿಯಲ್ಲಿನ ಮಾಹಿತಿಯನ್ನು ಕೇಳಬಹುದು.

ಬಿಡಿ ಮಾರಾಟ ಬೆಲೆಗಳನ್ನು ನಿಗದಿಪಡಿಸುವುದು

- ಯಾವಾಗಲೂ ಬಿಡಿ ಮಾರಾಟ ಬೆಲೆಗಳನ್ನು ಸ್ವತಂತ್ರವಾಗಿ ನಿಗದಿಪಡಿಸಿ.
- ಪೂರೈಕೆದಾರರೊಂದಿಗೆ ಬೆಲೆ ಕುರಿತ ಸಮಾಲೋಚನೆಗಳ ಸಮಯದಲ್ಲಿ ಯಾವಾಗಲೂ ವೆಚ್ಚಗಳತ್ತ ಗಮನವಿಡಿ. ಪೂರೈಕೆದಾರರು ನಮಗೆ ಬೆಲೆಗಳ ಶಿಫಾರಸು ನೀಡಬಹುದು ಆದರೆ ಸ್ಥಿರ ಅಥವಾ ಕನಿಷ್ಠ ಬೆಲೆಗಳನ್ನು ನೀಡುವಂತಿಲ್ಲ.

ಹಿಂದೆ ತಳ್ಳುವಿಕೆ ಪ್ರಕ್ರಿಯೆ

- ನೀವೇನಾದರು ಪ್ರತಿಸ್ಪರ್ಧಿಗಳು ಅಥವಾ ಪೂರೈಕೆದಾರರ ಕುರಿತು ಚಿಂತೆಗೆ ಕಾರಣವಾಗುವಂತಹ ಮಾಹಿತಿಯನ್ನು ಸ್ವೀಕರಿಸಿದರೆ ಅಥವಾ ಅವರೊಂದಿಗೆ ಯಾವುದೇ ಸಂಪರ್ಕವನ್ನು ಹೊಂದಿದ್ದರೆ, ನೀವು ಹಿಂದೆ ತಳ್ಳುವಿಕೆ ಪ್ರಕ್ರಿಯೆಯನ್ನು ಅನುಸರಿಸಬೇಕು. ನೀವು ಸಕ್ರಿಯವಾಗಿ ಭಾಗವಹಿಸಿರದಿದ್ದರೂ ಅಥವಾ ಮಾಹಿತಿಯನ್ನು ತಪ್ಪಾಗಿ ಸ್ವೀಕರಿಸಿದ್ದರೂ ಸಹ, ಮಾಹಿತಿಯನ್ನು ಸುಮ್ಮನೇ ನಿರ್ಲಕ್ಷಿಸುವುದಷ್ಟೇ ಸಾಕಾಗುವುದಿಲ್ಲ.

ದಸ್ತಾವೇಜು ಸೃಷ್ಟಿ

- ನಮ್ಮ ವ್ಯವಹಾರ, ನಮ್ಮ ಗ್ರಾಹಕರು, ಪೂರೈಕೆದಾರರು ಅಥವಾ ಪ್ರತಿಸ್ಪರ್ಧಿಗಳ ಬಗ್ಗೆ ಬರೆಯುವಾಗ ಕಾಳಜಿ ವಹಿಸಿ. ಇ-ಮೇಲ್ಗಳು, ಪಠ್ಯ ಸಂದೇಶಗಳು, ಸಮಿತಿ ಪತ್ರಿಕೆಗಳು ಮತ್ತು ಆಸ್ತಿ ವರದಿಗಳು ಸೇರಿದಂತೆ ಬಹುತೇಕ ಆಂತರಿಕ ದಾಖಲೆಗಳನ್ನು ತನಿಖೆಯ ಸಮಯದಲ್ಲಿ ನಿಯಂತ್ರಕರು ವೀಕ್ಷಿಸಬಹುದು ಎಂಬುದನ್ನು ನೆನಪಿಡಿ.

ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

- ಗ್ರೂಪ್ ಕಾನೂನು ಸ್ಪರ್ಧಾ ಕಾಯ್ದೆ ತಂಡ ಅಥವಾ ಸ್ಥಳೀಯ ಕಾನೂನು ತಂಡ
- ಸ್ಪರ್ಧಾ ನೀತಿ ಮತ್ತು ಮಾರ್ಗದರ್ಶನ
- ಹಿಂದೆ ತಳ್ಳುವಿಕೆ ಪ್ರಕ್ರಿಯೆಗೆ ಮಾರ್ಗದರ್ಶನ

ಪ್ರಶ್ನೆಗಳು & ಉತ್ತರಗಳು

Q ಟ್ರೇಡ್ ಅಸೋಸಿಯೇಶನ್ ಸಭೆಯಲ್ಲಿ ಭಾಗವಹಿಸುವಂತೆ ನನ್ನನ್ನು ಕೇಳಲಾಗಿದೆ. ನಾನು ಭಾಗವಹಿಸಬಹುದೇ?

A **ಹೌದು, ಈ ಸಭೆಗಳು ಸ್ವತಃ ತಮ್ಮಲ್ಲಿಯೇ ಸಮಸ್ಯಾತ್ಮಕವೇನಲ್ಲ ಮತ್ತು ಸ್ಪರ್ಧಾತ್ಮಕತೆಯ ಪರವಾಗಿರಬಹುದು. ಆದಾಗ್ಯೂ, ಸಾಮಾನ್ಯ ಸ್ಪರ್ಧೆಯ ನಿಯಮಗಳು ಅನ್ವಯವಾಗುತ್ತವೆ - ಪ್ರತಿಸ್ಪರ್ಧಿಯೊಂದಿಗೆ ವಾಣಿಜ್ಯಿಕವಾಗಿ ಸೂಕ್ಷ್ಮವಾಗಿರುವ ಮಾಹಿತಿಯನ್ನು ಚರ್ಚಿಸುವುದಿಲ್ಲ, ಬಹಿರಂಗಪಡಿಸುವುದಿಲ್ಲ ಅಥವಾ ವಿನಿಮಯ ಮಾಡಿಕೊಳ್ಳುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಿ. "ಪ್ರತಿಸ್ಪರ್ಧಿಗಳೊಂದಿಗಿನ ಸಭೆಗಳು" ಮಾರ್ಗಸೂಚಿಗಳನ್ನು ನೋಡಿ.**

Q ಸಭೆಗೆ ನಾನು ಒಂದಕ್ಕಿಂತ ಹೆಚ್ಚು ಜನ ಪೂರೈಕೆದಾರರನ್ನು ಆಹ್ವಾನಿಸಬಹುದೇ?

A **ಕಾಲಕಾಲಕ್ಕೆ, ಉದಾಹರಣೆಗೆ, ನಮ್ಮ ವ್ಯವಹಾರದಲ್ಲಿನ ಪ್ರಮುಖ ಬದಲಾವಣೆಗಳ ಬಗ್ಗೆ ಸಾರಾಂಶವನ್ನು ಪೂರೈಕೆದಾರರಿಗೆ ತಿಳಿಸಲು ಅಥವಾ ಪೂರೈಕೆ ಸರಪಳಿಯ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಉತ್ತಮ ಅಭ್ಯಾಸಗಳನ್ನು ಚರ್ಚಿಸಲು ಪೂರೈಕೆದಾರರನ್ನು ಜಂಟಿ ಸಭೆಗೆ ಆಹ್ವಾನಿಸುವುದು ಸೂಕ್ತವಾಗಿರಬಹುದು. ಆದಾಗ್ಯೂ, ಈ ಸಭೆಗಳು ಸೂಕ್ಷ್ಮವಾಗಿರುತ್ತವೆ ಏಕೆಂದರೆ ಅವುಗಳು ಹೆಚ್ಚಾಗಿ ಪ್ರತಿಸ್ಪರ್ಧಿಗಳಾಗಿರುವ ಪೂರೈಕೆದಾರರನ್ನು ಒಳಗೊಂಡಿರುತ್ತವೆ. "ಜಂಟಿ ಪೂರೈಕೆದಾರರ ಸಭೆಗಳು" ಮಾರ್ಗಸೂಚಿಗಳನ್ನು ನೋಡಿ ಮತ್ತು ಸಭೆಗಳಲ್ಲಿ ಯಾವುದೇ ಅನುಚಿತ ಚಟುವಟಿಕೆ ನಡೆಯದಂತೆ ನೋಡಿಕೊಳ್ಳಿ.**

Q ನಾನು ಸ್ನೇಹಿತರೊಬ್ಬರಿಂದ ಪ್ರತಿಸ್ಪರ್ಧಿಯ ಬಗ್ಗೆ ವಾಣಿಜ್ಯಿಕವಾಗಿ ಸೂಕ್ಷ್ಮ ಮಾಹಿತಿಯನ್ನು ಸ್ವೀಕರಿಸಿದ್ದೇನೆ. ನಾನು ಅದನ್ನು ನಿರ್ಲಕ್ಷಿಸಬಹುದೇ?

A **ಇಲ್ಲ, ಅನೌಪಚಾರಿಕ ಸನ್ನಿವೇಶದಲ್ಲಿ ಸ್ವೀಕರಿಸಿದರೂ ಕೂಡ ಅಂತಹ ಮಾಹಿತಿಯನ್ನು ನಿರ್ಲಕ್ಷಿಸುವುದಷ್ಟೇ ಸಾಕಾಗುವುದಿಲ್ಲ. ಅಂತಹ ಮಾಹಿತಿಯನ್ನು ನೀವು ದೃಷ್ಟಿಗೋಚರವಾಗಿ ನಿರ್ಲಕ್ಷಿಸುತ್ತಿದ್ದೀರಿ ಮತ್ತು ಈ ಮಾಹಿತಿಯನ್ನು ನೀವು ಬಳಸಿಕೊಂಡಿಲ್ಲ ಎಂಬುದನ್ನು ನಿರೂಪಿಸಲು ಒಂದು ಆಡಿಟ್ ಜಾಡನ್ನು ಹೊಂದಿರುವಿರಿ ಎಂಬುದನ್ನು ಖಚಿತಪಡಿಸಿಕೊಳ್ಳಲೆಂದು ವಿನ್ಯಾಸಗೊಳಿಸಲಾದ ನೀವು ಹಿಂದೆ ತಳ್ಳುವಿಕೆ ಪ್ರಕ್ರಿಯೆಯನ್ನು ಅನುಸರಿಸಬೇಕು.**

ಪ್ರತಿಷೇಧಗಳು & ರಫ್ತು ನಿಯಂತ್ರಣಗಳು

ಅದು ಏಕೆ ಮುಖ್ಯ?

ಕಾಲಕಾಲಕ್ಕೆ, ಸರ್ಕಾರಗಳು ಕೆಲವು ದೇಶಗಳಿಂದ ಖರೀದಿಸುವಿಕೆ ಅಥವಾ ಪ್ರಯಾಣಿಸುವಿಕೆಗಳ ಮೇಲೆ ನಿರ್ಬಂಧಗಳನ್ನು ವಿಧಿಸುತ್ತವೆ. ನಮ್ಮನ್ನು ಕೆಲ ಹೆಸರಿಸಲಾದ ವ್ಯಕ್ತಿಗಳೊಂದಿಗೆ ವ್ಯಾಪಾರ ಮಾಡುವುದರಿಂದ ಕೂಡ ನಿಷೇಧಿಸಬಹುದು. ಪ್ರಪಂಚದಾದ್ಯಂತ ವ್ಯಾಪಾರ ಮಾಡುವಾಗ ನಾವು ಯಾವಾಗಲೂ ಈ ನಿರ್ಬಂಧಗಳ ಬಗ್ಗೆ ಅರಿತಿರಬೇಕು. ಇಂದಿನ ಜಾಗತೀಕೃತ ಜಗತ್ತಿನಲ್ಲಿ, ಸರ್ಕಾರಗಳು ಮಾತ್ರವಲ್ಲ, ನಮ್ಮ ಗ್ರಾಹಕರು ಕೂಡ ನಾವು ಕೆಲವು ದೇಶಗಳು, ಕಂಪನಿಗಳು ಅಥವಾ ವ್ಯಕ್ತಿಗಳೊಂದಿಗೆ ವ್ಯವಹಾರ ಮಾಡುವಾಗ ಪ್ರತಿಷೇಧಗಳು ಅಥವಾ ನಿರ್ಬಂಧಗಳ ಬಗ್ಗೆ ತಿಳಿದಿರಬೇಕೆಂದು ನಿರೀಕ್ಷಿಸುತ್ತಾರೆ.

ನಾವೇನಾದರೂ ವ್ಯಾಪಾರ ನಿರ್ಬಂಧಗಳನ್ನು ಮುರಿದರೆ, ಇದು ಗ್ರಾಹಕರು ನಮ್ಮ ಬ್ರ್ಯಾಂಡ್‌ನ ಮೇಲೆ ಹೊಂದಿರುವ ನಂಬಿಕೆಯನ್ನು ಹಾನಿಗೊಳಿಸಬಹುದು ಮತ್ತು ವ್ಯಾಪಾರಕ್ಕೆ ಮತ್ತು ಸಹೋದ್ಯೋಗಿಗಳಿಗೆ ದೊಡ್ಡಪ್ರಮಾಣದ ಆರ್ಥಿಕ ದಂಡ ಮತ್ತು ಜೈಲು ಶಿಕ್ಷೆಗೆ ಕಾರಣವಾಗಬಹುದು.

ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

- ಗ್ರೂಪ್ ಕಾನೂನು ವ್ಯವಹಾರ ಸಮಗ್ರತಾ ತಂಡ ಅಥವಾ ಸ್ಥಳೀಯ ಕಾನೂನು ತಂಡ
- ಜವಾಬ್ದಾರಿಯುತ ಸಂಗ್ರಹಣಾ ತಂಡ ಅಥವಾ ಸ್ಥಳೀಯ ಗುಣಮಟ್ಟ ತಂಡ

ನನ್ನ ಕುರಿತಂತೆ ಇದು ಏನು ಅರ್ಥ ನೀಡುತ್ತದೆ?

ನೀವೇನಾದರು ಅಂತರರಾಷ್ಟ್ರೀಯ ಮಟ್ಟದಲ್ಲಿ ಸರಕು ಅಥವಾ ಸೇವೆಗಳನ್ನು ಖರೀದಿಸುವುದು, ಸಾಗಿಸುವುದು ಅಥವಾ ಮಾರಾಟ ಮಾಡುವುದರಲ್ಲಿ ತೊಡಗಿದ್ದರೆ, ಈ ಕುರಿತು ಜಾಗರೂಕರಾಗಿರಿ:

- ಯಾವುದೇ ಒಂದು ದೇಶದಿಂದ ಖರೀದಿಸುವುದು ಅಥವಾ ಅಲ್ಲಿ ಮಾರಾಟ ಮಾಡುವುದು ಸೂಕ್ತವೇ ಎಂಬುದನ್ನು ಪರಿಗಣಿಸಿ.
- ಪ್ರತಿಷೇಧಗಳು ಅಥವಾ ಪ್ರಯಾಣ ನಿರ್ಬಂಧಗಳಿಗೆ ಒಳಪಟ್ಟಂತ ದೇಶಗಳಿಂದ ಖರೀದಿಸಬಾರದು, ಅಥವಾ ಅಲ್ಲಿ ಪ್ರಯಾಣಿಸಬಾರದು.
- ಯುಎನ್ ಅಥವಾ ಇತರ ಪ್ರತಿಷೇಧಗಳ ವೀಕ್ಷಣಾಪಟ್ಟಿಗಳಲ್ಲಿ ಕಂಡುಬರುವ ವ್ಯಕ್ತಿಗಳು ಅಥವಾ ಕಂಪನಿಗಳೊಂದಿಗೆ ಕೆಲಸ ಮಾಡಬೇಡಿ.
- ನಿಮ್ಮ ಚಟುವಟಿಕೆಗಳಿಗೆ ಯಾವುದಾದರು ನಿರ್ಬಂಧಗಳು ಅಥವಾ ಪ್ರತಿಷೇಧಗಳು ಅನ್ವಯವಾಗುತ್ತವೆಯೇ ಎಂದು ನಿಮಗೆ ಸ್ಪಷ್ಟವಾಗಿರದಿದ್ದರೆ ಕಾನೂನು ಸಲಹೆ ಪಡೆದುಕೊಳ್ಳಿ.
- ನಿಮ್ಮ ಹೊಸ ಪೂರೈಕೆದಾರರೊಂದಿಗೆ ನೀವು ವ್ಯವಹಾರ ಮಾಡಲು ಪ್ರಾರಂಭಿಸುವ ಮುನ್ನ ಅವರನ್ನು ಸರಿಯಾಗಿ ಪರಿಶೀಲಿಸಲಾಗಿದೆ ಮತ್ತು ಅನುಮೋದಿಸಲಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ. ಅಂದರೆ ಸಮಗ್ರತೆಯ ಅಗತ್ಯ ತಪಾಸಣೆಯನ್ನು ಪೂರ್ಣಗೊಳಿಸುವುದು ಎಂದರ್ಥ.
- ಯಾರಾದರೂ ವ್ಯಾಪಾರ ನಿರ್ಬಂಧಗಳನ್ನು ಉಲ್ಲಂಘಿಸುತ್ತಿದ್ದಾರೆಂದು ನೀವು ಭಾವಿಸಿದರೆ ಮಾತನಾಡಿ ಗಮನಕ್ಕೆ ತನ್ನಿ: ಎಲ್ಲಾ ಶಂಕಿತ ಉಲ್ಲಂಘನೆಗಳನ್ನು ನಿಮ್ಮ ಸ್ಥಳೀಯ ಕಾನೂನು ನಿರ್ದೇಶಕರಿಗೆ ಅಥವಾ ಪ್ರೊಟೆಕ್ಟರ್ ಲೈನ್ Protector Line ಬಳಸಿ ವರದಿ ಮಾಡಬೇಕು.

ಪ್ರಶ್ನೆಗಳು & ಉತ್ತರಗಳು

Q ನಾನು ಸಂಗ್ರಹಣೆ ಮಾಡಲು ಹೊಸ ಮಾರುಕಟ್ಟೆಗಳನ್ನು ಹುಡುಕುತ್ತಿರುವ ಒಬ್ಬ ಖರೀದಿದಾರ. ನಾನು ಬಳಸಲಾರಂಭಿಸಲು ಬಯಸುವ ಒಬ್ಬ ಉತ್ತಮ ಪೂರೈಕೆದಾರನನ್ನು ನಾನು ಹುಡುಕಿದ್ದೇನೆ. ಆ ವ್ಯವಹಾರ ಅಲ್ಲದಿದ್ದರೂ ಕಂಪನಿಯ ಮಾಲೀಕರು ಒಂದು ಪ್ರತಿಷೇಧಿತ ದೇಶದಲ್ಲಿದ್ದಾರೆ ಎಂಬುದು ಯೋಚಿಸಬೇಕಾದ ಸಂಗತಿಯೇ?

A **ಹೌದು. ಪ್ರತಿಷೇಧಗಳ ಕಾನೂನುಗಳು ಸಾಮಾನ್ಯವಾಗಿ ಬಹಳ ಸ್ಥೂಲವಾಗಿರುತ್ತವೆ ಮತ್ತು ಸಮಸ್ಯೆಯಲ್ಲಿನ ದೇಶವನ್ನಷ್ಟೇ ಅಲ್ಲದೆ ಪ್ರತಿಷೇಧದಡಿಯ ಎಲ್ಲಾ ನಾಗರಿಕರು ಅಥವಾ ವ್ಯಕ್ತಿಗಳನ್ನೂ ಒಳಗೊಂಡಿರುತ್ತವೆ. ಯಾವಾಗಲೂ ನೀವು ಯಾರೊಂದಿಗೆ ವ್ಯಾಪಾರ ಮಾಡುತ್ತಿದ್ದೀರಿ ಎಂಬುದನ್ನು ತಿಳಿದುಕೊಳ್ಳಿ ಮತ್ತು ಆ ನಿಟ್ಟಿನಲ್ಲಿ ಹೆಜ್ಜೆಹಾಕುವ ಮೊದಲು ನಿಮ್ಮ ನಿರ್ದೇಶಕರ ಸಲಹೆ ಪಡೆದುಕೊಳ್ಳಿ.**

Q ನಾವು ವ್ಯಾಪಾರ ಮಾಡಲು ಸಾಧ್ಯವಾಗದಂತ ಯಾವುದಾದರು ದೇಶಗಳಿವೆಯೇ?

A **ಮೊತ್ತಮೊದಲಿಗೆ, ನಿಮ್ಮ ಸ್ಥಳೀಯ ಕಾನೂನು ತಂಡದೊಂದಿಗೆ ಮಾತನಾಡಿ. ರಾಜಕೀಯ ಮತ್ತು ರಾಜತಾಂತ್ರಿಕ ಬೆಳವಣಿಗೆಗಳು ಎಂದರೆ ಪ್ರತಿಷೇಧಿತ ದೇಶಗಳು ಮತ್ತು ವ್ಯಕ್ತಿಗಳ ಪಟ್ಟಿ ಕಾಲಕಾಲಕ್ಕೆ ಬದಲಾಗುತ್ತಿರುತ್ತದೆ ಮತ್ತು ನೀವು ಖಚಿತವಿಲ್ಲದಿದ್ದರೆ ಪರಿಶೀಲಿಸುವುದು ಮುಖ್ಯ. ನಾವು ಯಾವುದೇ ಒಂದು ದೇಶದಲ್ಲಿ ಮೊದಲ ಬಾರಿಗೆ ವ್ಯಾಪಾರ ಮಾಡುತ್ತಿರುವಾಗ ಇದು ವಿಶೇಷವಾಗಿ ಮುಖ್ಯವಾಗುತ್ತದೆ.**

Q ನಾನು ಒಂದು ಹೊಸ ದೇಶದಲ್ಲಿ ಟೆಸ್ಕೊ ಉತ್ಪನ್ನಗಳನ್ನು ಮೊದಲ ಬಾರಿಗೆ ಮಾರಾಟ ಮಾಡಲು ಒಂದು ಸಗಟು ಡೀಲನ್ನು ಸ್ಥಾಪಿಸಲು ಬಯಸುತ್ತೇನೆ. ವ್ಯವಹಾರವು ಉತ್ತಮವಾಗಿರುವಂತೆ ಕಾಣುವವರೆಗೂ ನಾನು ಬೇರೆ ಯಾವುದನ್ನಾದರೂ ಪರಿಗಣಿಸಬೇಕಿದೆಯೇ?

A **ಹೌದು. ನಾವು ಆ ದೇಶಕ್ಕೆ ಮಾರಾಟ ಮಾಡದಿರಲು ಯಾವುದಾದರು ನಿರ್ದಿಷ್ಟ ವ್ಯಾಪಾರ ನಿರ್ಬಂಧಗಳು, ಪ್ರತಿಷೇಧಗಳು ಅಥವಾ ಇತರ ಕಾರಣಗಳಿವೆಯೇ ಎಂದು ನೀವು ಕಾರ್ಪೊರೇಟ್ ಆಫೈರ್ಸ್ ಮತ್ತು ಲೀಗಲ್ ನೊಂದಿಗೆ ಚರ್ಚಿಸಬೇಕು. ಲೀಗಲ್ ನಿಮಗೆ ಗ್ರಾಹಕರ ಕುರಿತು, ಆಮೂಲಕ ಅವರೊಂದಿಗೆ ವ್ಯಾಪಾರ ಸಂಬಂಧವನ್ನು ಪ್ರಾರಂಭಿಸುವ ಮೊದಲು ನೀವು ಅವರ ಬಗ್ಗೆ ಸಾಕಷ್ಟು ತಿಳಿದುಕೊಂಡಿರಲು ಅನುವಾಗುವಂತೆ, ಸರಿಯಾದ ಅಗತ್ಯ ತಪಾಸಣೆ ನಡೆಸಲು ಕೂಡ ಬೆಂಬಲಿಸುತ್ತದೆ.**

ಮಾನವ ಹಕ್ಕುಗಳು & ನೈತಿಕ ವ್ಯಾಪಾರ

ಅದು ಏಕೆ ಮುಖ್ಯ?

ನಾವು ಒಂದು ಜಾಗತಿಕ ಕಂಪನಿಯಾಗಿದ್ದು, ಪ್ರತಿದಿನ ವಿಶ್ವದಾದ್ಯಂತ ಲಕ್ಷಾಂತರ ಜನರೊಂದಿಗೆ ಒಡನಾಟ ನಡೆಸುತ್ತೇವೆ. ನಮ್ಮ ಮೇಲೆ ನಮ್ಮ ಸಹೋದ್ಯೋಗಿಗಳು, ನಮ್ಮ ಗ್ರಾಹಕರು, ಪೂರೈಕೆ ಸರಪಳಿಯಲ್ಲಿ ಕೆಲಸ ಮಾಡುವವರು ಮತ್ತು ನಾವು ಕಾರ್ಯನಿರ್ವಹಿಸುವ ಸಮುದಾಯಗಳ ಮಾನವ ಹಕ್ಕುಗಳನ್ನು ಗೌರವಿಸುವ ಜವಾಬ್ದಾರಿಯಿದೆ.

ಯುಎನ್‌ನ ಮಾನವ ಹಕ್ಕುಗಳ ಘೋಷಣೆಯನ್ನು ಮತ್ತು ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯ ಕೋರ್ ಕನ್ವೆನ್ಷನ್‌ಗಳನ್ನು ನಾವು ಸಂಪೂರ್ಣವಾಗಿ ಬೆಂಬಲಿಸುತ್ತೇವೆ. ವ್ಯಕ್ತಿಯ ಮಾನವ ಹಕ್ಕುಗಳ ಯಾವುದೇ ಉಲ್ಲಂಘನೆಯೂ ತಪ್ಪು. "ಪ್ರತಿಯೊಬ್ಬರನ್ನೂ ಅವರು ಹೇಗೆ ಉಪಚರಿಸಲ್ಪಡಲು ಬಯಸುವರೋ ಹಾಗೆಯೇ ಉಪಚರಿಸಿ" ಎನ್ನುವ ಮತ್ತು "ಪ್ರತಿ ಸಣ್ಣ ಸಹಾಯವೂ ಒಂದು ದೊಡ್ಡ ವ್ಯತ್ಯಾಸವನ್ನುಂಟುಮಾಡುತ್ತದೆ" ಎನ್ನುವ ನಮ್ಮ ಮೌಲ್ಯಗಳಿಂದ ಮಾರ್ಗದರ್ಶಿಸಲ್ಪಟ್ಟ ನಾವು, ಹಕ್ಕುಗಳನ್ನು ಗೌರವಿಸುವುದನ್ನು ಮತ್ತು ಎಲ್ಲ ಉಲ್ಲಂಘನೆಗಳಿಗೆ ಪರಿಹಾರೋಪಾಯಗಳನ್ನು ಕಲ್ಪಿಸುವುದನ್ನು ಖಚಿತಪಡಿಸಿಕೊಳ್ಳುವುಕ್ಕೋಸ್ಕರ ಕೆಲಸ ಮಾಡುತ್ತೇವೆ. ಈ ನಿಟ್ಟಿನಲ್ಲಿ, ನಾವು ನಮ್ಮ ಪೂರೈಕೆದಾರರಿಗೆ ಇ.ಟಿ.ಐ ಬೇಸ್ ಸಂಹಿತೆ ಯನ್ನು ಅನುಸರಿಸಲು ಬೆಂಬಲಿಸುತ್ತೇವೆ ಮತ್ತು ಅವರ ಪೂರೈಕೆ ಸರಪಳಿಗಳ ಅಗತ್ಯ ತಪಾಸಣೆಯನ್ನು ಕೈಗೊಳ್ಳುತ್ತೇವೆ, ಆಮೂಲಕ ಮಾನವ ಹಕ್ಕುಗಳ ಕುರಿತ ನಮ್ಮ ಮಾನದಂಡಗಳನ್ನು ಪೂರೈಸಲು ಅವರಿಗೆ ಸಹಾಯ ಮಾಡುತ್ತೇವೆ.

ನಮ್ಮ ಪೂರೈಕೆ ಸರಪಳಿ ಮತ್ತು ಸ್ವಂತ ಕಾರ್ಯಾಚರಣೆಗಳಲ್ಲಿ, ಇದರರ್ಥ ಕಾರ್ಮಿಕರನ್ನು ಸಭ್ಯವಾಗಿ ನಡೆಸಿಕೊಳ್ಳಲಾಗುವುದು ಎಂಬುದನ್ನು ಮತ್ತು ಅವರ ಹಕ್ಕುಗಳ ಯಾವುದೇ ಉಲ್ಲಂಘನೆಗೆ ಪರಿಹಾರೋಪಾಯ ಕಲ್ಪಿಸಲಾಗುವುದು ಎಂಬುದನ್ನು ಖಚಿತಪಡಿಸಿಕೊಳ್ಳುವುದು. ನಮ್ಮ ಸ್ವಂತ ವ್ಯವಹಾರ ಅಭ್ಯಾಸಗಳು ಕಾರ್ಮಿಕ ಮಾನದಂಡಗಳ ಸಮಸ್ಯೆಗಳಿಗೆ ಕಾರಣವಾಗದಂತೆ ನಾವು ಜಾಗರೂಕರಾಗಿರಬೇಕು. ನಮಗೆ ತಿಳಿದಿರುವ ಮತ್ತು ನಂಬುವ ಪೂರೈಕೆದಾರರೊಂದಿಗೆ ದೀರ್ಘಕಾಲೀನ ಸಂಬಂಧವನ್ನು ಅಭಿವೃದ್ಧಿಪಡಿಸುವುದು ಅವರಿಗೆ ನಾವು ಒಟ್ಟಾಗಿ ಹೆಚ್ಚು ಸಾಧಿಸಬಹುದಾಗುವಂತೆ ಸುಧಾರಣೆಗಳಲ್ಲಿ ಹೂಡಿಕೆ ಮಾಡುವ ಬಗ್ಗೆ ವಿಶ್ವಾಸವನ್ನು ನೀಡುತ್ತದೆ.

ಸಹೋದ್ಯೋಗಿಗಳಿಗೆ, ಇದು ಅವರು ರಾಜಕೀಯ ಚಟುವಟಿಕೆಗಳಲ್ಲಿ ಅಥವಾ ಒಟ್ಟಾಗಿ ಯೂನಿಯನ್ ಸದಸ್ಯತ್ವದ ಮೂಲಕ ನಾಗರಿಕ ಸಮಾಜದಲ್ಲಿ ಸಂಪೂರ್ಣವಾಗಿ ಭಾಗವಹಿಸಬಹುದೆಂದು ಖಚಿತಪಡಿಸಿಕೊಳ್ಳುವುದನ್ನು ಒಳಗೊಂಡಿದೆ.

ನನ್ನ ಕುರಿತಂತೆ ಇದು ಏನು ಅರ್ಥ ನೀಡುತ್ತದೆ?

- ಪೂರೈಕೆದಾರರನ್ನು ಅವರ ಮೌಲ್ಯಗಳನ್ನು ಜೊತೆಗೆ ಬೆಲೆ ಮತ್ತು ಗುಣಮಟ್ಟವನ್ನು ಆಧರಿಸಿ ಆಯ್ಕೆಮಾಡಿ ಮತ್ತು ಬಲವಾದ, ವಿಶ್ವಾಸಾರ್ಹ ಸಹಭಾಗಿತ್ವವನ್ನು ನಿರ್ಮಿಸಿ.
- ಮಾನವ ಹಕ್ಕುಗಳ ನೀತಿ ಮತ್ತು (ನಮ್ಮ ಉತ್ಪನ್ನ ಗುಣಮಟ್ಟ ವೇದಿಕೆ) TQC ಯಲ್ಲಿನ FAQ ಗಳೊಂದಿಗೆ ನೀವು ಪರಿಚಿತರಾಗಿರುವುದನ್ನು ಖಚಿತಪಡಿಸಿಕೊಳ್ಳಿ ಮತ್ತು ಇದನ್ನು ನಿಮ್ಮ ಪೂರೈಕೆದಾರರೊಂದಿಗೆ ಹಂಚಿಕೊಳ್ಳಿ.
- ಯಾವಾಗಲೂ ಮಾಡಿದ ಪೂರೈಕೆ ಬಾಧ್ಯತೆಗಳನ್ನು ಪೂರೈಸಿ. ಕೊನೆಯ ನಿಮಿಷದ ಬದಲಾವಣೆಗಳನ್ನು ಕೇಳುವುದು ಪಾಲುದಾರರು ಗಡುವನ್ನು ಪೂರೈಸಲು ಅಡ್ಡದಾರಿ ತುಳಿಯುವುದಕ್ಕೆ ಕಾರಣವಾಗಬಹುದು ಎಂದು ನೀವು ಅರ್ಥಮಾಡಿಕೊಂಡಿದ್ದೀರಿ. ಇದು ಕೆಲಸದ ಪರಿಸ್ಥಿತಿಗಳನ್ನು ಮತ್ತು ಉತ್ಪನ್ನದ ಗುಣಮಟ್ಟ ಎರಡಕ್ಕೂ ಧಕ್ಕೆತರುತ್ತದೆ.
- ಸಮಸ್ಯೆಗಳನ್ನು ಗುರುತಿಸಿದ್ದಲ್ಲೆಲ್ಲ, ಸ್ಪಷ್ಟ ಸುಧಾರಣಾ ಯೋಜನೆಯನ್ನು ನೀಡಲು ಪಾಲುದಾರರೊಂದಿಗೆ ಕೆಲಸ ಮಾಡಿ.
- ನೀವು ಯಾವುದಾದರು ಸರಿಯೆಂದು ತೋರದ ಸಂಗತಿಯನ್ನು, ದುರ್ಬಲ ಅಥವಾ ಕ್ಷೋಭೆಗೊಂಡ ಜನರನ್ನು ಕಂಡರೆ ಅಥವಾ ತಾರತಮ್ಯ ನಡೆಯುತ್ತಿರುವುದನ್ನು ನೋಡಿದರೆ ಧ್ವನಿಯೆತ್ತಿ ಮಾತನಾಡಿ. ನಾವು ಯಾವಾಗಲೂ ಆರೋಪಗಳನ್ನು ಗಂಭೀರವಾಗಿ ಪರಿಗಣಿಸುತ್ತೇವೆ ಮತ್ತು ಅದಕ್ಕೆ ತಕ್ಕಂತೆ ತನಿಖೆ ನಡೆಸುತ್ತೇವೆ.

ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

- ಜವಾಬ್ದಾರಿಯುತ ಸಂಗ್ರಹಣಾ ತಂಡ ಅಥವಾ ಸ್ಥಳೀಯ ಗುಣಮಟ್ಟ ತಂಡ

ಪ್ರಶ್ನೆಗಳು & ಉತ್ತರಗಳು

Q ನಾನು ಒಂದು ಪೂರೈಕೆದಾರರ ತಾಣಕ್ಕೆ ಭೇಟಿ ನೀಡಿದ್ದೆ ಮತ್ತು ಅಲ್ಲಿ ಕಾರ್ಮಿಕರ ನಡುವಿನ ವಾತಾವರಣವು ಅಹಿತಕರವಾಗಿದೆ ಎಂದು ನನಗೆ ಅನಿಸಿತು. ಇದರ ಬಗ್ಗೆ ನಾನು ಏನು ಮಾಡಬೇಕು?

A **ನಿಮ್ಮ ಕಳವಳವನ್ನು ಅದರ ಜವಾಬ್ದಾರಿ ಹೊತ್ತ ಸಂಗ್ರಹಣಾ ತಂಡಕ್ಕೆ ವರದಿ ಮಾಡಿ. ನೀವು ಒದಗಿಸಬಹುದಾದ ಯಾವುದೇ ಮಾಹಿತಿಯು ಸಹಾಯಕವಾಗಿರುತ್ತದೆ. ಭೇಟಿಗಳ ಸಮಯದಲ್ಲಿ ಪೂರೈಕೆದಾರ ವ್ಯವಸ್ಥಾಪಕರನ್ನು ಕಾರ್ಯಪಡೆಯ ಪ್ರಮುಖ ಕಳವಳಗಳು ಯಾವವು ಎಂದು ಕೇಳಿ - ಮತ್ತು ಕಾರ್ಮಿಕರನ್ನೂ ಕೇಳಿ. ಟೆಸ್ಕೊಗೆ ಇದು ಎಷ್ಟು ಮುಖ್ಯ ಎಂಬುದನ್ನು ತೋರಿಸಲು ಇದು ಸಹಾಯ ಮಾಡುತ್ತದೆ.**

Q ನಮ್ಮ ಕೆಲಸದ ಸ್ಥಳಗಳಲ್ಲಿ ಅಥವಾ ಪೂರೈಕೆ ಸರಪಳಿಯಲ್ಲಿ ಯಾವುದೇ ಒಂದು ಹಕ್ಕುಗಳ ಉಲ್ಲಂಘನೆ ಕಂಡುಬಂದಲ್ಲಿ ನಾವು ಏನು ಮಾಡಬೇಕು?

A **ನಾವು ಯಾವಾಗಲೂ ನಾವು ಗುರುತಿಸುವ ಯಾವುದೇ ಕಳವಳವನ್ನು ಪರಿಹರಿಸಲು ಪ್ರಯತ್ನಿಸುತ್ತೇವೆ. ಸಮಸ್ಯೆಯೇನಾದರು ಟೆಸ್ಕೊ ಸಹೋದ್ಯೋಗಿಗಳನ್ನು ಒಳಗೊಂಡಿದ್ದರೆ, ನಿಮ್ಮ ಸ್ಥಳೀಯ ಜನ ತಂಡವನ್ನು ಸಂಪರ್ಕಿಸಿ ಅಥವಾ ಪ್ರೊಟೆಕ್ಟರ್ ಲೈನ್ Protector Line ಗೆ ಕರೆ ಮಾಡಿ. ಸಮಸ್ಯೆಯೇನಾದರು ನಮ್ಮ ಪೂರೈಕೆ ಸರಪಳಿಯಲ್ಲಿದ್ದರೆ, ಜವಾಬ್ದಾರಿಯುತ ಸಂಗ್ರಹಣಾ ತಂಡ ಅಥವಾ ನಿಮ್ಮ ಸ್ಥಳೀಯ ಗುಣಮಟ್ಟ ತಂಡವನ್ನು ಸಂಪರ್ಕಿಸಿ.**

Q ಪೂರೈಕೆ ಸರಪಳಿಗಳಲ್ಲಿ ಗುಲಾಮಗಿರಿಯ ಆಚರಣೆ ಇರಬಹುದೆಂದು ನಾನು ಮಾಧ್ಯಮಗಳು ಮತ್ತು ಸ್ನೇಹಿತರ ಮೂಲಕ ಕೇಳಿದ್ದೇನೆ. ಈ ಅಪಾಯವನ್ನು ಪರಿಹರಿಸಲು ನಾವು ಏನು ಮಾಡುತ್ತಿದ್ದೇವೆ?

A **ನಾವು ಯಾವುದೇ ರೀತಿಯ ಗುಲಾಮಗಿರಿ ಅಥವಾ ಬಲವಂತದ ದುಡಿತವನ್ನು ಸಹಿಸುವುದಿಲ್ಲ. ಈ ಮತ್ತು ಇತರ ಅಪಾಯಗಳನ್ನು ನಿರ್ವಹಿಸಲು ನಮ್ಮ ಪೂರೈಕೆದಾರರೊಂದಿಗೆ ಕೆಲಸ ಮಾಡುವ ವಿಶ್ವದಾದ್ಯಂತ ಪೂರ್ಣ ಸಮಯದ ಕಾರ್ಮಿಕ ಮಾನದಂಡ ತಜ್ಞರ ತಂಡವನ್ನು ನಾವು ಹೊಂದಿದ್ದೇವೆ.**

Q ಮಾನವ ಹಕ್ಕುಗಳ ಕುರಿತ ನಮ್ಮ ನೀತಿಗಳು ಕೇವಲ ನಾವು ಮಳಿಗೆಯಲ್ಲ□ ಮಾರಾಟ ಮಾಡುವ ಸರಕುಗಳಿಗೆ ಮಾತ್ರ ಅನ್ವಯವಾಗುತ್ತವೆಯೇ?

A **ಇಲ್ಲ. ನಿರ್ಮಾಣ ಕಂಪನಿಗಳು, ಕಾರ್ಮಿಕ ಸಂಸ್ಥೆಗಳು ಮತ್ತು ಲಾಜಿಸ್ಟಿಕ್ಸ್ ಸಂಸ್ಥೆಗಳಂತಹ ಮರುಮಾರಾಟ ಮತ್ತು ಸೇವೆಗಳಿಗೆ ಸರಕುಗಳನ್ನು ಒದಗಿಸುವವರು ಸೇರಿದಂತೆ ಎಲ್ಲ ಪೂರೈಕೆದಾರರು ನಮ್ಮ ನೈತಿಕ ವ್ಯಾಪಾರ ಅಗತ್ಯತೆಗಳನ್ನು ಪೂರೈಸುತ್ತಾರೆ ಎಂದು ನಾವು ನಿರೀಕ್ಷಿಸುತ್ತೇವೆ.**

Q ನಾನು ಒಂದು ಟ್ರೇಡ್ ಯೂನಿಯನ್‌ಗೆ ಸೇರಲು ಬಯಸುತ್ತೇನೆ ಆದರೆ ಅದು ವೇತನ ಮಾತುಕತೆಗಳ ಉದ್ದೇಶಗಳಿಗಾಗಿ ಟೆಸ್ಕೊ ಗುರುತಿಸಿರುವಂಥದ್ದಲ್ಲ. ನಾನು ಅದನ್ನು ಸೇರಿಕೊಳ್ಳಬಹುದೇ?

A **ನಿಮ್ಮ ಆಯ್ಕೆಯ ಟ್ರೇಡ್ ಯೂನಿಯನ್ ಸೇರಲು ನೀವು ಸ್ವತಂತ್ರರಾಗಿದ್ದೀರಿ. ಹಾಗೆಯೇ ನೀವು ಯಾವುದೇ ಒಂದಕ್ಕೆ ಸೇರದಂತೆ ಇರಲು ಕೂಡ ಸ್ವತಂತ್ರರಾಗಿದ್ದೀರಿ.**

ಪೂರೈಕೆದಾರರನ್ನು ರಕ್ಷಿಸುವ ಕಾನೂನುಗಳು

ಅದು ಏಕೆ ಮುಖ್ಯ?

ಪೂರೈಕೆದಾರರನ್ನು ನ್ಯಾಯಯುತವಾಗಿ ನಡೆಸಿಕೊಳ್ಳುವುದು ನಮ್ಮ ಯಶಸ್ಸಿಗೆ ಮುಖ್ಯವಾಗಿದೆ. ನಮ್ಮ ಗ್ರಾಹಕರಿಗೆ ಅತ್ಯಂತ ಉತ್ತಮವಾದದ್ದನ್ನು ತಲುಪಿಸಲು ಪೂರೈಕೆದಾರರೊಂದಿಗೆ ದೀರ್ಘಕಾಲೀನ, ಸಹಕಾರಿ ಮತ್ತು ಸುಸ್ಥಿರ ಸಂಬಂಧಗಳನ್ನು ಅಭಿವೃದ್ಧಿಪಡಿಸುವುದು ಅತ್ಯಗತ್ಯ. ಇದು ನಮ್ಮ ದೊಡ್ಡ 6 ಕ್ರಮಗಳಲ್ಲಿ ಒಂದಾಗಿದೆ "ನಾವು ವಿಶ್ವಾಸಾರ್ಹ ಸಹಭಾಗಿತ್ವವನ್ನು ನಿರ್ಮಿಸುತ್ತೇವೆ".

ಸೂಪರ್ಮಾರ್ಕೆಟ್ಗಳು ಮತ್ತು ಅವುಗಳ ಪೂರೈಕೆದಾರರ ನಡುವಿನ ಪೂರೈಕೆ ಸಂಬಂಧಗಳನ್ನು ನಿಯಂತ್ರಿಸಲು ಅನೇಕ ದೇಶಗಳು ಶಾಸನವನ್ನು ಪರಿಚಯಿಸಿವೆ. ಉದಾಹರಣೆಗೆ, ಯುಕೆ ನಲ್ಲಿ ದಿನಸಿ ಸರಬರಾಜು ಸಂಹಿತೆ (ಜಿಎಸ್‌ಸಿಓಪಿ) ಟೆಸ್ಕೊ ಮತ್ತು ಅದರ ದಿನಸಿ ಪೂರೈಕೆದಾರರ ನಡುವಿನ ಸಂಬಂಧವನ್ನು ನಿಯಂತ್ರಿಸುತ್ತದೆ. ಜೆಕ್ ಗಣರಾಜ್ಯದಲ್ಲಿ, ಸಿಗ್ನಿಫಿಕೆಂಟ್ ಮಾರ್ಕೆಟ್ ಪವರ್ ಆಕ್ಟ್ ಬಿಡಿ ಮಾರಾಟ ಮತ್ತು ಪೂರೈಕೆದಾರ ಸಂಬಂಧಗಳನ್ನು ನಿಯಂತ್ರಿಸುತ್ತದೆ. ಉಲ್ಲಂಘನೆಗಳ ತನಿಖೆಯು ದುಬಾರಿಯೂ ಮತ್ತು ಸಮಯ-ಭಂಜಕವೂ ಆಗಬಹುದು. ಗಮನಾರ್ಹ ದಂಡಗಳಿಗೆ ಕಾರಣವಾಗಬಹುದು ಮತ್ತು ಗ್ರಾಹಕರ ನಂಬಿಕೆಯು ಹಾನಿಗೊಳಗಾಗಬಹುದು.

ಅಂತಹ ಶಾಸನಗಳು ಅಸ್ತಿತ್ವದಲ್ಲಿಲ್ಲದೆಡೆ ಸಹ, ನಾವು ನಮ್ಮ ಪೂರೈಕೆದಾರರನ್ನು ನ್ಯಾಯಯುತವಾಗಿ ಮತ್ತು ನಮ್ಮ ಮೌಲ್ಯಗಳಿಗೆ ಅನುಗುಣವಾಗಿ ಪರಿಗಣಿಸುವುದು ಅತ್ಯಗತ್ಯ. ಇದು ನಮ್ಮ ಪೂರೈಕೆದಾರರೊಂದಿಗೆ ದೀರ್ಘಕಾಲೀನ ಸಂಬಂಧವನ್ನು ಬೆಳೆಸುವಲ್ಲಿನ ಪ್ರಮುಖ ಭಾಗವಾಗಿದೆ ಮತ್ತು ಹಾಗಾಗಿ ನಮ್ಮ ಪೂರೈಕೆದಾರರೆಲ್ಲರೂ ನಮ್ಮ ಪೂರೈಕೆದಾರ ಪ್ರೊಟೆಕ್ಟರ್ ಲೈನ್ Protector Line ಅನ್ನು ಬಳಸಿಕೊಂಡು ಸಂಪೂರ್ಣ ಗೌಪ್ಯತೆಯೊಂದಿಗೆ ತಮ್ಮ ಸಮಸ್ಯೆಗಳನ್ನು ಎತ್ತುವಂತೆ ಮಾಡುತ್ತದೆ.

ನನ್ನ ಕುರಿತಂತೆ ಇದು ಏನು ಅರ್ಥ ನೀಡುತ್ತದೆ?

- ನಿಮ್ಮ ಮಾರುಕಟ್ಟೆಯಲ್ಲಿ ಪೂರೈಕೆದಾರರನ್ನು ರಕ್ಷಿಸಲು ವಿನ್ಯಾಸಗೊಳಿಸಲಾದ ಕಾನೂನುಗಳು ಮತ್ತು ಅಭ್ಯಾಸ ಸಂಹಿತೆಗಳನ್ನು ಅರ್ಥಮಾಡಿಕೊಳ್ಳಿ ಮತ್ತು ಅನುಸರಿಸಿ.
- ನೀವು ಪೂರೈಕೆದಾರರಿಗೆ ನೀಡುವ ಭರವಸೆ ಬದ್ಧತೆಗಳನ್ನು ಪೂರೈಸಿರಿ - ಪೂರೈಕೆದಾರರ ಒಪ್ಪಂದಗಳನ್ನು ಪೂರ್ವಾನ್ವಯವುಳ್ಳಂತೆ ಮಾರ್ಪಡಿಸಬೇಡಿ.
- ಎಲ್ಲಾ ಪೂರೈಕೆದಾರ ಒಪ್ಪಂದಗಳನ್ನು ಲಿಖಿತವಾಗಿ ದಾಖಲಿಸಿಕೊಳ್ಳಿ ಮತ್ತು ಒಂದು ನಕಲನ್ನು ಇರಿಸಿಕೊಳ್ಳಿ.
- ಸರಬರಾಜು ವ್ಯವಸ್ಥೆಗಳಲ್ಲಿ ಮಾಡಲಾಗುವ ಯಾವುದೇ ಪ್ರಸ್ತಾವಿತ ಬದಲಾವಣೆಗಳ ಬಗ್ಗೆ ಸಮಂಜಸವಾದ ಸೂಚನೆ ನೀಡಿ ಮತ್ತು ಪೂರೈಕೆದಾರರಿಗೆ ನಿರ್ಧಾರಗಳನ್ನು ಅವಲೋಕಿಸಲು ಅವಕಾಶವನ್ನು ಒದಗಿಸಿ.
- ಪೂರೈಕೆದಾರರೊಂದಿಗೆ ಸಹಭಾಗಿತ್ವದಲ್ಲಿ ಕೆಲಸ ಮಾಡಿ ಮತ್ತು ಪ್ರತಿಕ್ರಿಯೆಯನ್ನು ಆಲಿಸಿ. ಉದಾಹರಣೆಗೆ ಮುನ್ಸೂಚನೆಗಳನ್ನು ಸದ್ಭಾವನೆಯಲ್ಲಿ ಮತ್ತು ಪೂರೈಕೆದಾರರೊಂದಿಗೆ ಸಮಾಲೋಚಿಸಿ ಸಿದ್ಧಪಡಿಸಿ.
- ಪೂರೈಕೆದಾರರಿಗೆ ಸಮಯಕ್ಕೆ ಸರಿಯಾಗಿ ಮತ್ತು ಒಪ್ಪಿದ ಪಾವತಿ ನಿಯಮಗಳಿಗೆ ಅನುಸಾರವಾಗಿ ಪಾವತಿಸಿ.
- ಪೂರೈಕೆದಾರರೇನಾದರು ದೂರು ನೀಡಿದರೆ, ಅಗತ್ಯವಿದ್ದರೆ ನಿಮ್ಮ ಸ್ಥಳೀಯ ಕಾನೂನು ತಂಡದ ಸಹಾಯದಿಂದ ಅದನ್ನು ಗುರುತಿಸಿ ಮತ್ತು ತ್ವರಿತವಾಗಿ ಪರಿಹರಿಸಿ.
- ಪೂರೈಕೆದಾರರೊಂದಿಗೆ ಸಂವಹನ ನಡೆಸುವಾಗ ಚಿಂತನಶೀಲ ಮತ್ತು ಅನುಭೂತಿ ಹೊಂದಿರಿ: ಲಿಖಿತ ಸಂವಹನಗಳನ್ನು ಸುಲಭವಾಗಿ ತಪ್ಪಾಗಿ ಅರ್ಥೈಸಬಹುದು.

ಪ್ರಶ್ನೆಗಳು & ಉತ್ತರಗಳು

Q ಯಾವುದಾದರು ಒಂದು ಪ್ರಚಾರಕ್ಕಾಗಿ ಹಣವನ್ನು ಒದಗಿಸುವಂತೆ ನಾನು ಪೂರೈಕೆದಾರನನ್ನು ಕೇಳಬಹುದೇ?

A ಬಹುತೇಕ ಮಾರುಕಟ್ಟೆಗಳಲ್ಲಿ ಇದನ್ನು ಅನುಮತಿಸಲಾಗುತ್ತದೆ ಆದರೆ ಅವರು ಎಷ್ಟನ್ನು ನೀಡಬಹುದು ಎಂಬುದಕ್ಕೆ ಮಿತಿಗಳಿವೆ ಮತ್ತು ಪೂರೈಕೆದಾರರನ್ನು ಪ್ರಚಾರದಲ್ಲಿ ಭಾಗವಹಿಸುವಂತೆ ಎಂದಿಗೂ ಒತ್ತಾಯಿಸಬಾರದು.

Q ನಾನು ಜನರಲ್ ಮರ್ಚಂಡೈಸ್‌ನಲ್ಲಿ ಕೆಲಸ ಮಾಡುತ್ತೇನೆ. ನನ್ನ ಮಾರುಕಟ್ಟೆಯಲ್ಲಿ, ಶಾಸನವು ಕೇವಲ ದಿನಸಿಗಳಿಗೆ ಮಾತ್ರ ಅನ್ವಯಿಸುತ್ತದೆ. ನಾನೂ ಕೂಡ ಶಾಸನವನ್ನು ಅನುಸರಿಸಬೇಕೇ?

A ಶಾಸನದ ಅನ್ವಯದ ಬಗ್ಗೆ ನೀವು ಖಚಿತವಿಲ್ಲದಿದ್ದರೆ, ನಿಮ್ಮ ಸ್ಥಳೀಯ ಕಾನೂನು ತಂಡದೊಂದಿಗೆ ಮಾತನಾಡಿ. ನಿಯಮಗಳು ನಿರ್ದಿಷ್ಟ ಉತ್ಪನ್ನಗಳಿಗೆ ಮಾತ್ರ ಅನ್ವಯವಾಗುತ್ತವಾದರೂ ಅಂತಹ ಶಾಸನದ ಉದ್ದೇಶವನ್ನು ಅನುಸರಿಸುವುದು ನಮ್ಮ ಸಾಮಾನ್ಯ ವಿಧಾನವಾಗಿದೆ.

Q ಜಿಎಸ್‌ಸಿಓಪಿ ಅಡಿಯಲ್ಲಿನ ಡಿ-ಲಿಸ್ಟಿಂಗ್ ಪ್ರಕ್ರಿಯೆ ಅಂದರೆ ಏನು?

A ಜಿಎಸ್‌ಸಿಓಪಿ ಒಂದು ಸಂಬಂಧವನ್ನು ಕೊನೆಗೊಳಿಸಲು ನೀವ□ ಯಾವಾಗಲೂ ಒಂದು ಪ್ರಾಮಾಣಿಕ ವಾಣಿಜ್ಯಿಕ ಕಾರಣವನ್ನು ಹೊಂದಿರಬೇಕು ಎಂದು ಕೋರುತ್ತದೆ. ನೀವು ಪೂರೈಕೆದಾರರಿಗೆ ಲಿಖಿತ ಸೂಚನೆಯನ್ನು ನೀಡಬೇಕು ಮತ್ತು ನಿರ್ಧಾರವನ್ನು ಅವರು ಒಬ್ಬ ಹಿರಿಯ ಖರೀದಿದಾರರಿಂದ ಹೇಗೆ ವಿಮರ್ಶೆಗೆ ಒಳಪಡಿಸಿಕೊಳ್ಳಬಹುದು ಅಥವಾ ಸಂಹಿತೆ ಅನುಸರಣಾ ಅಧಿಕಾರಿಯ ಮುಂದೆ ಹೇಗೆ ಎತ್ತಬಹುದು ಎಂಬುದನ್ನು ವಿವರಿಸಬೇಕು.

Q ನಾನು ಪೋಲೆಂಡ್ ಮತ್ತು ಜೆಕ್ ಗಣರಾಜ್ಯದಲ್ಲಿ ಮಾರಲೆಂದು ಮೃದು ಹಣ್ಣುಗಳನ್ನು ಖರೀದಿಸುತ್ತೇನೆ ಮತ್ತು ನನ್ನ "ವ್ಯಾಜ್ಯ ಪರಿಹಾರ ಅಧಿಕಾರಿ" ಯೊಂದಿಗೆ ಮಾತನಾಡಲು ಅವರಿಗೆ ಹಕ್ಕಿದೆ ಎಂದು ನನ್ನ ಪೂರೈಕೆದಾರ ಹೇಳಿಕೊಂಡಿದ್ದಾನೆ. ಇದು ಸತ್ಯವೇ?

A ಹೌದು, ಟೆಸ್ಕೊ ಇ.ಯು ಸಪ್ಲೈ ಚೈನ್ ಇನಿಶಿಯೇಟಿವ್‌ಗೆ ಸಹಿ ಹಾಕಿದ್ದು, ಇದು ಸರಬರಾಜು ಸರಪಳಿಯಲ್ಲಿ ನ್ಯಾಯಸಮ್ಮತತೆಯನ್ನು ನಿಯಂತ್ರಿಸುವ ಕಡ್ಡಾಯ ಅಭ್ಯಾಸ ಸಂಹಿತೆಯಾಗಿದೆ. ನಿಮ್ಮ ಪೂರೈಕೆದಾರರಿಗೆ - ಸಾಮಾನ್ಯವಾಗಿ ಕಾನೂನು ನಿರ್ದೇಶಕರಾದ - ನಿಮ್ಮ ವ್ಯಾಜ್ಯ ಪರಿಹಾರದ ಸಂಪರ್ಕವ್ಯಕ್ತಿಯೊಂದಿಗೆ ಮಾತನಾಡುವ ಹಕ್ಕಿದೆ.

Q ನನ್ನ ಪ್ರತಿಸ್ಪರ್ಧಿಗಳು ನಮಗಿಂತ ಅಗ್ಗವಾಗಿ ಉತ್ಪನ್ನಗಳನ್ನು ಮಾರಾಟ ಮಾಡುತ್ತಿದ್ದಾರೆ. ಸಮತೋಲನವನ್ನು ಸರಿಪಡಿಸು ನಾನು ಏನು ಮಾಡಬಹುದು?

A ನೀವು ಗ್ರಾಹಕರಿಗೆ ನೀಡಬಹುದಾದ ಅತ್ಯುತ್ತಮ ವ್ಯವಹಾರವನ್ನು ಪಡೆಯಲು ನೀವು ಯಾವಾಗಲೂ ಪೂರೈಕೆದಾರರೊಂದಿಗೆ ಮಾತುಕತೆ ನಡೆಸಬೇಕು. ಪೂರೈಕೆದಾರರ ವೆಚ್ಚದ ಬೆಲೆ ಸ್ವೀಕಾರಾರ್ಹವೇ ಎಂದು ನೀವು ಚರ್ಚಿಸಬಹುದು ಆದರೆ ಅವರೊಂದಿಗೆ ಮಾತುಕತೆ ನಡೆಸುವಾಗ ಪೂರೈಕೆದಾರರನ್ನು ಒತ್ತಡದಡಿ ಬರದಂತೆ ನೋಡಿಕೊಳ್ಳಿ ಮತ್ತು ಅಸ್ತಿತ್ವದಲ್ಲಿರುವ ಪೂರೈಕೆ ಒಪ್ಪಂದಗಳಿಗೆ ಪೂರ್ವಾನ್ವಯವುಳ್ಳಂತೆ ಮಾರ್ಪಾಟುಗಳನ್ನು ಮಾಡುವುದನ್ನು ತಪ್ಪಿಸಿ.

ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

- ಯು.ಕೆ ಕಾನೂನು ಉತ್ಪನ್ನ ತಂಡ ಅಥವಾ ಸ್ಥಳೀಯ ಕಾನೂನು ತಂಡ

ಬ್ರ್ಯಾಂಡ್‌ಗಳು & ಬೌದ್ಧಿಕ ಆಸ್ತಿ

ಅದು ಏಕೆ ಮುಖ್ಯ?

ಟೆಸ್ಕೊದಲ್ಲಿ ನಾವು, ಅತ್ಯಾಕರ್ಷಕ ಬ್ರ್ಯಾಂಡ್‌ಗಳು, ಉತ್ಪನ್ನಗಳು ಮತ್ತು ಸೇವೆಗಳನ್ನು ರಚಿಸುವ ಮತ್ತು ಬೆಳೆಸುವ ಹೆಮ್ಮೆಯ ಸಂಪ್ರದಾಯವನ್ನು ಹೊಂದಿದ್ದೇವೆ. ಎಫ್ & ಎಫ್ ಬಟ್ಟೆಗಳಿಂದ, ನಮ್ಮ ಅತ್ಯುತ್ತಮ ಆಹಾರ ಶ್ರೇಣಿಗಳವರೆಗೆ, ನಮ್ಮ ಬ್ರ್ಯಾಂಡ್‌ಗಳು ಮತ್ತು ನಾವೀನ್ಯತೆಗಳು ನಮಗೆ ಕಿಕ್ಕಿರಿದ ಮಾರುಕಟ್ಟೆಯಲ್ಲಿ ಸ್ಪರ್ಧಾತ್ಮಕ ಅಂಚನ್ನು ನೀಡುತ್ತವೆ.

ನಾವು ಯಾವಾಗಲೂ – ಪೇಟೆಂಟ್‌ಗಳು, ವಿನ್ಯಾಸಗಳು ಮತ್ತು ಹಕ್ಕುಸ್ವಾಮ್ಯಗಳಿಂದ ಹಿಡಿದು, ಟ್ರೇಡ್‌ಮಾರ್ಕ್‌ಗಳು ಮತ್ತು ವ್ಯಾಪಾರ ರಹಸ್ಯಗಳ ವರೆಗೆ – ನಮ್ಮ ಬೌದ್ಧಿಕ ಆಸ್ತಿ ಹಕ್ಕುಗಳನ್ನು ರಕ್ಷಿಸುವ ಬಗ್ಗೆ ಕಾಳಜಿ ವಹಿಸಬೇಕು. ನಮ್ಮದನ್ನು ರಕ್ಷಿಸಿಕೊಳ್ಳುವುದು ನಮ್ಮ ಒಪ್ಪಂದ ಸಮ್ಮತಿಯಿಲ್ಲದೆ ಇತರರಿಂದ ಅದು ನಕಲಿಸಲ್ಪಡುವುದಿಲ್ಲ ಅಥವಾ ಮಾರಾಟವಾಗುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ನಮಗೆ ಸಹಾಯ ಮಾಡುತ್ತದೆ.

ನಾವೇನಾದರೂ ಟೆಸ್ಕೊಗಾಗಿ ಹೊಸ ಉತ್ಪನ್ನ ವಿನ್ಯಾಸಗಳು, ಬ್ರ್ಯಾಂಡ್‌ಗಳು ಅಥವಾ ನಾವೀನ್ಯತೆಗಳನ್ನು ರಚಿಸುವಲ್ಲಿ ತೊಡಗಿದ್ದರೆ, ನಾವು ಯಾವಾಗಲೂ ಬ್ರಾಂಡ್ ವಿನ್ಯಾಸ ಮಾನದಂಡಗಳನ್ನು ಅನುಸರಿಸಬೇಕು. ನಾವು ಇತರರ ಐಪಿ ಹಕ್ಕುಗಳನ್ನು ಗೌರವಿಸುತ್ತೇವೆ. ಇನ್ನೊಬ್ಬರ ಆಲೋಚನೆಯನ್ನು ಕದಿಯುವುದು ಟೆಸ್ಕೊಗೆ ಅಪಖ್ಯಾತಿತರುತ್ತದೆ,
ಗ್ರಾಹಕರ ನಂಬಿಕೆಯನ್ನು ಹಾಳು ಮಾಡುತ್ತದೆ ಮತ್ತು ನಮ್ಮ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವುದಕ್ಕೆ ಕಾರಣಬಹುದು.

ನನ್ನ ಕುರಿತಂತೆ ಇದು ಏನು ಅರ್ಥ ನೀಡುತ್ತದೆ?

- ಯಾವಾಗಲೂ ನಮ್ಮ ಗ್ರಾಹಕರಿಗಾಗಿ ಮೂಲ ವಿನ್ಯಾಸಗಳನ್ನು ಮತ್ತು ಉತ್ಪನ್ನಗಳನ್ನೇ ಸೃಷ್ಟಿಸಲು ಅಥವಾ ಪಡೆಯಿರಿ.
- ಇತರ ಜನರ ಆಲೋಚನೆಗಳನ್ನು ನಕಲುಮಾಡಬೇಡಿ, ಬಳಸಬೇಡಿ ಅಥವಾ ಅತಿಯಾಗಿ ಪ್ರೇರಿತರಾಗಬೇಡಿ.
- ಯಾವುದೇ ಉದ್ದೇಶಿತ ಉತ್ಪನ್ನದ ಹೆಸರು, ವಿನ್ಯಾಸ ಅಥವಾ ನಾವೀನ್ಯತೆಯ ಬಗ್ಗೆ ನಿಮಗೆ ಯಾವುದೇ ಸಂದೇಹಗಳಿದ್ದರೆ ಯಾವಾಗಲೂ ಟೆಸ್ಕೊ ಬ್ರಾಂಡ್ ವಿನ್ಯಾಸ ಮಾನದಂಡಗಳನ್ನು ಅನುಸರಿಸಿ ಮತ್ತು ಲೀಗಲ್‌ನೊಂದಿಗೆ ಮಾತನಾಡಿ.
- ನೀವು ಹೊಸ ಆಲೋಚನೆಗಳನ್ನು ಅಭಿವೃದ್ಧಿಪಡಿಸುತ್ತಿರುವಾಗ, ಅವುಗಳನ್ನು ಗೌಪ್ಯವಾಗಿಡಿ ಮತ್ತು ಅವುಗಳನ್ನು ಹೇಗೆ ರಕ್ಷಿಸಬೇಕು ಎಂಬುದರ ಕುರಿತು ಲೀಗಲ್‌ನೊಂದಿಗೆ ಮಾತನಾಡಿ.
- ನಮ್ಮ ಬ್ರ್ಯಾಂಡ್‌ಗಳು ಅಥವಾ ಇತರ ಬೌದ್ಧಿಕ ಆಸ್ತಿಯನ್ನು ಬಳಸಲ□ ಮೂರನೇ ವ್ಯಕ್ತಿಗಳಿಗೆ ಅನುಮತಿಸುವ ಮೊದಲು ಲೀಗಲ್‌ನೊಂದಿಗೆ ಸಮಾಲೋಚಿಸಿ.
- ಬೇರೊಂದು ವ್ಯವಹಾರವು ನಮ್ಮ ಆಲೋಚನೆಗಳನ್ನು ನಕಲಿಸಿದೆ ಅಥವಾ ನಮ್ಮ ಐಪಿ ಹಕ್ಕುಗಳನ್ನು ಉಲ್ಲಂಘಿಸಿದೆ ಎಂಬುದನ್ನು ನೀವು ಗುರುತಿಸಿದರೆ ನಿಮ್ಮ ಕಳವಳವನ್ನು ಹೇಳಿಕೊಳ್ಳಿ.
- ನೀವು "ಬೂದು ಸರಕು" ಗಳನ್ನು (ಕೆಲವೊಮ್ಮೆ ಇವನ್ನು "ಸಮಾನಾಂತರ ಸರಕುಗಳು" ಎಂದು ಕರೆಯಲಾಗುತ್ತದೆ) ಆಮದು ಮಾಡಿಕೊಳ್ಳಲು ಬಯಸುತ್ತಿದ್ದರೆ ಜಾಗರೂಕರಾಗಿರಿ. ಅಂತಹ ಸರಕುಗಳು ನಕಲಿ ಅಲ್ಲ ಮತ್ತು ಮೂರನೇ ಪಕ್ಷಗಳ ಹಕ್ಕುಗಳನ್ನು ಉಲ್ಲಂಘಿಸುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ವಿಶೇಷ ನಿಯಮಗಳು ಜಾರಿಯಲ್ಲಿವೆ.

ಪ್ರಶ್ನೆಗಳು & ಉತ್ತರಗಳು

Q ನಾನು ಹುಡುಗಿಯರಿಗಾಗಿ ಒಂದು ಹೊಸ ಟಿ-ಶರ್ಟ್ ಶ್ರೇಣಿಯನ್ನು ವಿನ್ಯಾಸಗೊಳಿಸುತ್ತಿದ್ದೇನೆ. ನಾನು ಬೇರೆಯವರ ಬೌದ್ಧಿಕ ಆಸ್ತಿಯನ್ನು ಉಲ್ಲಂಘಿಸುತ್ತಿಲ್ಲ ಎಂದು ಹೇಗೆ ಖಚಿತಪಡಿಸಿಕೊಳ್ಳುವುದು?

A **ನಿಮ್ಮ ಮಾರುಕಟ್ಟೆಯನ್ನು ಮತ್ತು ಅದ್ಯಾವ ಉತ್ಪನ್ನಗಳು ಮತ್ತು ವಿನ್ಯಾಸಗಳು ಈಗಾಗಲೇ ಇವೆ ಎಂಬುದನ್ನು ತಿಳಿಯಿರಿ. ಅಸ್ತಿತ್ವದಲ್ಲಿರುವ ಆಲೋಚನೆಗಳಿಂದ ಸ್ವಲ್ಪ ಸ್ಫೂರ್ತಿ ಪಡೆಯಲು ನೀವು ಸ್ವತಂತ್ರರಾಗಿದ್ದೀರಿ, ಆದರೆ ಇನ್ನೊಂದು ಉತ್ಪನ್ನವನ್ನು ನಕಲಿಸಬೇಡಿ. ನಿಮ್ಮ ಹೊಸ ಉತ್ಪನ್ನವನ್ನು ಬಳಸುವುದು ಸರಿಯೇ ಎಂದು ಖಚಿತಪಡಿಸಿಕೊಳ್ಳಲು ಕಾನೂನು ತಂಡವು ನಿಮ್ಮೊಂದಿಗೆ ಸಂತೋಷದಿಂದ ಚರ್ಚಿಸುತ್ತದೆ.**

Q ನಮ್ಮ ವಿತರಣಾ ಕೇಂದ್ರಗಳಲ್ಲಿ ದಕ್ಷತೆಯನ್ನು ಸುಧಾರಿಸುವಂತಹ ಕೆಲವು ಹೊಸ ತಂತ್ರಜ್ಞಾನವನ್ನು ಅಭಿವೃದ್ಧಿಪಡಿಸಲು ನಾನು ಒಂದು ಮೂರನೇ ಪಕ್ಷದೊಂದಿಗೆ ಕೆಲಸ ಮಾಡಲು ಯೋಜಿಸುತ್ತಿದ್ದೇನೆ. ನಾನು ಯಾವ ಕ್ರಮಗಳನ್ನು ತೆಗೆದುಕೊಳ್ಳಬೇಕು?

A **ಮೂರನೇ ವ್ಯಕ್ತಿಯೊಂದಿಗೆ ನೀವು ಯಾವಾಗಲೂ ಅಂತಹ ಹೊಸ ತಂತ್ರಜ್ಞಾನದಲ್ಲಿ ಹೊರಹೊಮ್ಮುವ ಯಾವುದೇ ಐಪಿ ಯ ಸ್ವಾಮ್ಯವನ್ನು ಯಾರು ಹೊಂದುತ್ತಾರೆ ಎಂದು ತಿಳಿಸುವ ಒಪ್ಪಂದವನ್ನು ಮಾಡಿಕೊಳ್ಳಬೇಕು. ಒಂದು ಹೊಸ ತಂತ್ರಜ್ಞಾನವನ್ನು ಪೇಟೆಂಟ್‌ನಿಂದ ಅಥವಾ ಯಾವುದೇ ರೀತಿಯ ಬೌದ್ಧಿಕ ಆಸ್ತಿ ಹಕ್ಕಿನಿಂದ ರಕ್ಷಿಸಬಹುದೇ ಎಂದು ನಿಮಗೆ ನಿಮ್ಮ ಕಾನೂನು ತಂಡವು ಸಲಹೆ ನೀಡಬಹುದು.**

Q ನಾನು ನನ್ನ ಸ್ಥಳೀಯ ವ್ಯಾಪಾರ ಕ್ಷೇತ್ರದ ಹೊರಗಿನಿಂದ ಖರೀದಿಸಿ ಆಮದು ಮಾಡಿದ ಬ್ರಾಂಡೆಡ್ ವಸ್ತುಗಳ (ಸಮಾನಾಂತರ ಸರಕುಗಳ) ಮಾರಾಟವನ್ನು ಪ್ರಾರಂಭಿಸಲು ಬಯಸುತ್ತೇನೆ. ನಾನು ಏನು ಮಾಡಬೇಕು?

A **ನೀವು ಬ್ರ್ಯಾಂಡ್ ಮಾಲೀಕರ ಹಕ್ಕುಗಳನ್ನು ಉಲ್ಲಂಘಿಸದಿರುವವರೆಗೆ ಇದು ಸರಿ ಇರಬಹುದು. ಉದಾಹರಣೆಗೆ, ಇ.ಯು ಒಳಗೆ ನಾವು ಕೆಲವು ನಿಯಮಗಳಿಗೆ ಒಳಪಟ್ಟಂತೆ ಸಮಾನಾಂತರ ಸರಕುಗಳಲ್ಲಿ ವ್ಯವಹರಿಸಬಹುದು. ನಿಯಮಗಳು ದೇಶದಿಂದ ದೇಶಕ್ಕೆ ಬದಲಾಗುತ್ತವೆ ಮತ್ತು ಅಗತ್ಯವಿದ್ದರೆ ಕಾನೂನು ತಂಡವು ತಜ್ಞ ಸಲಹೆಯನ್ನು ನೀಡಬಹುದು.**

Q ನಾವು ಹಲವಾರು ಮಾರುಕಟ್ಟೆಗಳಲ್ಲಿ ಮಾರಾಟ ಮಾಡಲು ಯೋಜಿಸಿರುವ ಒಂದು ಶ್ರೇಣಿಯ ಬೇಕ್‌ವೇರ್ ಉತ್ಪನ್ನಗಳಿಗಾಗಿ ನಾವು ಒಂದು ಹೊಸ ಬ್ರ್ಯಾಂಡ್ ಅನ್ನು ರಚಿಸುತ್ತಿದ್ದೇವೆ. ಬ್ರಾಂಡ್ ಹೆಸರನ್ನು ಆರಿಸುವ ನಿಟ್ಟಿನಲ್ಲಿ ನಾವು ಹೇಗೆ ಮುಂದುವರೆಯಬೇಕು?

A **ಟೆಸ್ಕೊ ಬ್ರಾಂಡ್ ವಿನ್ಯಾಸ ಮಾನದಂಡಗಳನ್ನು ಅನುಸರಿಸಿ ಮತ್ತು ನಿಮ್ಮ ಹೆಸರು ತದ್ರೂಪಿ ಮತ್ತು ಸಮಾನ ರೀತಿಯ ಸರಕುಗಳಿಗೆ ಬಳಸುವ ಅಸ್ತಿತ್ವದಲ್ಲಿರುವ ಬ್ರಾಂಡ್ ಹೆಸರುಗಳಿಗಿಂತ ಭಿನ್ನವಾಗಿದೆ ಎಂಬುದನ್ನು ಖಚಿತಪಡಿಸಿಕೊಳ್ಳಿ. ನೀವು ಇಂಟರ್ನೆಟ್ ಶೋಧನೆಗಳನ್ನು ಸಹ ಕೈಗೊಳ್ಳಿ ಮತ್ತು ನಿಮಗೆ ನೆರವಿಗೆ ನಿಮ್ಮ ಮಾರುಕಟ್ಟೆ ಜ್ಞಾನವನ್ನು ಬಳಸಿ. ಹೆಸರಿನೊಂದಿಗೆ ಯಾವುದಾದರು ಕಾನೂನು ಸಮಸ್ಯೆಗಳಿದ್ದಲ್ಲಿ ಶೀಘ್ರವಾಗಿ ಒಂದು ಬ್ರ್ಯಾಂಡ್‌ಗೆ ಕಟ್ಟುಬೀಳಬೇಡಿ.**

ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

- ಯು.ಕೆ ಕಾನೂನು ಗ್ರಾಹಕ ತಂಡ ಅಥವಾ ಸ್ಥಳೀಯ ಕಾನೂನು ತಂಡ

4. ನಮ್ಮ ಖ್ಯಾತಿಯ ರಕ್ಷಣೆ

ಸರಿಯಾದ ಕೆಲಸವನ್ನು ಮಾಡುವುದು ನಾವು ನಮ್ಮನ್ನು ನಮ್ಮ ಕಾರ್ಯಗಳೊಂದಿಗೆ ಅಥವಾ ವ್ಯವಹಾರದೊಂದಿಗೆ ರಾಜಿ ಮಾಡಿಕೊಳ್ಳುವುದಿಲ್ಲ ಮತ್ತು ಒಂದು ಜಾಗತಿಕ ವ್ಯವಹಾರವಾಗಿ ನಾವು ಎದುರಿಸುತ್ತಿರುವ ಅಪಾಯಗಳ ಬಗ್ಗೆ ನಮಗೆ ತಿಳಿದಿರುತ್ತದೆ ಎಂಬುದನ್ನು ಖಚಿತಪಡಿಸುತ್ತದೆ.

ಸಂಹಿತೆಯ ಈ ವಿಭಾಗವು ನಮ್ಮನ್ನು ಮತ್ತು ನಮ್ಮ ಕಂಪನಿಯನ್ನು ತಪ್ಪಿನಿಂದ ರಕ್ಷಿಸಿಕೊಳ್ಳುವ ಹಲವಾರು ಪ್ರಮುಖ ಕ್ಷೇತ್ರಗಳನ್ನು ಒಳಗೊಂಡಿದೆ.

ವಂಚನೆ ಪುಟ 42

ಲಂಚ ಪುಟ 44

ಉಡುಗೊರೆಗಳು ಮತ್ತು ಮನರಂಜನೆ ಪುಟ 46

ಆಸಕ್ತಿ-ವೈರುಧ್ಯ ಪುಟ 48

ದತ್ತಿ ದೇಣಿಗೆ ಪುಟ 48

ಒಳ-ವ್ಯವಹಾರ ಮತ್ತು ಮಾರುಕಟ್ಟೆ ದುರುಪಯೋಗ

ರಾಜಕೀಯ ಚಟುವಟಿಕೆಯಲ್ಲಿ ತೊಡಗುವುದು ಪುಟ 52

ನಿಖರವಾದ ಲೆಕ್ಕಪತ್ರ ನಿರ್ವಹಣೆ ಮತ್ತು ಹಣ ವರ್ಗಾವಣೆ ಪುಟ 54

ನಮ್ಮ ಮಾಹಿತಿಯನ್ನು ಸುರಕ್ಷಿತವಾಗಿರಿಸುವುದು ಪುಟ 57

ಬಾಹ್ಯ ಸಂವಹನ & ಸಾಮಾಜಿಕ ಮಾಧ್ಯಮವನ್ನು ಬಳಸುವುದು

ವಂಚನೆ

ಅದು ಏಕೆ ಮುಖ್ಯ?

ವಂಚನೆ ಒಂದು ಗಂಭೀರ ಅಪರಾಧವಾಗಿದ್ದು, ಅದು ನಮ್ಮ ವ್ಯವಹಾರಕ್ಕೆ ಹಾನಿ ಮಾಡುತ್ತದೆ ಮತ್ತು ನಮ್ಮ ವೆಚ್ಚಗಳು ಮತ್ತು ಲಾಭಗಳ ಮೇಲೆ ಗಮನಾರ್ಹ ಪರಿಣಾಮ ಬೀರುತ್ತದೆ. ವಂಚನೆ ಎಂಬ ಪದವನ್ನು ಸಾಮಾನ್ಯವಾಗಿ ಮೋಸ, ಖೋಟಾ ರುಜು, ಸುಳ್ಳುಗಾರಿಕೆ ಮತ್ತು ವಸ್ತು ಸಂಗತಿಗಳನ್ನು ಮರೆಮಾಚುವಂತಹ ವಿವಿಧ ರೀತಿಯ ಅಪ್ರಾಮಾಣಿಕ ನಡವಳಿಕೆಗಳ ಮೂಲಕ ಮಾಡಲಾಗುವ ಕಳ್ಳತನವನ್ನು ವಿವರಿಸಲು ಬಳಸಲಾಗುತ್ತದೆ. ತೆರಿಗೆ ವಂಚನೆ ಮತ್ತೊಂದು ರೀತಿಯ ವಂಚನೆ; ನಾವು ಅಥವಾ ನಾವು ಕೆಲಸ ಮಾಡುವ ಇತರರು ಉದ್ದೇಶಪೂರ್ವಕವಾಗಿ ತೆರಿಗೆ ವಂಚನೆಗೆ ಅನುಕೂಲ ಮಾಡಿಕೊಟ್ಟರೆ ಟೆಸ್ಕೊ ವಿರುದ್ಧ ಕಾನೂನು ಕ್ರಮ ಜರುಗಿಸಬಹುದು ಮತ್ತು ಅನಿಯಮಿತ ದಂಡವನ್ನು ಎದುರಿಸಬೇಕಾಗುತ್ತದೆ.

ವಂಚನೆಯು ಆನ್‌ಲೈನ್ ವ್ಯವಹಾರದ ಸಮಯದಲ್ಲಿ, ಗಲ್ಲಾಪೆಟ್ಟಿಗೆಗಳಲ್ಲಿ, ನಮ್ಮ ವಿತರಣಾ ವ್ಯವಸ್ಥೆಯ ಮೂಲಕ ಅಥವಾ ಕಚೇರಿಯಲ್ಲಿ ಸರಕುಗಳ ಸಾಗಣೆಯ ಸಮಯದಲ್ಲಿ ಸೇರಿದಂತೆ ನಮ್ಮ ವ್ಯವಹಾರದ ವಿವಿಧ ಭಾಗಗಳಲ್ಲಿ ಸಂಭವಿಸಬಹುದು.

ಟೆಸ್ಕೊ ವಂಚನೆಗೆ ಬಲಿಯಾಗಿದೆ, ಆದ್ದರಿಂದ ವ್ಯವಹಾರವನ್ನು ಯಾರು ಮಾಡಿದರೂ ಅದನ್ನು ಮೋಸದ ಚಟುವಟಿಕೆಯಿಂದ ರಕ್ಷಿಸುವಂತ ಜವಾಬ್ದಾರಿ ನಮ್ಮೆಲ್ಲರ ಮೇಲೂ ಇದೆ. ಎಲ್ಲಾ ಸಮಯದಲ್ಲೂ ಪ್ರಾಮಾಣಿಕವಾಗಿ ಕಾರ್ಯನಿರ್ವಹಿಸುವುದಾಗಿ ನಾವು ನಮ್ಮ ಸಹೋದ್ಯೋಗಿಗಳ ಮೇಲೆ ಅಗಾಧ ನಂಬಿಕೆಯನ್ನು ಇಡುತ್ತೇವೆ, ಹಾಗಾಗಿ ನಮ್ಮ ವ್ಯವಹಾರದ ವಿರುದ್ಧ ವಂಚನೆ ನಡೆದಾಗ ನಾವು ಯಾವಾಗಲೂ ತನಿಖೆ ನಡೆಸಿ ಕ್ರಮ ತೆಗೆದುಕೊಳ್ಳುತ್ತೇವೆ.

ನನ್ನ ಕುರಿತಂತೆ ಇದು ಏನು ಅರ್ಥ ನೀಡುತ್ತದೆ?

- ಮುಖ್ಯ ನಿಯಮ ಸರಳವಾಗಿದೆ. ನೀವೇನಾದರು ಕಳ್ಳತನ ಅಥವಾ ಇತರ ಮೋಸದ ಚಟುವಟಿಕೆಗಳು ನಡೆಯುತ್ತಿವೆ ಎಂದು ಭಾವಿಸಿದರೆ ಆಬಗ್ಗೆ ಮಾತನಾಡಬೇಕು. ಅದನ್ನು ನಿಮ್ಮ ಲೈನ್ ಮ್ಯಾನೇಜರ್, ಜನ ಅಥವಾ ಭದ್ರತಾ ತಂಡಗಳಿಗೆ ವರದಿ ಮಾಡಿ ಅಥವಾ ನಿಮ್ಮ ಸ್ಥಳೀಯ ಪ್ರೊಟೆಕ್ಟರ್ ಲೈನ್‌ಗೆ Protector Line ಕರೆ ಮಾಡಿ.
- ತೆರಿಗೆ ವಂಚನೆ ಸೇರಿದಂತೆ ಮೋಸದ ಚಟುವಟಿಕೆಯ ಅಪಖ್ಯಾತಿಯನ್ನು ಹೊಂದಿರುವ ಕಂಪನಿಗಳೊಂದಿಗೆ ವ್ಯಾಪಾರ ಮಾಡಬೇಡಿ. ನೀವು ಹೊಸ ಮೂರನೇ ಪಕ್ಷಗಳೊಂದಿಗೆ ಕೆಲಸ ಮಾಡುವ ಮೊದಲು ಯಾವಾಗಲೂ ಅಗತ್ಯ ತಪಾಸಣೆಯನ್ನು ಕೈಗೊಳ್ಳಿ.
- ವಂಚನೆಯ "ಕೆಂಪು ನಿಶಾನೆ"ಗಳಿಗಾಗಿ ನೋಡಿ ಮತ್ತು ನೀವೇನಾದರು ಅವುಗಳನ್ನು ಗುರುತಿಸಿದರೆ ಕ್ರಮ ತೆಗೆದುಕೊಳ್ಳಿ. ಕೆಂಪು ನಿಶಾನೆಗಳು ಕಾರುಗಳ ಅಥವಾ ಇತರ ಹೆಚ್ಚಿನ ಮೌಲ್ಯದ ವಸ್ತುಗಳ ದುಂದು ಖರೀದಿಯಂತಹ ಹಠಾತ್ ಜೀವನಶೈಲಿಯ ಬದಲಾವಣೆಗಳನ್ನು ಒಳಗೊಂಡಿವೆ.
- ಯಾವಾಗಲೂ ನಮ್ಮ ಪ್ರಯಾಣ ಮತ್ತು ಖರ್ಚು ನೀತಿಗಳನ್ನು ಅನುಸರಿಸಿ.

ಪ್ರಶ್ನೆಗಳು & ಉತ್ತರಗಳು

Q ನನ್ನ ವಿತರಣಾ ಕೇಂದ್ರದ ಸಹೋದ್ಯೋಗಿಯೊಬ್ಬರು ಹೆಚ್ಚುಳವಾಗಿ ಪಡೆದ ದಾಸ್ತಾನನ್ನು eBay ನಲ್ಲಿ ಮಾರಾಟ ಮಾಡುತ್ತಿದ್ದಾರೆ. ಅದು ದಾನಕ್ಕಾಗಿ ಎಂದು ಮತ್ತು ಡಿಸಿ ಮ್ಯಾನೇಜರ್‌ರೊಂದಿಗೆ ಆ ಕುರಿತು ಒಪ್ಪಿಗೆ ಪಡೆಯಲಾಗಿದೆ ಎಂದು ಅವರು ಹೇಳುತ್ತಾರ ಆದರೆ ಹಣ ಎಲ್ಲಿಗೆ ಹೋಗುತ್ತಿದೆ ಎಂದು ನನಗೆ ತಿಳಿದಿಲ್ಲ. ನಾನು ಏನು ಮಾಡಬೇಕು?

A **ನಿಮ್ಮ ಕಳವಳವು ಆಧಾರರಹಿತವಾಗಿದ್ದರೂ ಸಹ, ನೀವು ಧ್ವನಿಯೆತ್ತುವುದು ಮುಖ್ಯ. ನಿಮ್ಮ ಲೈನ್ ಮ್ಯಾನೇಜರ್ ಅಥವಾ ಡಿಸಿ ಮ್ಯಾನೇಜರ್‌ರೊಂದಿಗೆ ಮಾತನಾಡಲು ನಿಮಗೆ ಸಂಕೋಚವಿದ್ದರೆ, ನೀವು ಪ್ರೊಟೆಕ್ಟರ್ ಲೈನ್ Protector Line ಗೆ ಕರೆ ಮಾಡಿ ಮತ್ತು ನಿಮ್ಮ ಕಳವಳಗಳ ಬಗ್ಗೆ ಧ್ವನಿಯೆತ್ತಿ. ನೀವು ಕರೆ ಮಾಡಿದಾಗ ನಿಮ್ಮ ಹೆಸರನ್ನು ನೀಡುವ ಅಗತ್ಯವಿರುವುದಿಲ್ಲ.**

Q ಸಹೋದ್ಯೋಗಿಯೊಬ್ಬರು ಇತ್ತೀಚೆಗೆ ಕೆಲಸದ ಮೇಲೆ ಪ್ರಯಾಣಿಸುತ್ತಿದ್ದರು ಮತ್ತು ಕೆಲವು ಸ್ನೇಹಿತರನ್ನು ರಾತ್ರಿ ಭೋಜನಕ್ಕೆ ಕರೆದೊಯ್ದರು ಮತ್ತು ವೆಚ್ಚವನ್ನು ಮರುಪಾವತಿಗಾಗಿ ಖರ್ಚಾಗಿ ಸಲ್ಲಿಸಿದರು? ಇತರ ಖರ್ಚುಗಳನ್ನು ಸಲ್ಲಿಸಲು ಅವಳು ಆಗಾಗ್ಗೆ ಮರೆತಿದ್ದರಿಂದ ಇದು ಸರಿಯಾಗಿದೆ ಎಂದು, ಆದ್ದರಿಂದ ಎಲ್ಲವೂ ಅಂತಿಮವಾಗಿ "ಸಮತೋಲನಗೊಳ್ಳುತ್ತದೆ" ಮತ್ತು ನಾನೂ ಅದ ರೀತಿ ಮಾಡಬೇಕು ಎಂದು ಆಕೆ ಹೇಳುತ್ತಾರೆ. ಇದು ಸ್ವೀಕಾರಾರ್ಹವೇ?

A **ಇಲ್ಲ. ಈ ಖರ್ಚುಗಳನ್ನು ಸಲ್ಲಿಸುವ ಮೂಲಕ ಅವಳು ವಂಚನೆ ಮಾಡುತ್ತಿದ್ದಾಳೆ. ವೈಯಕ್ತಿಕ ವೆಚ್ಚಗಳು ಕೆಲಸ ಮಾಡುವಾಗ ನೀವು ಯಾವ ಶುಲ್ಕ ತೆತ್ತಿರಿ ಎಂಬುದನ್ನು ಪ್ರತಿಬಿಂಬಿಸಬೇಕು.**

ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

- ಗ್ರೂಪ್ ಸುರಕ್ಷತೆ, ಭದ್ರತೆ ಮತ್ತು ಸ್ಥಿತಿಸ್ಥಾಪಕತ್ವ ತಂಡ ಅಥವಾ ಸ್ಥಳೀಯ ಭದ್ರತಾ ತಂಡ
- ಸ್ಥಳೀಯ ತೆರಿಗೆ ತಂಡ
- ಪ್ರಯಾಣ & ವೆಚ್ಚಗಳ ನೀತಿ

Q ನನ್ನೊಂದಿಗೆ ಕೆಲಸ ಮಾಡುವ ಸಹೋದ್ಯೋಗಿಯೊಬ್ಬರು ಪೂರೈಕೆದಾರರೊಬ್ಬರಿಂದ ಇನ್‌ವಾಯ್ಸ್‌ಗಳನ್ನು ಸಲ್ಲಿಸುತ್ತಿದ್ದಾರೆ, ಅಲ್ಲಿನ ಮೊತ್ತವು ಪೂರಕ ದಾಖಲೆಗಳೊಂದಿಗೆ ಹೊಂದಿಕೆಯಾಗುವುದಿಲ್ಲ. ಈ ಪೂರೈಕೆದಾರರಿಗೆ ಅವುಗಳನ್ನು "ಯಾವಾಗಲೂ ಈ ರೀತಿಯೇ ಮಾಡಲಾಗುತ್ತದೆ" ಈ ವ್ಯತ್ಯಾಸವನ್ನು ಬೇರೆ ಒಪ್ಪಂದದಲ್ಲಿ ಒಪ್ಪಲಾಗಿದೆ ಎಂದು ಮತ್ತು ಹೊಂದಿಕೆಯಾಗುವಂತೆ ನಾನು ದಾಖಲೆಗಳನ್ನು ತಿದ್ದುಪಡಿ ಮಾಡಬಹುದು ಆತ ಹೇಳುತ್ತಾರೆ. ನಾನು ಏನು ಮಾಡಬೇಕು?

A **ದಾಖಲೆಗಳನ್ನು ತಿದ್ದುಪಡಿ ಮಾಡಲು ನೀವು ನಿರಾಕರಿಸಬೇಕು ಮತ್ತು ನಿಮ್ಮ ಸಹೋದ್ಯೋಗಿಯನ್ನು ಸರಿಯಾದದವನ್ನು ಪಡೆಯಲು ಕೇಳಿಕೊಳ್ಳಿ. ಅಸಮಂಜಸ ಇನ್ ವಾಯ್ಸ್‌ಗಳು ಮತ್ತು ದಾಖಲೆಗಳು ವಂಚನೆ ಅಥವಾ ಮೋಸದ ಚಟುವಟಿಕೆಯ "ಕೆಂಪು ನಿಶಾನೆ"ಗಳು ಮತ್ತು ಈ ಅಪಾಯಗಳನ್ನು ನಾವು ನಿಖರವಾದ ದಾಖಲೆಗಳು ಮತ್ತು ಇನ್‌ವಾಯ್ಸ್ ಗಳನ್ನು ಇಡುವ ಮೂಲಕ ತಗ್ಗಿಸುತ್ತೇವೆ. ಏನು ಮಾಡಬೇಕೆಂದು ನಿಮಗೆ ಆಗಲೂ ಖಚಿತವಾಗದಿದ್ದರೆ ನಿಮ್ಮ ಕಳವಳವನ್ನು ನಿಮ್ಮ ಲೈನ್ ಮ್ಯಾನೇಜರ್‌ರೊಂದಿಗೆ ಹೇಳಿಕೊಳ್ಳಿ.**

Q ನಾನು ಒಬ್ಬ ಹೊಸ ಪೂರೈಕೆದಾರರಿಂದ ನನಗೆ ಉತ್ತಮ ಬೆಲೆಗೆ ಉತ್ಪನ್ನಗಳನ್ನು ನೀಡುವುದಾಗಿ ಹೇಳಿಕೊಂಡು ನನ್ನನ್ನು ಸಂಪರ್ಕಿಸಿದ್ದಾರೆ. ಅವರ ಕಂಪನಿಯ ಬಗ್ಗೆ ನನಗೆ ಹೆಚ್ಚು ತಿಳಿದಿಲ್ಲ, ನಾನು ಹೇಗೆ ಮುಂದುವರಿಯಬೇಕು?

A **ಎಲ್ಲಾ ಹೊಸ ಪೂರೈಕೆದಾರರು ನಮ್ಮ ಅಗತ್ಯ ಸಮಗ್ರತಾ ತಪಾಸಣೆ ಪ್ರಕ್ರಿಯೆಯ ಮೂಲಕ ಹೋಗಬೇಕು. ನಂಬಲಾಗಷ್ಟು ಒಳ್ಳೆಯವಾಗಿ ತೋರುವ ಬೆಲೆಗಳು ಪೂರೈಕೆದಾರರು ತಮ್ಮ ಉತ್ಪನ್ನಗಳಿಗೆ ಸರಿಯಾಗಿ ವ್ಯಾಟ್ ಅಥವಾ ಡ್ಯೂಟಿಯನ್ನು ಪಾವತಿಸದಿರುವುದರಿಂದ ಮಾತ್ರ ಸಾಧ್ಯವಾಗಿರಬಹುದು ಬಹುಪಾಲು ಸಮಯ ಹಾಗೆಯೇ ಸಾಧ್ಯವಾಗಿರುತ್ತವೆ ಕೂಡ. ನಾವು ಸರಿಯಾದ ತಪಾಸಣೆ ನಡೆಸಿದ್ದೇವೆ ಎಂದು ನಮಗೆ ತೋರಿಸಲು ಸಾಧ್ಯವಾಗದಿದ್ದರೆ, ಪ್ರಾಧಿಕಾರಗಳು ಟೆಸ್ಕೊ ಅನ್ನು ಸಂಗ್ರಹಿಸಿರದ ತೆರಿಗೆಗಳು, ಸಂಭಾವ್ಯ ಬಡ್ಡಿ ಮತ್ತು ದಂಡಗಳನ್ನು ಪಾವತಿಸುವಂತೆ ಒತ್ತಾಯಿಸಬಹುದು. ಜೊತೆಗೆ ನಾವು ಕ್ರಿಮಿನಲ್ ಮೊಕದ್ದಮೆಯನ್ನುಕೂಡ ಎದುರಿಸಬಹುದು.**

ಲಂಚ

ಅದು ಏಕೆ ಮುಖ್ಯ?

ಒಂದು ವ್ಯಾಪಾರ ಮಳಿಗೆಗಳನ್ನು ಹೊಂದಿರುವ ಮತ್ತು ಪ್ರಪಂಚದಾದ್ಯಂತದ ಪೂರೈಕೆದಾರರಿಂದ ಖರೀದಿಸುತ್ತಿರುವ ವ್ಯವಹಾರವಾಗಿ, ಲಂಚಕ್ಕೆ ಸಂಬಂಧಿಸಿದ ಅಪಾಯಗಳ ಬಗ್ಗೆ ನಾವು ಎಚ್ಚರವಾಗಿರಬೇಕು. ನಾವು ವ್ಯಾಪಾರ ಮಾಡುವಲ್ಲೆಲ್ಲಾ ನ್ಯಾಯಯುತವಾಗಿ ಮತ್ತು ನೈತಿಕವಾಗಿ ವರ್ತಿಸುವೆವೆಂದು ನಾವು ಹೊಂದಿರುವ ಖ್ಯಾತಿಯ ಬಗ್ಗೆ ನಾವು ಹೆಮ್ಮೆ ಪಡುತ್ತೇವೆ.

ಲಂಚದ ಕುರಿತು ನಮ್ಮ ಶೂನ್ಯ ಸಹಿಷ್ಣುತೆ ವಿಧಾನ ಮತ್ತು ಪ್ರಪಂಚದಾದ್ಯಂತದ ಭ್ರಷ್ಟಾಚಾರವನ್ನು ಕಡಿಮೆ ಮಾಡುವ ನಮ್ಮ ಬದ್ಧತೆಯನ್ನು ಪ್ರತಿಯೊಬ್ಬರೂ ಅರ್ಥಮಾಡಿಕೊಂಡಿರುವುದು ಬಹಳ ಮುಖ್ಯ. ನಾವು ಕಾರ್ಯನಿರ್ವಹಿಸುವ ಎಲ್ಲಾ ದೇಶಗಳಲ್ಲೂ ಲಂಚ ನೀಡುವುದು ಕಾನೂನುಬಾಹಿರವಾಗಿದೆ. ಅದು ಮಾರುಕಟ್ಟೆಗಳು ಮತ್ತು ಸಮುದಾಯಗಳನ್ನು ಹಾನಿಗೊಳಿಸುತ್ತದೆ ಮತ್ತು ಸಂಪನ್ಮೂಲಗಳನ್ನು ತಪ್ಪು ಕೈಗಳಿಗೆ ವರ್ಗಾಯಿಸುತ್ತದೆ.

ಒಂದು ವ್ಯವಹಾರವಾಗಿ ನಾವು ನಮ್ಮೊಂದಿಗೆ ಕೆಲಸ ಮಾಡುವ ಪ್ರತಿಯೊಬ್ಬರೂ ಅದೇ ಶೂನ್ಯ ಸಹಿಷ್ಣುತೆಯ ವಿಧಾನವನ್ನು ಅಳವಡಿಸಿಕೊಳ್ಳಬೇಕೆಂದು ನಿರೀಕ್ಷಿಸುತ್ತೇವೆ. ಯುಕೆ ವಿಶ್ವದ ಕೆಲವು ಅತ್ಯಂತ ಕಠಿಣ ಲಂಚದ ಕಾನೂನುಗಳನ್ನು ಹೊಂದಿದೆ ಮತ್ತು ಅವು ಏಜೆಂಟರು ಮತ್ತು ಗುತ್ತಿಗೆದಾರರು ಸೇರಿದಂತೆ ನಮಗಾಗಿ ಕೆಲಸ ಮಾಡುವ ಪ್ರತಿಯೊಬ್ಬರಿಗೂ ಅನ್ವಯಿಸುತ್ತವೆ. ಯುಕೆ ನಾಗರಿಕರ ವಿರುದ್ಧ ಅವರು ವಿದೇಶಗಳಲ್ಲಿ ಮಾಡಿದ ಲಂಚದ ಕೃತ್ಯಗಳಿಗೂ ಕೂಡ ಕಾನೂನು ಕ್ರಮ ಜರುಗಿಸಬಹುದು.

ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

- ಗ್ರೂಪ್ ಕಾನೂನು ವ್ಯವಹಾರ ಸಮಗ್ರತಾ ತಂಡ ಅಥವಾ ಸ್ಥಳೀಯ ಕಾನೂನು ತಂಡ
- ಲಂಚ-ವಿರೋಧಿ ನೀತಿ
- ಆಸಕ್ತಿ-ವೈರುಧ್ಯ ನೀತಿ
- ಉಡುಗೊರೆ &

ನನ್ನ ಕುರಿತಂತೆ ಇದು ಏನು ಅರ್ಥ ನೀಡುತ್ತದೆ?

- ನಿಮ್ಮ ಪರವಾಗಿ ವರ್ತಿಸುವಂತೆ ಯಾರನ್ನಾದರೂ ಮನವೊಲಿಸಲು ಎಂದಿಗೂ ನಗದು ಅಥವಾ ಇತರ ಯಾವುದೇ ಪ್ರಯೋಜನಗಳಂತ ಲಂಚ, ಸಲ್ಲಿಕೆ, ಉಡುಗೊರೆಗಳನ್ನು ನೀಡಬೇಡಿ.
- ಹೊಸ ಅಥವಾ ಅಸ್ತಿತ್ವದಲ್ಲಿರುವ ಪೂರೈಕೆದಾರರಿಗೆ ವ್ಯವಹಾರವನ್ನು ನೀಡಲು ಎಂದಿಗೂ ಉಡುಗೊರೆಗಳು ಅಥವಾ ಮನರಂಜನೆಯಂತಹ ಲಂಚವನ್ನು ಕೇಳವುದು ಅಥವಾ ಸ್ವೀಕರಿಸುವುದು ಮಾಡಬೇಡಿ.
- ಅಗತ್ಯ ಸಮಗ್ರತಾ ತಪಾಸಣೆಯನ್ನು ಕೈಗೊಳ್ಳುವ ಮೂಲಕ ನಾವು ಒಡನಾಡುವ ಮೂರನೇ ಪಕ್ಷಗಳ ಬಗ್ಗೆ ತಿಳಿದುಕೊಳ್ಳಿ ಮತ್ತು ಅರ್ಥಮಾಡಿಕೊಳ್ಳಿ, ವಿಶೇಷವಾಗಿ ನಮ್ಮ ಪರವಾಗಿ ಸೇವೆಗಳನ್ನು ನಿರ್ವಹಿಸುವವರ ಬಗ್ಗೆ.
- ಸಾರ್ವಜನಿಕ ಅಧಿಕಾರಿಗಳೊಂದಿಗೆ ಒಡನಾಡುವಾಗ ಉಂಟಾಗುವ ಲಂಚದ ಅಪಾಯಗಳ ಬಗ್ಗೆ ಎಚ್ಚರವಿರಲಿ ಮತ್ತು ನಮ್ಮ ಒಡನಾಟಗಳು ಯಾವಾಗಲೂ ಮುಕ್ತ, ಪ್ರಾಮಾಣಿಕ ಮತ್ತು ಪಾರದರ್ಶಕವಾಗಿರುತ್ತವೆ ಎಂಬುದನ್ನು ಖಚಿತಪಡಿಸಿಕೊಳ್ಳಿ.
- ವಾಡಿಕೆಯ ನಿರ್ಧಾರಗಳನ್ನು ತ್ವರಿತಗೊಳಿಸಲು ನೀವು ಕಾನೂನುಬದ್ಧ ಶೀಘ್ರ-ಮಾರ್ಗ ಪ್ರಕ್ರಿಯೆಗಳನ್ನು ಬಳಸಬಹುದು ಆದರೆ ಅನುಮತಿ ಅಥವಾ ಪರವಾನಗಿಯನ್ನು ಪಡೆದುಕೊಳ್ಳಲು ಸಾರ್ವಜನಿಕ ಅಧಿಕಾರಿಗಳಿಗೆ ನೇರವಾಗಿ ಎಂದಿಗೂ ಸಲ್ಲಿಕೆಗಳನ್ನು ಮಾಡಬೇಡಿ.
- ಲಂಚ ಮತ್ತು ಭ್ರಷ್ಟಾಚಾರದ ಅಪಾಯಗಳ ಕುರಿತು ಮತ್ತು ವ್ಯವಹಾರದಾದ್ಯಂತ ನಾವು ಎದುರಿಸಬಹುದಾದ ಸಮಸ್ಯೆಗಳ ಕುರಿತು ನೀವು ಸಂಪೂರ್ಣವಾಗಿ ತರಬೇತಿ ಪಡೆದಿದ್ದೀರಿ ಎಂಬುದನ್ನು ಖಚಿತಪಡಿಸಿಕೊಳ್ಳಿ.
- ಕಾನೂನು ಜಾರಿ ಸಂಸ್ಥೆಗಳು ಮತ್ತು ತನಿಖಾಧಿಕಾರಿಗಳೊಂದಿಗೆ ಸಂಪೂರ್ಣವಾಗಿ ಸಹಕರಿಸಿ ಮತ್ತು ಸಾಕಷ್ಟು ಪುರಾವೆಗಳು ಇರುವಲ್ಲಿ ಕಾನೂನು ಕ್ರಮ ಅಥವಾ ಶಿಸ್ತು ಕ್ರಮವನ್ನು ಬೆಂಬಲಿಸಿ.
- ನಿಮಗೆ ಅಥವಾ ಬೇರೆಯವರಿಗೆ ಲಂಚದ ಆಮಿಷ ನೀಡಿದ್ದರೆ, ತಕ್ಷಣ ನಿಮ್ಮ ಸ್ಥಳೀಯ ಕಾನೂನು ಅಥವಾ ಭದ್ರತಾ ತಂಡವನ್ನು ಸಂಪರ್ಕಿಸಿ.

ಪ್ರಶ್ನೆಗಳು & ಉತ್ತರಗಳು

Q ನನ್ನ ಸಹೋದ್ಯೋಗಿಯೊಬ್ಬರು ಆಕೆಯ ಪೂರೈಕೆದಾರರು ಟೆಸ್ಕೊ ಜೊತೆ ಕೆಲಸ ಮಾಡಬಯಸಿದರೆ "ಅವಳನ್ನು ನೋಡಿಕೊಳ್ಳಬೇಕು" ಎಂದು ತಿಳಿದಿದ್ದಾರೆ ಎಂದು ಕೊಚ್ಚಿಕೊಳ್ಳುತ್ತಾರೆ. ಅದು ಸರಿಯೇ?

A **ಇಲ್ಲ. ಪೂರೈಕೆದಾರೊಬ್ಬರಿಂದ ಸರಕು ಅಥವಾ ಸೇವೆಗಳನ್ನು ಖರೀದಿಸುವುದಕ್ಕೆ ಪ್ರತಿಯಾಗಿ ಅವರಿಂದ ಮನರಂಜನೆ ಅಥವಾ ಇತರ ಪ್ರಯೋಜನಗಳನ್ನು ಕೋರುವುದು ನಮ್ಮ ಉಡುಗೊರೆ ನೀತಿಯ ಉಲ್ಲಂಘನೆಯಾಗಿದೆ. ಇದು ಲಂಚವೂ ಆಗಿರಬಹುದು. ನೀವು ಕೂಡಲೇ ನಿಮ್ಮ ಕಳವಳಗಳನ್ನು ಎತ್ತಬೇಕು. ನಿಮ್ಮ ಲೈನ್ ಮ್ಯಾನೇಜರ್‌ರೊಂದಿಗೆ ಮಾತನಾಡಿ ಅಥವಾ ನಿಮ್ಮ ಕಾನೂನು ಅಥವಾ ಭದ್ರತಾ ತಂಡವನ್ನು ಸಂಪರ್ಕಿಸಿ.**

Q ನನ್ನ ಮಾರ್ಕೆಟ್‌ನಲ್ಲಿ ನನ್ನ ಕಾಗದಪತ್ರಗಳಿಗೆ ಮುದ್ರೆ ಹಾಕಿಸಿಕೊಳ್ಳಲು ಸ್ಥಳೀಯ ಅಧಿಕಾರಿಗೆ ಅಲ್ಪ ಮೊತ್ತದ ಹಣ ಪಾವತಿಸುವುದು ಕಾನೂನುಬಾಹಿರವಲ್ಲ. ಇದೊಂದು ಸಮಸ್ಯೆಯೇ?

A **ಹೌದು. ಇದು ವಾಸ್ತವವಾಗಿ ಒಂದು ಸಣ್ಣ ಲಂಚವಾಗಿದ್ದು, ಇದನ್ನು 'ಫೆಸಿಲಿಟೇಶನ್ ಪೇಮೆಂಟ್ (ಸುಗಮವಾಗಿಸುವ ಪಾವತಿ)' ಎಂದೂ ಕರೆಯಲಾಗುತ್ತದೆ ಮತ್ತು ನೀವು ಟೆಸ್ಕೊಗಾಗಿ ಬೇರೆ ದೇಶದಲ್ಲಿ ಕೆಲಸ ಮಾಡುತ್ತಿದ್ದರೂ ಸಹ ಯುಕೆ ಕಾನೂನಿನ ಪ್ರಕಾರ ಇದು ಕಾನೂನುಬಾಹಿರವಾಗಿದೆ. ಎಲ್ಲಾ ಲಂಚಗಳಂತೆ, ಫೆಸಿಲಿಟೇಶನ್ ಪೇಮೆಂಟ್‌ಗಳನ್ನು ನಿರಾಕರಿಸಬೇಕು ಮತ್ತು ವರದಿ ಮಾಡಬೇಕು.**

Q ನಾನು ಅನೇಕ ವೇಳೆ ವ್ಯವಹಾರಕ್ಕಾಗಿ ನನಗೆ ಅಗತ್ಯವಿರುವ ಪರವಾನಗಿಗಳನ್ನು ಪಡೆಯುವ ಸಲಹೆಗಾರರೊಂದಿಗೆ ವ್ಯವಹರಿಸುತ್ತೇನೆ. ಹೊಸ ಸಲಹೆಗಾರನೊಬ್ಬ ಆಡಳಿತ ಮತ್ತು ನಿರೀಕ್ಷಣಾ ಸಮಯವನ್ನು ಅರ್ಧದಷ್ಟು ಕಡಿಮೆ ಮಾಡುವುದಾಗಿ ಪ್ರಸ್ತಾಪಿಸಿದ್ದಾನೆ ಆದರೆ ಆತ ಇದನ್ನು ಹೇಗೆ ಮಾಡುತ್ತಾರೆ ಎಂಬುದು ಸ್ಪಷ್ಟವಾಗಿಲ್ಲ. ನನಗೆ ಬೇಕಾದುದನ್ನು ಅವರು ತಲುಪಿಸಬಹುದಾಗಿದ್ದರೆ ಅವರು ಅದನ್ನು ಹೇಗೆ ಮಾಡುತ್ತಾರೆಂಬ ಬಗ್ಗೆ ನಾನು ಚಿಂತಿಸಬೇಕೇ?

A **ಹೌದು. ನಮ್ಮ ಪರವಾಗಿ ಕಾರ್ಯನಿರ್ವಹಿಸುವವರ (ಅಸೋಸಿಯೇಟೆಡ್ ಪರ್ಸನ್ಸ್ ಎಂದೂ ಕರೆಯುತ್ತಾರೆ) ಕ್ರಮಗಳು ನಮಗೆ ಗಮನಾರ್ಹ ಲಂಚದ ಅಪಾಯಗಳನ್ನುಂಟುಮಾಡುತ್ತದೆ. ಅವರು ನಿಖರವಾಗಿ ಏನು ಮಾಡುತ್ತಿದ್ದಾರೆ ಮತ್ತು ಅವರು ನಮ್ಮ ಪರವಾಗಿ ಹೇಗೆ ವರ್ತಿಸುತ್ತಿದ್ದಾರೆ ಎಂಬುದರ ಕುರಿತು ನಾವು ಸ್ಪಷ್ಟವಾಗಿರುವುದು ಮುಖ್ಯ. ಲಂಚದ ಕೃತ್ಯದಿಂದ ಹಾನಿಗೊಳಗಾಗಲು ನಮ್ಮ ಖ್ಯಾತಿ ತುಂಬಾ ಮುಖ್ಯವಾಗಿದೆ ಮತ್ತು ಅದರ ಬಗ್ಗೆ ನಮಗೆ ತಿಳಿದಿಲ್ಲದಿದ್ದರೂ ಸಹ ನಾವು ಹೊಣೆಗಾರರಾಗಬಹುದು. ನಿಮ್ಮ ಸ್ಥಳೀಯ ಕಾನೂನು ತಂಡದೊಂದಿಗೆ ಮಾತನಾಡಿ ಮತ್ತು ಟೆಸ್ಕೊ ಪರವಾಗಿ ಕಾರ್ಯನಿರ್ವಹಿಸುವ ಮೊದಲು ಎಲ್ಲಾ ಮೂರನೇ ಪಕ್ಷಗಳ ಬಗ್ಗೆ ನೀವು ಅಗತ್ಯ ಸಮಗ್ರತಾ ತಪಾಸಣೆಯನ್ನು ಮಾಡಿದ್ದೀರಿ ಎಂಬುದನ್ನು ಖಚಿತಪಡಿಸಿಕೊಳ್ಳಿ.**

ಉಡುಗೊರೆಗಳು ಮತ್ತು ಮನರಂಜನೆ

ಅದು ಏಕೆ ಮುಖ್ಯ?

ಸಾಧಾರಣ ಉಡುಗೊರೆಗಳು ಅಥವಾ ಮನರಂಜನೆಯನ್ನು ನೀಡುವುದು ಮತ್ತು ಸ್ವೀಕರಿಸುವುದು ಪೂರೈಕೆದಾರರು ಮತ್ತು ಇತರ ಪಕ್ಷಗಳೊಂದಿಗೆ ಸಂಬಂಧವನ್ನು ಬೆಳೆಸುವಿಕೆಯ ಪ್ರಮುಖ ಭಾಗವಾಗಿದೆ. ಆದಾಗ್ಯೂ, ಇದು ಎಂದಿಗೂ ನಮ್ಮ ವ್ಯವಹಾರ ನಿರ್ಧಾರಗಳ ಮೇಲೆ ಯಾವುದೇ ರೀತಿಯಲ್ಲಿ ಪ್ರಭಾವ ಬೀರಬಾರದು - ಬೀರುವಂತೆ ಕಾಣಬಾರದು. ನಾವು ಕಾರ್ಯನಿರ್ವಹಿಸುವ ದೇಶಗಳಲ್ಲಿನ ಸ್ಥಳೀಯ ವ್ಯಾಪಾರ ಅಭ್ಯಾಸಗಳು ಏನೇ ಇರಲಿ, ನಾವು ಎಂದಿಗೂ ಭರವಸೆಗಳು, ಉಡುಗೊರೆಗಳು ಅಥವಾ ಇತರ ಯಾವುದೇ ಆಮಿಷಗಳಿಗೆ ಬದಲಾಗಿ ಯಾವುದೇ ಪ್ರಭಾವ ಬೀರಲು ಬಯಸುವುದಿಲ್ಲ ಮತ್ತು ಪ್ರಭಾವ ಬೀರುವುದಿಲ್ಲ.

ಪಡೆಯುವ ಅಥವಾ ನೀಡಲಾಗುವ ಯಾವುದೇ ಉಡುಗೊರೆ ಅಥವಾ ಮನರಂಜನೆ ಸೂಕ್ತವಾಗಿರಬೇಕು, ನಮ್ಮ ನೀತಿಗೆ ಅನುಗುಣವಾಗಿ ಅನುಮೋದನೆ ಪಡೆದಿರಬೇಕು ಮತ್ತು ಅಗತ್ಯವಿರುವಲ್ಲಿ ಸ್ಥಳೀಯ ಉಡುಗೊರೆ ರಿಜಿಸ್ಟರ್‌ನಲ್ಲಿ ನಮೂದಿಸಿರಬೇಕು.

ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

- ಗ್ರೂಪ್ ಕಾನೂನು ವ್ಯವಹಾರ ಸಮಗ್ರತಾ ತಂಡ ಅಥವಾ ಸ್ಥಳೀಯ ಕಾನೂನು ತಂಡ
- ಉಡುಗೊರೆ & ಮನರಂಜನಾ ನೀತಿ

ನನಗೆ ಇದರ ಅರ್ಥವೇನು?

ಯಾವಾಗಲೂ ನಮ್ಮ ಉಡುಗೊರೆ ಮತ್ತು ಮನರಂಜನಾ ನೀತಿಯನ್ನು ಅನುಸರಿಸಿ. ನೀವೇನಾದರು ಯುಕೆಯಲ್ಲಿದ್ದರೆ ಮತ್ತು £100 ಕ್ಕಿಂತ ಹೆಚ್ಚಿನ ಮೌಲ್ಯದ ಉಡುಗೊರೆ ಅಥವಾ ಮನರಂಜನೆಯನ್ನು ಸ್ವೀಕರಿಸಿದರೆ, ನಿಮ್ಮ ವ್ಯವಸ್ಥಾಪಕರಿಂದ ಅನುಮೋದನೆ ಪಡೆಯಿರಿ ಮತ್ತು ವಿವರಗಳನ್ನು ಉಡುಗೊರೆ ರಿಜಿಸ್ಟರ್‌ನಲ್ಲಿ ನಮೂದಿಸಿ. ಇತರ ಮಾರುಕಟ್ಟೆಗಳಲ್ಲಿ ಸ್ಥಳೀಯವಾಗಿ ಹೊಂದಿಸಲಾದ ಮಿತಿಗಳು ಅನ್ವಯವಾಗುತ್ತವೆ. ಅವುಗಳ ಮೌಲ್ಯಗಳು ಏನೇ ಇರಲಿ ಸೂಕ್ತವಲ್ಲದ ಉಡುಗೊರೆಗಳು ಮತ್ತು ಮನರಂಜನೆಯನ್ನು ಯಾವಾಗಲೂ ತಿರಸ್ಕರಿಸಬೇಕು.

ನೆನಪಿಡಿ:

- ಉಡುಗೊರೆ ಅಥವಾ ಮನರಂಜನೆಯನ್ನು ಸ್ವೀಕರಿಸಬೇಕೆ ಎಂದು ನಿರ್ಧರಿಸುವಾಗ ನಿಮ್ಮ ಔಚಿತ್ಯ ಪ್ರಜ್ಞೆಯನ್ನು ಬಳಸಿ ಮತ್ತು ನಮ್ಮ ಮೌಲ್ಯಗಳನ್ನು ಪರಿಗಣಿಸಿ.
- ಉಡುಗೊರೆ ಕಾರ್ಡ್‌ಗಳು ಅಥವಾ ವೌಚರ್‌ಗಳಂತಹ ನಗದು ಅಥವಾ ನಗದು ಸಮಾನವಾದ ಉಡುಗೊರೆಯನ್ನು ಎಂದಿಗೂ ಸ್ವೀಕರಿಸಬೇಡಿ ಅಥವಾ ನೀಡಬೇಡಿ.
- ನೀವು ಸ್ಪಷ್ಟವಾದ ವ್ಯವಹಾರ ಸಮರ್ಥನೆಯನ್ನು ಹೊಂದಿರದಿದ್ದರೆ ದುಬಾರಿ ಉಡುಗೊರೆಗಳು ಅಥವಾ ಮನರಂಜನೆಯ ಸ್ವೀಕೃತಿಗಳು ಸಾಮಾನ್ಯವಾಗಿ ಸೂಕ್ತವಲ್ಲ.
- ವ್ಯವಹಾರದ ಪರವಾಗಿ ನಿಮ್ಮ ನಿರ್ಧಾರಗಳ ಮೇಲೆ ಪ್ರಭಾವ ಬೀರುವ ಅಥವಾ ಲಂಚವಾಗಿ ಪರಿಗಣಿಸಬಹುದಾದ ಯಾವುದೇ ಉಡುಗೊರೆ ಅಥವಾ ಮನರಂಜನೆಯನ್ನು ನೀವು ಎಂದಿಗೂ ಸ್ವೀಕರಿಸಬಾರದು.
- ಸಾರ್ವಜನಿಕ ಅಧಿಕಾರಿಗಳಿಗೆ ಯಾವುದೇ ಉಡುಗೊರೆಗಳನ್ನು ನೀಡುವ ಮೊದಲು ಯಾವಾಗಲೂ ಕಾಳಜಿ ವಹಿಸಿ ಮತ್ತು ನಿಮ್ಮ ಕಾನೂನು ನಿರ್ದೇಶಕರನ್ನು ಸಂಪರ್ಕಿಸಿ.
- ಅಸಭ್ಯ, ಅಶ್ಲೀಲ ಅಥವಾ ಕಾಮಪ್ರಚೋದಕ ಮನರಂಜನೆಯನ್ನು ಎಂದಿಗೂ ನೀಡಬೇಡಿ ಅಥವಾ ಸ್ವೀಕರಿಸಬೇಡಿ.
- ವಿದೇಶಿ ಪ್ರಯಾಣದ ಅಗತ್ಯವಿರುವ ಮನರಂಜನೆಯನ್ನು ಸ್ವೀಕರಿಸುವ ಮೊದಲು ಒಬ್ಬ ಬಿಸಿನೆಸ್ ಲೀಡರ್ ಅದನ್ನು ಅನುಮೋದಿಸಬೇಕು.

ಪ್ರಶ್ನೆಗಳು & ಉತ್ತರಗಳು

Q ಕಳೆದ ವಾರ ನನ್ನ ಪೂರೈಕೆದಾರರು ನಡೆಸಿದ ರಾಫೆಲ್‌ವೊಂದನ್ನು ನಾನು ಗೆದ್ದಿದ್ದೇನೆ. ನನ್ನ ಬಹುಮಾನ ಹೊಸ ಕ್ಯಾಮೆರಾ. ಈ ಬಹುಮಾನವನ್ನು ನಾನು ಸ್ವೀಕರಿಸಬಹುದೇ?

A ಬಹುಮಾನವನ್ನು ಉಡುಗೊರೆಯಾಗಿ ಪರಿಗಣಿಸಲಾಗುತ್ತದೆ, ಮತ್ತು ಮೌಲ್ಯವು £100 (ಅಥವಾ ಸ್ಥಳೀಯವಾಗಿ ನಿಗದಿಪಡಿಸಿದ ಮಿತಿ) ಗಿಂತ ಹೆಚ್ಚಿದೆ ಎಂದು ಭಾವಿಸಲಾಗಿ ನಿಮಗೆ ನಿಮ್ಮ ಲೈನ್ ಮ್ಯಾನೇಜರ್‌ರ ಅನುಮೋದನೆ ಅಗತ್ಯವಿರುತ್ತದೆ ಮತ್ತು ಉಡುಗೊರೆಯನ್ನು ಸ್ವೀಕರಿಸುವ ಮೊದಲು ನೀವು ನಿಮ್ಮ ನಿರ್ದೇಶಕರಿಗೆ ತಿಳಿಸಬೇಕಾಗುತ್ತದೆ. ನೀವು ಅದನ್ನು ಉಡುಗೊರೆ ರಿಜಿಸ್ಟರ್‌ನಲ್ಲಿ ನಮೂದಿಸಬೇಕು.

Q ನಾನು ಒಬ್ಬ ಮಳಿಗೆ ವ್ಯವಸ್ಥಾಪಕ. ಮುಂಬರುವ ಪ್ರಚಾರದ ಸಮಯದಲ್ಲಿ ಅವರ ಉತ್ಪನ್ನ ಯಾವಾಗಲೂ ಲಭ್ಯವಿರುತ್ತದೆ ಎಂದು ನಾನು ಖಚಿತಪಡಿಸುವುದಾದರೆ ಪೂರೈಕೆದಾರರ ಮಳಿಗೆ ತಂಡವು ನನಗೆ £250 ಮೌಲ್ಯದ ಉಡುಗೊರೆ ವೌಚರ್‌ಗಳನ್ನು ನೀಡುವುದಾಗಿ ಹೇಳಿದೆ. ನಾನು ಉಡುಗೊರೆಯನ್ನು ಸ್ವೀಕರಿಸಬಹುದೇ?

A ಇಲ್ಲ. ಉಡುಗೊರೆ ನಗದು ಸಮಾನವಾಗಿರುತ್ತದೆ ಮತ್ತು ಪಾಲಿಸಿಯು ನಗದು ಅಥವಾ ನಗದು ಸಮಾನ ಉಡುಗೊರೆಗಳನ್ನು ಸ್ವೀಕರಿಸಲು ಅನುಮತಿಸುವುದಿಲ್ಲ. ಆದರೆ ಅದಕ್ಕಿಂತ ಮುಖ್ಯವಾಗಿ, ಉಡುಗೊರೆಯು ನಿಮ್ಮ ಗಮನವನ್ನು ಮಳಿಗೆಯಲ್ಲಿ ಲಭ್ಯವಿರುವ ಎಲ್ಲಾ ಉತ್ಪನ್ನಗಳಿಗಿಂತ ಈ ಪ್ರಚಾರವನ್ನು ಬೆಂಬಲಿಸುವತ್ತ ತಿರುಗಿಸುವಂತೆ ಕೋರುತ್ತದೆ. ಆದ್ದರಿಂದ ಇದು ಸೂಕ್ತವಲ್ಲ. ಪ್ರಚಾರಗಳಿಗೆ ಬೆಂಬಲವನ್ನು ಕೇಂದ್ರೀಯವಾಗಿ ಒಪ್ಪಿಕೊಳ್ಳಲಾಗುತ್ತದೆಯೇ ವಿನಃ ಮಳಿಗೆ ಮಟ್ಟದಲ್ಲಲ್ಲ ಎಂದು ಪೂರೈಕೆದಾರರಿಗೆ ತಿಳಿಸಬೇಕು.

Q ವಿಂಬಲ್ಡನ್‌ಗೆ ನನಗೆ ಆತಿಥ್ಯ ಟಿಕೆಟ್ ನೀಡಲಾಗಿದೆ. ಟಿಕೆಟ್‌ನ ಮುಖಬೆಲೆ £450 ಆದರೆ ಆತಿಥ್ಯ ಪ್ಯಾಕೇಜ್‌ನ ಒಟ್ಟು ವೆಚ್ಚ £2000 ಎಂದು ಪೂರೈಕೆದಾರರು ಹೇಳಿದ್ದಾರೆ. ಉಡುಗೊರೆಗಳ ರಿಜಿಸ್ಟರ್‌ನಲ್ಲಿ ನಾನು ನಮೂದಿಸುವಾಗ ನಾನು ಯಾವ ಅಂಕಿಅಂಶವನ್ನು ಬಳಸಬೇಕು?

A ನೀವು ಪೂರೈಕೆದಾರರಿಗೆ ಬೀಳುವ ಒಟ್ಟು ವೆಚ್ಚವಾದ £2000 ಅನ್ನು ಬಳಸಬೇಕು. ಪ್ರಯಾಣ ಅಥವಾ ರಾತ್ರಿಯ ವಸತಿ ಮುಂತಾದ ಯಾವುದೇ ಹೆಚ್ಚುವರಿ ಅಂಶಗಳಿಗೆ ಪೂರೈಕೆದಾರರು ಪಾವತಿಸದಿದ್ದರೆ, ಅವುಗಳ ವೆಚ್ಚವನ್ನು ನಮೂದಿಸಬೇಕಾದ ಒಟ್ಟು ಮೊತ್ತಕ್ಕೆ ಸೇರಿಸಬೇಕು.

Q ಈ ಮೊದಲು ನನ್ನೊಂದಿಗೆ ಕೆಲಸ ಮಾಡಿದ ಪೂರೈಕೆದಾರನೊಬ್ಬನು ಹೊಸ ವ್ಯವಹಾರಕ್ಕಾಗಿ ಕರೆದ ಟೆಂಡರ್ ಹರಾಜು ಪ್ರಕ್ರಿಯೆಯ ಭಾಗವಾಗಿದ್ದಾರೆ. ಈ ಒಪ್ಪಂದವು ಅವರಿಗೆ ಎಷ್ಟು ಮಹತ್ವ ಪೂರ್ಣವಾಗಿದೆ ಎಂದು ತೋರಿಸಲು ಅವರು ನನ್ನನ್ನು ಒಂದು ರಾತ್ರಿ ಭೋಜನಕ್ಕೆ ಕರೆದೊಯ್ಯಲು ಬಯಸುತ್ತಿದ್ದಾರೆ. ಅವರ ಪ್ರಸ್ತಾವವನ್ನು ನಾನು ಸ್ವೀಕರಿಸಬಹುದೇ?

A ಇಲ್ಲ. ನಮ್ಮ ಉಡುಗೊರೆ ಮತ್ತು ಮನರಂಜನಾ ನೀತಿಯು ಎಲ್ಲಾ ಸಹೋದ್ಯೋಗಿಗಳಿಗೆ ಟೆಂಡರ್ ಪ್ರಕ್ರಿಯೆ ನಡೆದಿರುವಾಗ ಯಾವುದೇ ಉಡುಗೊರೆಗಳನ್ನು ಅಥವಾ ಮನರಂಜನೆಯನ್ನು ಸ್ವೀಕರಿಸುವುದನ್ನು ಅಥವಾ ನೀಡುವುದನ್ನು ನಿಷೇಧಿಸುತ್ತದೆ. ಫಲಿತಾಂಶದ ಮೇಲೆ ಯಾವುದೇ ವೈಯಕ್ತಿಕ ಪ್ರಭಾವಗಳಿಲ್ಲದೆ ನಮ್ಮ ನಿರ್ಧಾರಗಳನ್ನು ತೆಗೆದುಕೊಳ್ಳಲಾಗುತ್ತದೆ ಎಂಬುದನ್ನು ಇದು ಖಚಿತಪಡಿಸುತ್ತದೆ.



ಆಸಕ್ತಿ-ವೈರುಧ್ಯ

ಅದು ಏಕೆ ಮುಖ್ಯ?

ನಮ್ಮ ವೈಯಕ್ತಿಕ ಹಿತಾಸಕ್ತಿಗಳಿಗೆ ವ್ಯವಹಾರದ ಅಥವಾ ನಮ್ಮ ಗ್ರಾಹಕರ ಒಳಿತಿಗಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವ ನಮ್ಮ ಸಾಮರ್ಥ್ಯದೊಂದಿಗೆ ಹಸ್ತಕ್ಷೇಪ ಮಾಡಲು ಅಥವಾ ಪ್ರಭಾವಿಸಲು ಅನುಮತಿಸಿದಾಗಲೆಲ್ಲಾ ಆಸಕ್ತಿ-ವೈರುಧ್ಯ ಸಂಭವಿಸುತ್ತದೆ. ಕುಟುಂಬದ ಸದಸ್ಯರು ಪೂರೈಕೆದಾರರಾಗಿದ್ದಾಗ ಅಥವಾ ವ್ಯವಹಾರಕ್ಕೆ ಸೇವೆಗಳನ್ನು ಮಾರಾಟ ಮಾಡುವವರಾಗಿದ್ದಾಗ ಅಥವಾ ನೀವು ನಿಕಟ ವೈಯಕ್ತಿಕ ಸಂಬಂಧವನ್ನು ಹೊಂದಿರುವ ಯಾರನ್ನಾದರೂ ನೀವು ಮೇಲ್ವಿಚಾರಣೆ ಮಾಡುತ್ತಿದ್ದರೆ ಇದು ಸಂಭವಿಸಬಹುದು. ವೈರುಧ್ಯಗಳನ್ನು ಸರಿಯಾಗಿ ನಿರ್ವಹಿಸುವಲ್ಲಿ ನಾವು ವಿಫಲರಾದರೆ, ಅವು ನಮ್ಮ ಪ್ರತಿಷ್ಠೆಗೆ ಹಾನಿಮಾಡಬಹುದು ಮತ್ತು ಕೆಟ್ಟ ಸಂದರ್ಭಗಳಲ್ಲಿ, ವಂಚನೆ, ತಾರತಮ್ಯ ಅಥವಾ ಇತರ ಗಂಭೀರ ಸಮಸ್ಯೆಗಳಿಗೆ ಕಾರಣವಾಗಬಹುದು.

ನನ್ನ ಕುರಿತಂತೆ ಇದು ಏನು ಅರ್ಥ ನೀಡುತ್ತದೆ?

ಆಸಕ್ತಿ-ವೈರುಧ್ಯ ಉಂಟಾದಾಗ ಅಥವಾ ಅದು ಉದ್ಭವಿಸಬಹುದು ಎಂದು ನೀವು ಭಾವಿಸಿದಾಗ, ಇದಕ್ಕೆ ತಕ್ಕ ಕ್ರಮಗಳನ್ನು ತೆಗೆದುಕೊಳ್ಳಿ:

- **ಗುರುತಿಸಿ**: ವ್ಯವಹಾರದ ಪರವಾಗಿ ನಿಮ್ಮ ನಿರ್ಧಾರ ತೆಗೆದುಕೊಳ್ಳುವಿಕೆಯ ಮೇಲೆ ಪ್ರಭಾವ ಬೀರಬಹುದಾದ ಎಲ್ಲ ವೈಯಕ್ತಿಕ ಆಸಕ್ತಿಗಳ ಬಗ್ಗೆ ಅರಿತುಕೊಂಡಿರಿ. ಉದಾಹರಣೆಗೆ ನಿಮ್ಮ ಸಂಗಾತಿ ಅಥವಾ ಕುಟುಂಬ ಸದಸ್ಯರು ಟೆಸ್ಕೊಗೆ ಪೂರೈಕೆದಾರರಾಗಿದ್ದರೆ.
- **ತಪ್ಪಿಸಿ**: ಅಂತಹ ಆಸಕ್ತಿ-ವೈರುಧ್ಯಗಳು ಅಸ್ತಿತ್ವದಲ್ಲಿರಬಹುದಾದ ಎಲ್ಲ ಸಂದರ್ಭಗಳಿಂದ ನಿಮ್ಮನ್ನು ನೀವು ಹಿಂತೆಗೆದುಕೊಳ್ಳಿ ಮತ್ತು ಒಬ್ಬ ಹೊರಗಿನ ವ್ಯಕ್ತಿ ಅದನ್ನು ಹೇಗೆ ನೋಡುತ್ತಾರೆ ಎಂದು ನಿಮ್ಮನ್ನು ನೀವು ಕೇಳಿಕೊಳ್ಳಿ. ಉದಾಹರಣೆಗೆ, ಕುಟುಂಬ ಸದಸ್ಯರಾಗಿದ್ದರೆ ಒಂದೇ ತಂಡದಲ್ಲಿ ಕೆಲಸ ಮಾಡದಿರುವುದು ಉತ್ತಮ.
- **ತಗ್ಗಿಸಿ**: ನಿಮಗೆ ಪರಿಸ್ಥಿತಿಯನ್ನು ತಪ್ಪಿಸಲು ಸಾಧ್ಯವಾಗದಿದ್ದರೆ, ಅದನ್ನು ನಿಮ್ಮ ಲೈನ್ ಮ್ಯಾನೇಜರ್‌ರೊಂದಿಗೆ ಚರ್ಚಿಸಿ ಮತ್ತು ವೈರುಧ್ಯವನ್ನು ನಿರ್ವಹಿಸುವ ಯೋಜನೆಯನ್ನು ಒಪ್ಪಿಕೊಳ್ಳಿ.

ಪ್ರಶ್ನೆಗಳು & ಉತ್ತರಗಳು

Q ನಾವು ಒಬ್ಬ ಹೊಸ ಸೇವಾ ಪೂರೈಕೆದಾರರನ್ನು ಹುಡುಕುತ್ತಿದ್ದೇವೆ ಮತ್ತು ನನ್ನ ಗೆಳೆಯ ಟೆಸ್ಕೊಗೆ ಕೆಲಸ ಮಾಡಬಹುದಾದ ಕಂಪನಿಯೊಂದನ್ನು ನಡೆಸುತ್ತಿದ್ದಾನೆ. ಟೆಂಡರ್ ವಿವರಗಳನ್ನು ನಾನು ಅವರೊಂದಿಗೆ ಹಂಚಿಕೊಳ್ಳಬಹುದೇ?

A **ಇಲ್ಲ. ಟೆಂಡರ್ ವಿವರಗಳು ಗೌಪ್ಯವಾಗಿರುತ್ತವೆ. ಪಾಲುದಾರ, ಸ್ನೇಹಿತ ಅಥವಾ ಸಂಬಂಧಿಕರಿಗೆ ವಾಣಿಜ್ಯಿಕ ಲಾಭವನ್ನು ನೀಡಲು ನೀವು ಟೆಸ್ಕೊದಲ್ಲಿನ ನಿಮ್ಮ ಸ್ಥಾನವನ್ನು ಎಂದಿಗೂ ಬಳಸಬಾರದು. ನಿಮ್ಮ ಗೆಳೆಯ ಬಿಡ್ ಸಲ್ಲಿಸಲು ಬಯಸಿದರೆ, ನಿಮ್ಮ ಲೈನ್ ಮ್ಯಾನೇಜರ್‌ಗೆ ನಿಮ್ಮ ಸಂಬಂಧವನ್ನು ನೀವ� ಬಹಿರಂಗಪಡಿಸಬೇಕು ಮತ್ತು ನೀವು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗಿಯಾಗದೇ ಇರಬಹುದು.**

Q ಮುಂಬರುವ ಪ್ರವಾಸದಲ್ಲಿ ನಾನು ಕೆಲಸಕ್ಕಾಗಿ ಪ್ರಯಾಣಿಸಬೇಕಾಗಿದೆ ಮತ್ತು ನಾನು ನಿಷ್ಠೆ ಅಂಕಗಳನ್ನು ಪಡೆಯುವ ವಿಮಾನಯಾನ ಸಂಸ್ಥೆಯೊಂದಿಗೆ ಟಿಕೆಟ್ ಕಾಯ್ದಿರಿಸಲು ಬಯಸುತ್ತೇನೆ. ನನ್ನ ವಿಮಾನಯಾನ ಸೇವೆಯು ಇತರಗಿಂತ ಹೆಚ್ಚು ದುಬಾರಿಯಾಗಿದ್ದರೂ ನಾನು ಅದನ್ನೇ ಬಳಸಬಹುದೇ?

A **ಇಲ್ಲ, ನಿಮ್ಮ ವೈಯಕ್ತಿಕ ಆಸಕ್ತಿಗಳಿಗೆ ನೀವು ಎಂದಿಗೂ ವ್ಯವಹಾರಕ್ಕಾಗಿ ನೀವು ತೆಗೆದುಕೊಳ್ಳುವ ನಿರ್ಧಾರಗಳ ಮೇಲೆ ಪ್ರಭಾವ ಬೀರಲು ಅನುಮತಿಸಬಾರದು. ಒಂದು ಅಗ್ಗದ ವಿಮಾನಯಾನ ಸೇವೆ ಲಭ್ಯವಿದ್ದರೆ ವ್ಯವಹಾರದ ಒಳಿತಿಗಾಗಿ ನೀವು ಆ ಆಯ್ಕೆಯನ್ನು ಆರಿಸಿಕೊಳ್ಳಬೇಕು.**

ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

- ಗ್ರೂಪ್ ಕಾನೂನು ವ್ಯವಹಾರ ಸಮಗ್ರತಾ ತಂಡ ಅಥವಾ ಸ್ಥಳೀಯ ಕಾನೂನು ತಂಡ
- ಆಸಕ್ತಿ-ವೈರುಧ್ಯ ನೀತಿ

Q ನನ್ನ ತಂಡವು ನಾನು ನನ್ನ ಸೊಸೆಗೆ ಸೂಕ್ತವಾಗಿರುತ್ತದೆ ಎಂದು ಭಾವಿಸುವ ಸ್ಥಾನವೊಂದಕ್ಕಾಗಿ ನೇಮಕಾತಿ ನಡೆಸುತ್ತಿದೆ. ನಾನು ಅವಳ ವಿವರಗಳನ್ನು ನೀಡಿದರೆ ಮತ್ತು ಹುದ್ದೆಗಾಗಿ ಅವಳನ್ನು ಶಿಫಾರಸು ಮಾಡಿದರೆ ಅದು ಸರಿಯೇ?

A **ಹೌದು, ನೀವು ನೇರವಾಗಿ ಅವಳನ್ನು ನೇಮಿಸುವ ನಿರ್ಧಾರವನ್ನು ತೆಗೆದುಕೊಳ್ಳುವ ಅಥವಾ ನಿರ್ಧಾರವನ್ನು ಪ್ರಭಾವಿಸುವ ಸ್ಥಾನದಲ್ಲಿಲ್ಲದಿದ್ದರೆ ಮತ್ತು ನಿಮ್ಮ ಸೊಸೆ ಆ ಹುದ್ದೆಗೆ ಬೇಕಾದ ಜ್ಞಾನ, ಕೌಶಲ್ಯ ಮತ್ತು ಗುಣವನ್ನು ಹೊಂದಿದ್ದರೆ, ನೀವು ಅವಳನ್ನು ಶಿಫಾರಸು ಮಾಡಬಹುದು. ವೈರುಧ್ಯಗಳ ತೋರಿಕೆಯನ್ನು ತಪ್ಪಿಸಲು ಸಾಧ್ಯವಾದಷ್ಟು ಬೇಗ ನಿಮ್ಮ ಸಂಬಂಧಗಳನ್ನು ಘೋಷಿಸಿ.**

Q ನಾನು ಮಾಲ್ ನಿರ್ವಹಣೆಯಲ್ಲಿ ಕೆಲಸ ಮಾಡುತ್ತೇನೆ ಮತ್ತು ನಮ್ಮ ಬೋನಸ್ ನಮ್ಮ ಮಾಲ್‌ಗಳಲ್ಲಿ ಕೆಲವು ಬಾಡಿಗೆ ಗುರಿಗಳನ್ನು ತಲುಪುವುದನ್ನು ಆಧರಿಸಿದೆ. ನನ್ನ ಗುರಿಯನ್ನು ತಲುಪುವುದಕ್ಕೋಸ್ಕರ ನಾನು ಕೆಲ ಕೆಳಮಟ್ಟದ ಬಾಡಿಗೆದಾರರಿಗೆ ಘಟಕಗಳನ್ನು ನೀಡಬಹುದೇ?

A **ಇಲ್ಲ. ನಿಮ್ಮ ಗುರಿಯ ಉದ್ದೇಶ ನಮ್ಮ ಮಾಲ್ ಗಳು ಬಾಡಿಗೆದಾರರ ಸರಿಯಾದ ಮಿಶ್ರಣ ಮತ್ತು ಗುಣಮಟ್ಟದಿಂದ ಆವರಿಸುವುದನ್ನು ಖಚಿತಪಡಿಸಿಕೊಳ್ಳುವುದಾಗಿರುತ್ತದೆ. ಕಳಪೆ ಬಾಡಿಗೆದಾರರು ನಿಮಗೆ ಪ್ರಯೋಜನವನ್ನು ನೀಡುತ್ತಾರೆ, ಆದರೆ ವ್ಯವಹಾರಕ್ಕೆ ಅಥವಾ ನಮ್ಮ ಗ್ರಾಹಕರಿಗೆ ಅಲ್ಲ.**

Q ನನ್ನ ಮ್ಯಾನೇಜರ್ ತನ್ನ ಹೆಂಡತಿಯನ್ನು ತನ್ನ ಪೂರೈಕೆದಾರರಳನ್ನಾಗಿಸಿದ್ದಾನೆ ಮತ್ತು ಇತರ ಪೂರೈಕೆದಾರರಿಗಿಂತ ಅವಳು ಹೆಚ್ಚು ದುಬಾರಿಯಾಗಿದ್ದರೂ ಮತ್ತು ಅವಳ ಉತ್ಪನ್ನಗಳು ಕಳಪೆ ಗುಣಮಟ್ಟದ್ದಾಗಿದ್ದರೂ ಸಹ ಅವಳಗೇ ಕೆಲಸವನ್ನು ನೀಡುತ್ತಿದ್ದಾನೆ ಎಂದು ನನಗೆ ಅನಿಸುತ್ತಿದೆ. ನಾನು ಏನು ಮಾಡಬೇಕು?

A **ಇದು ಕೇವಲ ಆಸಕ್ತಿ-ವೈರುಧ್ಯ ಮಾತ್ರವಲ್ಲ, ಇದು ಟೆಸ್ಕೊ ವಿರುದ್ಧದ ವಂಚನೆಯೂ ಆಗಬಹುದು. ನೀವು ನಿಮ್ಮ ಕಳವಳವನ್ನು ಅವರ ವ್ಯವಸ್ಥಾಪಕರೊಂದಿಗೆ ವ್ಯಕ್ತಪಡಿಸಬೇಕು ಅಥವಾ ನಿಮ್ಮ ಸ್ಥಳೀಯ ಭದ್ರತೆ ಅಥವಾ ಕಾನೂನು ತಂಡವನ್ನು ಸಂಪರ್ಕಿಸಬೇಕು.**

ದತ್ತಿ ದೇಣಿಗೆ

ಅದು ಏಕೆ ಮುಖ್ಯ?

ನಾವು ಸ್ಥಳೀಯ ಮತ್ತು ರಾಷ್ಟ್ರೀಯ ದತ್ತಿಗಳನ್ನು, ಧರ್ಮಕಾರ್ಯಗಳನ್ನು ಬೆಂಬಲಿಸುವ, ನಮ್ಮ ಸಮುದಾಯಗಳಿಗೆ ನಿಜವಾದ ವ್ಯತ್ಯಾಸವನ್ನುಂಟು ಮಾಡುವ ಹಣ, ಸಮಯ, ಉತ್ಪನ್ನಗಳು ಮತ್ತು ಸೇವೆಗಳನ್ನು ಒದಗಿಸುವ ದೀರ್ಘ ಇತಿಹಾಸವನ್ನು ಹೊಂದಿದ್ದೇವೆ. ನಾವು ನಮ್ಮ ಬೆಂಬಲವನ್ನು ನೀಡುವಾಗ, ನಾವು ಬೆಂಬಲಿಸುವ ಸಂಸ್ಥೆಗಳು ಸೂಕ್ತ, ನ್ಯಾಯಸಮ್ಮತ ಮತ್ತು ನಮ್ಮ ಸಮುದಾಯಗಳಿಗೆ ನಾವು ನಿರೀಕ್ಷಿಸುವ ರೀತಿಯಲ್ಲಿ ಸಹಾಯ ಮಾಡುತ್ತಿವೆ ಎಂದು ಪರಿಶೀಲಿಸುವುದು ಬಹಳ ಮುಖ್ಯ. ಇದು ನಮಗೆ ನಾವು ನೀಡುವ ಯಾವುದೇ ದೇಣಿಗೆಗಳು ನಮ್ಮ ಖ್ಯಾತಿಗೆ ಹಾನಿಯಾಗದಂತೆ ನೋಡಿಕೊಳ್ಳಲು ಮತ್ತು ಎಲ್ಲಾ ಸಹೋದ್ಯೋಗಿಗಳನ್ನು ಕಾನೂನು ಅಥವಾ ಆರ್ಥಿಕ ಸವಾಲುಗಳಿಂದ ರಕ್ಷಿಸುತ್ತದೆ ಎಂದು ಖಚಿತಪಡಿಸಿಕೊಳ್ಳಲು ಸಹಾಯ ಮಾಡುತ್ತದೆ.

ನನ್ನ ಕುರಿತಂತೆ ಇದು ಏನು ಅರ್ಥ ನೀಡುತ್ತದೆ?

- ನಮ್ಮ ಸುಸ್ಥಾಪಿತ ದತ್ತಿ ಪಾಲುದಾರರನ್ನು ಬೆಂಬಲಿಸಿ.
- ದಾನವು ಸುಸ್ಥಾಪಿತ ಪಾಲುದಾರರಲ್ಲದಿದ್ದರೆ, ನಾವು ಬೆಂಬಲಿಸಲು ಯೋಜಿಸುತ್ತಿರುವ ಯಾವುದೇ ದತ್ತಿಯ ಮೇಲೆ ಅಗತ್ಯ ಸಮಗ್ರತಾ ತಪಾಸಣೆಯನ್ನು ಕೈಗೊಳ್ಳಿ.
- ಸೂಕ್ತ ಪ್ರಾಧಿಕಾರಕ್ಕೆ ಮಾತ್ರ ದತ್ತಿ ದೇಣಿಗೆ ನೀಡಿ; ದತ್ತಿ ದೇಣಿಗೆ ನೀತಿಯಲ್ಲಿ ಸೂಚಿಸಲಾದ ಅಧಿಕಾರ ನಿಯೋಗದ ಅನುಸೂಚಿಯನ್ನು ಅನುಸರಿಸಿ ಮತ್ತು ಸರಿಯಾದ ಅನುಮೋದನೆಯನ್ನು ಪಡೆಯಿರಿ.
- ನಮ್ಮ ಆಂತರಿಕ ನಿಧಿ ಸಂಗ್ರಹ ವಿಧಾನಗಳು ಮತ್ತು ಮಾರ್ಗದರ್ಶನವನ್ನು ಅನುಸರಿಸಿ.
- ಎಂದಿಗೂ ನಿಮ್ಮ ಪೂರೈಕೆದಾರರಿಗೆ ಟೆಸ್ಕೊ ಬೆಂಬಲಿಸುತ್ತಿರುವ ದತ್ತಿಗಳಿಗೆ ದೇಣಿಗೆ (ಹಣ, ಸರಕು ಅಥವಾ ಸೇವೆಗಳು) ನೀಡುವಂತೆ ಒತ್ತಡ ಹೇರಬೇಡಿ.
- ಟೆಸ್ಕೊ ಖ್ಯಾತಿಗೆ ಧಕ್ಕೆ ತರುವಂತಹ ದತ್ತಿ ಸಂಸ್ಥೆಗಳಿಗೆ ಟೆಸ್ಕೊ ನಿಧಿಯನ್ನು ನೀಡುವುದನ್ನು ಎಂದಿಗೂ ಅನುಮತಿಸಬೇಡಿ.

ಪ್ರಶ್ನೆಗಳು & ಉತ್ತರಗಳು

Q ನನ್ನ ಮಳಿಗೆ ಸ್ಥಳೀಯ ಯುವಕ ಮಂಡಳವನ್ನು ಅವರ ಕ್ರಿಸ್‌ಮಸ್ ರಾಫಲ್‌ಗಾಗಿ £50 ಮೌಲ್ಯದ ಉತ್ಪನ್ನಗಳನ್ನು ದಾನ ಮಾಡುವ ಮೂಲಕ ಬೆಂಬಲಿಸಲು ನೋಡುತ್ತಿದೆ. ನಾನು ಏನು ಮಾಡಬೇಕು?

A **ದೇಣಿಗೆಯು ಟೆಸ್ಕೊದಿಂದ ಬರುತ್ತಿರುವುದರಿಂದ, ಯುವಕ ಮಂಡಳವು ಒಂದು ಸೂಕ್ತವಾದ ಆಯ್ಕೆಯಾಗಿದೆ ಮತ್ತು ಅದು ಒಂದು ನೋಂದಾಯಿತ ದತ್ತಿ ಸಂಸ್ಥೆಯಾಗಿದೆ ಎಂದು ನೀವು ಖಚಿತಪಡಿಸಿಕೊಳ್ಳಬೇಕು; ನಿಮ್ಮ ಸ್ಥಳೀಯ ದತ್ತಿ ದೇಣಿಗೆಗಳ ಮಾರ್ಗದರ್ಶಿಯನ್ನು ನೋಡಿ. ದಾನಕ್ಕೆ ಒಪ್ಪುವ ಮೊದಲು ಸೂಕ್ತ ಪ್ರಾಧಿಕಾರದಿಂದ ಅನುಮತಿ ಪಡೆದುಕೊಳ್ಳಲು ಮರೆಯದಿರಿ; ಇದು £500 ಕ್ಕಿಂತ ಕಡಿಮೆ ಇರುವುದರಿಂದ ಅದು ನಿಮ್ಮ ಮಳಿಗೆ ವ್ಯವಸ್ಥಾಪಕರಾಗಿರುತ್ತಾರೆ.**

Q ಟೂತ್‌ಪೇಸ್ಟ್ ಮೇಲೆ 3 ವಾರದ ಪ್ರಚಾರವನ್ನು ನಡೆಸಲು ನಾವು ನಮ್ಮ ಪೂರೈಕೆದಾರರೊಂದಿಗೆ ಕೆಲಸ ಮಾಡುತ್ತಿದ್ದೇವೆ, ಅಲ್ಲಿ ಪ್ರತಿ ಮಾರಾಟದ 5% ದಾನಕ್ಕೆ ದಾನ ಮಾಡಲಾಗುತ್ತದೆ. ನಾನು ಯಾವ ಪ್ರಕ್ರಿಯೆಯನ್ನು ಅನುಸರಿಸಬೇಕು?

A **ಈ ರೀತಿಯ ಪ್ರಚಾರವನ್ನು ಉದ್ದೇಶ ಸಂಬಂಧಿ ಮಾರ್ಕೆಟಿಂಗ್ (ಸಿಆರ್‌ಎಂ) ಎಂದು ಕರೆಯಲಾಗುತ್ತದೆ ಮತ್ತು (ಗ್ರೂಪ್ ಚಾರಿಟಬಲ್ ದೇಣಿಗೆ ನೀತಿಯಲ್ಲಿ ಸೂಚಿಸಿದಂತೆ) ಇದನ್ನು ವ್ಯವಹಾರ ಘಟಕದ ಉತ್ಪನ್ನ ನಿರ್ದೇಶಕರು ಅನುಮೋದಿಸಬೇಕು. ಎಲ್ಲಾ ಸಿಆರ್ ಎಂಚಟುವಟಿಕೆಗಳನ್ನು ಒಂದು ಸಹಿ ಮಾಡಿದ ಒಪ್ಪಂದದಿಂದ ಸಮರ್ಥಿಸಬೇಕು.**

Q ನಮ್ಮಲ್ಲಿ ಹತ್ತು ಮಂದಿಯನ್ನು ರಾಷ್ಟ್ರೀಯ ದತ್ತಿ ಪಾಲುದಾರನಲ್ಲದ ದತ್ತಿ ಸಂಸ್ಥೆಯೊಂದು ಧರ್ಮಕಾರ್ಯಾರ್ಥ ಗಾಲ್ಫ್ ದಿನಕ್ಕೆ ಆಹ್ವಾನಿಸಿದೆ. ಭಾಗವಹಿಸಲು ನಾವು ದತ್ತಿಗೆ £20,000 ದಾನ ಮಾಡುತ್ತಿದ್ದೇವೆ. ಇದನ್ನು ಅನುಮತಿಸಲಾಗಿದೆಯೇ?

A **ಹೌದು, ಆದಾಗ್ಯೂ ನಿಮ್ಮ ವ್ಯವಹಾರ ಘಟಕದ ಕಾರ್ಯನಿರ್ವಾಹಕ ಅಥವಾ ನಾಯಕತ್ವ ತಂಡದಿಂದ ನಿಮಗೆ ಅನುಮೋದನೆ ಬೇಕಾಗುತ್ತದೆ ಏಕೆಂದರೆ ದೇಣಿಗೆ £10,000 ಕ್ಕಿಂತ ಹೆಚ್ಚಿದೆ ಮತ್ತು ಹಣವನ್ನು ರಾಷ್ಟ್ರೀಯ ದತ್ತಿ ಪಾಲುದಾರನಲ್ಲದ ದತ್ತಿಗೆ ದಾನ ಮಾಡಲಾಗುತ್ತಿದೆ. ಅದರ ಖ್ಯಾತಿಯ ಕುರಿತ ಅಗತ್ಯ ತಪಾಸಣೆ ಸೇರಿದಂತೆ ದತ್ತಿಗೆ ಸಂಬಂಧಿಸಿದ ಹಿನ್ನೆಲೆ ಪರಿಶೀಲನೆಗಳು ಪೂರ್ಣಗೊಂಡಿವೆ ಎಂಬುದನ್ನು ನೀವು ಖಚಿತಪಡಿಸಿಕೊಳ್ಳಬೇಕು. ಈ ದೇಣಿಗೆಯನ್ನು ನಿಮ್ಮ ವ್ಯವಹಾರ ಘಟಕದ ಸಂವಹನ ವಿಭಾಗದ ಮುಖ್ಯಸ್ಥರು ದತ್ತಿ ದೇಣಿಗೆಗಳನ್ನು ದಾಖಲಿಸುತ್ತಾರಾದ್ದರಿಂದ ಅವರಿಗೆ ವರದಿ ಮಾಡುವುದನ್ನು ನೀವು ನೆನಪಿಟ್ಟುಕೊಳ್ಳಬೇಕು.**

Q ನನ್ನ ಪೂರೈಕೆದಾರರು ದತ್ತಿ ಪ್ರಶಸ್ತಿ ಭೋಜನಕ್ಕೆ ನನ್ನನ್ನು ಆಹ್ವಾನಿಸಿದ್ದಾರೆ. ನಾನು ಒಪ್ಪಿಕೊಳ್ಳಬಹುದೇ?

A **ಈ ಪರಿಸ್ಥಿತಿಯನ್ನು ನಮ್ಮ ಉಡುಗೊರೆ ಮತ್ತು ಮನರಂಜನಾ ನೀತಿಯು (ಪುಟಗಳು 44-45 ನೋಡಿ) ಸಂಬೋಧಿಸುದೆ. ನೀವು ಮನರಂಜನೆಯ ಒಟ್ಟು ಮೌಲ್ಯವನ್ನು ಕಂಡುಹಿಡಿಯಬೇಕು, ಮೌಲ್ಯವು £100 (ಅಥವಾ ಸ್ಥಳೀಯ ಮಿತಿ) ಗಿಂತ ಹೆಚ್ಚಿದ್ದರೆ ವ್ಯವಸ್ಥಾಪಕರ ಅನುಮೋದನೆ ಪಡೆಯಿರಿ ಮತ್ತು ಅದನ್ನು ಉಡುಗೊರೆ ರಿಜಿಸ್ಟರ್‌ನಲ್ಲಿ ನಮೂದಿಸಿರಿ.**

ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

- ಗುಂಪು ಸಂವಹನ ಅಥವಾ ಸ್ಥಳೀಯ ಕಾರ್ಪೊರೇಟ್ ವ್ಯವಹಾರಗಳ ತಂಡ
- ದತ್ತಿ ದೇಣಿಗೆಗಳ ನೀತಿ
- ಉಡುಗೊರೆ & ಮನರಂಜನಾ ನೀತಿ

ಒಳ-ವ್ಯವಹಾರ ಮತ್ತು ಮಾರುಕಟ್ಟೆ ದುರುಪಯೋಗ

ಅದು ಏಕೆ ಮುಖ್ಯ?

ನಿಮ್ಮ ಕೆಲಸದ ಭಾಗವಾಗಿ ಟೆಸ್ಕೊ ಅಥವಾ ನಾವು ವ್ಯಾಪಾರ ಮಾಡುವ ಕಂಪನಿಗಳ "ಒಳಗಿನ ಮಾಹಿತಿ" ವಿಷಯವು ನಿಮ್ಮ ಅರಿವಿಗೆ ಬರಬಹುದು.

ಮಾಹಿತಿಯನ್ನು ನಿಮ್ಮ ಸ್ವಂತ ಲಾಭಕ್ಕಾಗಿ ಅಥವಾ ಇತರರ ಪರವಾಗಿ ಬಳಸುವುದು ಕಾನೂನಿಗೆ ವಿರುದ್ಧವಾದುದು ಮತ್ತು ಇದು ಕಂಪನಿಯ ನೀತಿಗೆ ವಿರುದ್ಧವಾದುದು. ಇದರಲ್ಲಿ ಆಂತರಿಕ ಮಾಹಿತಿಯ ಆಧಾರದ ಮೇಲೆ ಪಟ್ಟಿಮಾಡಿದ ಬಾಂಡ್‌ಗಳಂತಹ ಷೇರುಗಳು ಅಥವಾ ಇತರ ಸೆಕ್ಯೂರಿಟಿಗಳನ್ನು ಮಾರಾಟ ಮಾಡುವುದು ಅಥವಾ ಖರೀದಿಸುವುದು ಸೇರಿದೆ, ಇದನ್ನು "ಒಳ-ವ್ಯವಹಾರ" ಎಂದು ಕರೆಯಲಾಗುತ್ತದೆ ಮತ್ತು ಇದು ಒಂದು ಗಂಭೀರ ಅಪರಾಧವಾಗಿದೆ. ಅವರು ಅದನ್ನು ವ್ಯಾಪಾರದ ನಿರ್ಧಾರ ತೆಗೆದುಕೊಳ್ಳಲು ಬಳಸಬಹುದಾದರೆ ಅಂತಹ ಮಾಹಿತಿಯನ್ನು ಯಾವುದೇ ವ್ಯಕ್ತಿಯೊಂದಿಗೆ ಹಂಚಿಕೊಳ್ಳುವುದೂ ಸಹ ಅಪರಾಧ.

ಕಾನೂನು ಮತ್ತು ನಮ್ಮ ಆಂತರಿಕ ನೀತಿಯನ್ನು ತಿಳಿದುಕೊಳ್ಳುವ ಮತ್ತು ಪಾಲಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲೂ ಇದೆ. ಈ ನಿಯಮಗಳು ನಿಮಗೆ ನೀವು ಟೆಸ್ಕೊದಲ್ಲಿ ಕೆಲಸ ಮಾಡುವುದನ್ನು ನಿಲ್ಲಿಸಿದ ನಂತರವೂ ಕೂಡ ಅನ್ವಯವಾಗುತ್ತವೆ.

ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

- ಕಾರ್ಪೊರೇಟ್ ಸೆಕ್ರೆಟರಿಯಟ್ ತಂಡ
- ಸ್ಥಳೀಯ ಕಾನೂನು ನಿರ್ದೇಶಕರು
- ಟೆಸ್ಕೊ ಪಿಎಲ್‌ಸಿ ಶೇರ್ ಡೀಲಿಂಗ್ ಸಂಹಿತೆ

ನನ್ನ ಕುರಿತಂತೆ ಇದು ಏನು ಅರ್ಥ ನೀಡುತ್ತದೆ?

- ನಿಮ್ಮ ಕೆಲಸವು ನಿಮಗೆ ಒಳಗಿನ ಮಾಹಿತಿಯನ್ನು ಹೊಂದುವುದನ್ನು ಕೋರುತ್ತಿರುವಾಗ, ನಿಮ್ಮನ್ನು ಟೆಸ್ಕೊ ಪಿಎಲ್‌ಸಿ ಇನ್ಸೈಡರ್ (ಒಳಗಿನವರು) ಪಟ್ಟಿಗೆ ಸೇರಿಸಲಾಗುತ್ತದೆ ಮತ್ತು ಗ್ರೂಪ್ ಕಂಪನಿ ಕಾರ್ಯದರ್ಶಿಯಿಂದ ನೀವು ಒಂದು ಅಧಿಸೂಚನೆಯನ್ನು ಪಡೆಯುತ್ತೀರಿ.
- ಯಾವುದೇ ಕಂಪನಿಯ ಬಗ್ಗೆ ನೀವು ಈ ರೀತಿ ಒಳ ಮಾಹಿತಿಯನ್ನು ಹೊಂದಿರುವಾಗ ನೀವು ಅಂತಹ ಕಂಪನಿಯ ಸೆಕ್ಯೂರಿಟಿಗಳಲ್ಲಿ ವ್ಯವಹರಿಸಬಾರದು. ಉದಾಹರಣೆಗೆ, ಕೆಲಸ ಮಾಡುವಾಗ ನಿಮಗೆ ಯಾವುದೋ ಮಾಹಿತಿ ಅರಿವಿಗೆ ಬಂದಿದ್ದು ಮತ್ತು ಆ ಮಾಹಿತಿಯನ್ನು ಸಾರ್ವಜನಿಕಗೊಳಿಸಿದಾಗ ಟೆಸ್ಕೊ ಷೇರು ಬೆಲೆ ಹೆಚ್ಚು ಅಥವಾ ಕಡಿಮೆ ಆಗಬಹುದಾಗಿರುವಂತಿರುವಾಗ ನಿಮಗೆ ಟೆಸ್ಕೊದ ಷೇರುಗಳನ್ನು ಖರೀದಿಸಲು ಅಥವಾ ಮಾರಾಟ ಮಾಡಲು ಅನುಮತಿ ಇಲ್ಲ.
- ನಿಮ್ಮನ್ನು ಟೆಸ್ಕೊ ಪಿಎಲ್‌ಸಿ ಇನ್ಸೈಡರ್ ಪಟ್ಟಿಗೆ ಸೇರಿಸಿದ್ದರೆ, ನೀವು ಟೆಸ್ಕೊ ಪಿಎಲ್‌ಸಿ ಶೇರ್ ಡೀಲಿಂಗ್ ಸಂಹಿತೆ ಅನ್ನು ಅನುಸರಿಸಬೇಕು; ಶಾಸನಕ್ಕೆ ಅನುಗುಣವಾಗಿ ಕೆಲವು ವೈಯಕ್ತಿಕ ವಿವರಗಳನ್ನು ಒದಗಿಸಬೇಕು; ಮತ್ತು ನೀವು ಅಥವಾ ನಿಮಗೆ ಸಂಬಂಧಿತ ವ್ಯಕ್ತಿಗಳು ಟೆಸ್ಕೊ ಸೆಕ್ಯುರಿಟಿಗಳಲ್ಲಿ ವ್ಯವಹರಿಸುವ ಮೊದಲು ನೀವು ಅನುಮತಿಯನ್ನು ಪಡೆಯಬೇಕು.
- ಫಲಿತಾಂಶಗಳು ಅಥವಾ ಪ್ರಮುಖ ವಹಿವಾಟುಗಳಂತಹ ಕೆಲವು ಕಂಪನಿಯ ಪ್ರಕಟಣೆಗಳಿಗೆ ಮುಂಚಿತವಾಗಿ ವಿಧಿಸಲಾಗುವ "ಮುಚ್ಚಿದ ಅವಧಿಗಳಲ್ಲಿ" ಟೆಸ್ಕೊ ಸೆಕ್ಯುರಿಟಿಗಳಲ್ಲಿ ವ್ಯವಹರಿಸುವುದನ್ನು ಸಹ ನಿಮಗೆ ನಿಷೇಧಿಸಲಾಗಿದೆ. ಮುಚ್ಚಿದ ಅವಧಿಯ ದಿನಾಂಕಗಳನ್ನು ಸಹೋದ್ಯೋಗಿಗಳಿಗೆ ಮುಂಚಿತವಾಗಿ ತಿಳಿಸಲಾಗುತ್ತದೆ.
- ಸುಳ್ಳು ಮಾಹಿತಿಯನ್ನು ಹರಡುವ ಮೂಲಕ ಅಥವಾ ಕಂಪನಿಯ ಸೆಕ್ಯೂರಿಟಿಗಳ ಬೆಲೆಯನ್ನು ಕುಶಲತೆಯಿಂದ ತಿದ್ದಲು ವಿನ್ಯಾಸಗೊಳಿಸಲಾದ ಇತರ ಚಟುವಟಿಕೆಗಳಲ್ಲಿ ತೊಡಗಿಕೊಳ್ಳುವ ಮೂಲಕ ನೀವು ಮಾರುಕಟ್ಟೆ ದುರುಪಯೋಗದಲ್ಲಿ ತೊಡಗಬಾರದು.
- ಯಾರಾದರೂ ಒಳ-ವ್ಯವಹಾರದಲ್ಲಿ ತೊಡಗಿದ್ದಾರೆ ಎಂದು ನಿಮಗೆ ಅನಿಸಿದರೆ ನೀವು ಧ್ವನಿಯೆತ್ತಬೇಕು.

ಪ್ರಶ್ನೆಗಳು & ಉತ್ತರಗಳು

Q "ಒಳ ಮಾಹಿತಿ" ಎಂದರೇನು?

A **ಒಳ ಮಾಹಿತಿಯೆಂದರೆ ಸಾರ್ವಜನಿಕವಾಗಿ ಪ್ರಕಟಿಸಲಾಗಿರದ ಮತ್ತು ಸಮರ್ಥನೀಯ ಹೂಡಿಕೆದಾರರು ಷೇರುಗಳು ಅಥವಾ ಇತರ ಸೆಕ್ಯೂರಿಟಿಗಳನ್ನು ಖರೀದಿಸಬೇಕೆ, ಮಾರಾಟ ಮಾಡಬೇಕೆ ಅಥವಾ ಹಿಡಿದುಕೊಂಡಿರಬೇಕೆ ಎಂದು ನಿರ್ಧರಿಸುವಾಗ ಮುಖ್ಯವೆಂದು ಪರಿಗಣಿಸುವಂತಹ ಕಂಪನಿಯ ಕುರಿತ ನಿರ್ದಿಷ್ಟವಾದ ಮಾಹಿತಿ.**

Q ಒಳ-ವ್ಯವಹಾರದ ಬಗ್ಗೆ ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

A **ನಮ್ಮ ಶೇರ್ ಡೀಲಿಂಗ□ ಸಂಹಿತೆ ಮತ್ತು ನಮ್ಮ ಇನ್ಸೈಡರ್ ಬ್ರೀಫಿಂಗ್ ಟಿಪ್ಪಣಿಯನ್ನು ನೋಡಿ. ಆಂತರಿಕ ಮಾಹಿತಿಯ ನಿರ್ವಹಣೆ ಮತ್ತು ಬಹಿರಂಗಪಡಿಸುವಿಕೆಯ ಬಗ್ಗೆ ಹೆಚ್ಚಿನ ಮಾಹಿತಿಯು ಟೆಸ್ಕೊ ಪಿಎಲ್‌ಸಿ ಪ್ರಕಟಣಾ ಕೈಪಿಡಿಯಲ್ಲಿ ಲಭ್ಯವಿದೆ.**

Q ನಾನು ಟೆಸ್ಕೊ ಪಿಎಲ್‌ಸಿ ಇನ್ಸೈಡರ್ ಪಟ್ಟಿಯಲ್ಲಿದ್ದೇನೆ ಮತ್ತು ನಾನು ಕೆಲವು ಟೆಸ್ಕೊ ಷೇರುಗಳನ್ನು ಖರೀದಿಸ ಬಯಸುತ್ತೇನೆ. ಕಂಪನಿಯು ಮುಚ್ಚಿದ ಅವಧಿಯಲ್ಲಿಲ್ಲ, ಹಾಗಾಗಿ ನಾನು ಮುಂದುವರೆದು ವ್ಯಾಪಾರ ಮಾಡಬಹುದೇ?

A **ಇಲ್ಲ, ನೀವು (ಮತ್ತು ನಿಮಗೆ ಸಂಬಂಧಿತ ವ್ಯಕ್ತಿಗಳು) ಟೆಸ್ಕೊ ಪಿಎಲ್‌ಸಿ ಶೇರ್ ಡೀಲಿಂಗ್ ಸಂಹಿತೆಯಲ್ಲಿ ಸೂಚಿಸಲಾದ ಕಾರ್ಯವಿಧಾನಗಳನ್ನು ಅನುಸರಿಸಬೇಕು ಏಕೆಂದರೆ ನೀವು ಟೆಸ್ಕೊ ಪಿಎಲ್‌ಸಿ ಇನ್ಸೈಡರ್ ಪಟ್ಟಿಯಲ್ಲಿ ಪಟ್ಟಿಮಾಡಲಾದ ಸಹೋದ್ಯೋಗಿಯಾಗಿದ್ದರೆ ವ್ಯವಹರಿಸಲು ನಿಮಗೆ ಅನುಮತಿ ಬೇಕಾಗುತ್ತದೆ.**

Q ಟೆಸ್ಕೊ ಸಾರ್ವಜನಿಕವಾಗಿ ವ್ಯಾಪಾರ ಮಾಡುವ ಸರಬರಾಜುದಾರ ಕಂಪನಿಗೆ ದೊಡ್ಡ ಒಪ್ಪಂದವನ್ನು ನೀಡಲು ಹೊರಟಿದೆ ಎಂದು ನಾನು ಕೇಳುತ್ತೇನೆ. ಒಪ್ಪಂದಕ್ಕೆ ಸಹಿ ಮಾಡಿ ಸಾರ್ವಜನಿಕವಾಗಿಸುವ ಮೊದಲು ನಾನು ಸರಬರಾಜುದಾರರಲ್ಲಿ ಷೇರುಗಳನ್ನು ಖರೀದಿಸಬಹುದೇ?

A **ಇಲ್ಲ. ಒಳ ಮಾಹಿತಿಯ ಆಧಾರದ ಮೇಲೆ ಟೆಸ್ಕೊ ಅಥವಾ ಇನ್ನಾವುದೇ ಕಂಪನಿಯಲ್ಲಿ ಷೇರುಗಳನ್ನು ಖರೀದಿಸುವುದು ಅಥವಾ ಮಾರಾಟ ಮಾಡುವುದನ್ನು ಒಳ-ವ್ಯವಹಾರವೆಂದು ಪರಿಗಣಿಸಲಾಗುತ್ತದೆ ಮತ್ತು ಇದು ಕಾನೂನುಬಾಹಿರವಾಗಿದೆ.**

Q ಬದಲಿಗೆ ಪೂರೈಕೆದಾರ ಕಂಪನಿಯಲ್ಲಿ ಷೇರುಗಳನ್ನು ಖರೀದಿಸುವಂತೆ ನಾನು ನನ್ನ ಸ್ನೇಹಿತನೊಬ್ಬನನ್ನು ಪ್ರೋತ್ಸಾಹಿಸಬಹುದೇ?

A **ಇಲ್ಲ. ಇದನ್ನು "ಟಿಪ್ಪಿಂಗ್" ಆಫ್ ಅಥವಾ ಸುಳಿವು ನೀಡುವಿಕೆ ಎಂದು ಕರೆಯಲಾಗುತ್ತದೆ. ಅದರಿಂದ ನೀವು ಲಾಭ ಪಡೆಯುವುದಿಲ್ಲವಾದರೂ ಮಾಹಿತಿಯನ್ನು ನೀವು ಬೇರೆಯವರಿಗೆ ರವಾನಿಸಲು ಅಥವಾ ಅಂತಹ ಮಾಹಿತಿಯ ಆಧಾರದ ಮೇಲೆ ವ್ಯವಹರಿಸಲು ಇತರರನ್ನು ಪ್ರೋತ್ಸಾಹಿಸಲು ನಿಮಗೆ ಅನುಮತಿ ಇಲ್ಲ.**

Q ನಾವು ಮಾರುಕಟ್ಟೆ ನಿರೀಕ್ಷೆಗಳನ್ನು ಗಮನಾರ್ಹವಾಗಿ ಮೀರುತ್ತೇವೆ ಎಂದು ತೋರಿಸುವ ಸೂಚಕ ಹಣಕಾಸು ಫಲಿತಾಂಶಗಳ ಮಾಹಿತಿಯನ್ನು ನಾನು ನೋಡಿದ್ದೇನೆ. ನಾನು ಏನು ಮಾಡಬೇಕು?

A **ಮಾರುಕಟ್ಟೆಗೆ ಸರಿಯಾದ ಡೇಟಾವನ್ನು ಒದಗಿಸುವಲ್ಲಿ ವಿಫಲವಾಗುವುದು ಒಂದು ಗಂಭೀರ ವಿಷಯವಾಗಿದೆ. ಮಾಹಿತಿಯ ಸೂಕ್ತ ಮತ್ತು ತ್ವರಿತ ಪ್ರಕಟಣೆಯ ಮೇಲ್ವಿಚಾರಣೆ ಮಾಡುವ ಪ್ರಕ್ರಿಯೆಯನ್ನು ಗ್ರೂಪ್ ಹೊಂದಿದೆ. ನೀವು ತಕ್ಷಣ ನಿಮ್ಮ ಆರ್ಥಿಕ ಅಥವಾ ಕಾನೂನು ನಿರ್ದೇಶಕರೊಂದಿಗೆ ಮಾತನಾಡಬೇಕು ಅಥವಾ ಪ್ರೊಟೆಕ್ಟರ್ ಲೈನ್ Protector Line ಗೆ ಕರೆ ಮಾಡಬೇಕು.**

ರಾಜಕೀಯ ಚಟುವಟಿಕೆಯಲ್ಲಿ ತೊಡಗುವುದು

ಅದು ಏಕೆ ಮುಖ್ಯ?

ವ್ಯಾಪಾರ ಮಾಡುವುದರ ಭಾಗವಾಗಿ, ನಾವು ವಿಶ್ವದಾದ್ಯಂತದ ಸರ್ಕಾರಗಳು, ನಿಯಂತ್ರಕರು, ಸಾರ್ವಜನಿಕ ಹಿತಾಸಕ್ತಿ ಗುಂಪುಗಳು, ಉದ್ಯಮ ಸಂಘಗಳು ಮತ್ತು ಇತರ ರೀತಿಯ ಸಂಸ್ಥೆಗಳೊಂದಿಗೆ ಒಡನಾಡುತ್ತೇವೆ.

ನಮ್ಮ ಗ್ರಾಹಕರು ಮತ್ತು ನಮ್ಮ ಸಹೋದ್ಯೋಗಿಗಳ ಮೇಲೆ ಪರಿಣಾಮ ಬೀರುವ ಸಮಸ್ಯೆಗಳ ಕುರಿತು ಅವರಿಗೆ ನಮ್ಮ ನಿಲುವನ್ನು ತಿಳಿಸಲು ನಾವು ಇದನ್ನು ಮಾಡುತ್ತೇವೆ. ನಾವು ಈ ಮಾಹಿತಿಯನ್ನು ನೇರವಾಗಿ ಅಥವಾ ನಮ್ಮ ವ್ಯಾಪಾರ ಅಥವಾ ನೀತಿ ಸಂಸ್ಥೆಗಳ ಸದಸ್ಯತ್ವಗಳ ಮೂಲಕ ಒದಗಿಸುತ್ತೇವೆ. ಈ ಸದಸ್ಯತ್ವಗಳು ಸಮಸ್ಯೆಗಳ ಬಗ್ಗೆ ನಮ್ಮ ತಿಳುವಳಿಕೆಯನ್ನು ಹೆಚ್ಚಿಸಲು ಸಹಾಯ ಮಾಡುತ್ತವೆ ಮತ್ತು ಸಂಬಂಧಿತ ನೀತಿ ಮತ್ತು ವಿನಿಯಾಮಕ ಚರ್ಚೆಗಳಲ್ಲಿ ರಚನಾತ್ಮಕವಾಗಿ ತೊಡಗಿಕೊಳ್ಳಲು ನಮಗೆ ಸಹಾಯ ಮಾಡುತ್ತದೆ.

ನಾವು ಯಾವಾಗಲೂ ರಾಜಕೀಯ ಒಡನಾಟವನ್ನು ನಿಯಂತ್ರಿಸುವ ಎಲ್ಲ ಕಾನೂನುಗಳನ್ನು ಅನುಸರಿಸುತ್ತೇವೆ ಎಂಬುದನ್ನು ನಾವು ಖಚಿತಪಡಿಸುತ್ತೇವೆ. ಒಂದು ವ್ಯವಹಾರವಾಗಿ ನಾವು ರಾಜಕೀಯವಾಗಿ ತಟಸ್ಥರಾಗಿದ್ದೇವೆ. ನಮಗೆ ಯಾವುದೇ ರಾಜಕೀಯ ಪಕ್ಷದ ಪರ ಒಲವುಗಳಿಲ್ಲ ಮತ್ತು ನಾವು ರಾಜಕೀಯ ದೇಣಿಗೆ ನೀಡುವುದಿಲ್ಲ.

ನನ್ನ ಕುರಿತಂತೆ ಇದು ಏನು ಅರ್ಥ ನೀಡುತ್ತದೆ?

- ಸರ್ಕಾರಿ ಇಲಾಖೆಗಳು, ರಾಜಕಾರಣಿಗಳು ಅಥವಾ ರಾಜಕೀಯ ಕ್ರಿಯಾ ಗುಂಪುಗಳಿಂದ ಮಾಹಿತಿಗಾಗಿ ನೀವು ಯಾವುದಾದರು ಪತ್ರವ್ಯವಹಾರ ಅಥವಾ ವಿನಂತಿಗಳನ್ನು ಸ್ವೀಕರಿಸಿದರೆ ಯಾವಾಗಲೂ ನಿಮ್ಮ ಸರ್ಕಾರಿ ಸಂಬಂಧಗಳ ತಂಡ ಅಥವಾ ಸಂವಹನ ತಂಡವನ್ನು ಸಂಪರ್ಕಿಸಿ.

- ರಾಜಕಾರಣಿಗಳು ಅಥವಾ ರಾಜಕೀಯ ಪಕ್ಷಗಳು ಆಯೋಜಿಸುವ ಕಾರ್ಯಕ್ರಮಗಳ ಪ್ರಾಯೋಜಕತ್ವ ಸೇರಿದಂತೆ ರಾಜಕೀಯ ದೇಣಿಗೆಗಾಗಿ ಮಾಡಲಾಗುವ ಯಾವುದೇ ವಿನಂತಿಗಳನ್ನು ತೀರ್ಮಾನಕ್ಕಾಗಿ ನಿಮ್ಮ ಸ್ಥಳೀಯ ಸರ್ಕಾರಿ ಸಂಬಂಧಗಳ ಅಥವಾ ಸಂವಹನ ಮತ್ತು ಕಾನೂನು ತಂಡಗಳಿಗೆ ರವಾನಿಸಬೇಕು.

- ನೀವೇನಾದರು ಒಂದು ಸಾರ್ವಜನಿಕ ಅಧಿಕಾರಿಗೆ ಉಡುಗೊರೆ ನೀಡಲು ಅಥವಾ ಮನರಂಜನೆ ನೀಡಲು ಯೋಚಿಸುತ್ತಿದ್ದರೆ ಉಡುಗೊರೆ & ಮನರಂಜನಾ ನೀತಿಯನ್ನು ನೋಡಿ ಮತ್ತು ನಿಮ್ಮ ಕಾನೂನು ನಿರ್ದೇಶಕರನ್ನು ಸಂಪರ್ಕಿಸಿ.

- ಪ್ರಜಾಪ್ರಭುತ್ವ ಪ್ರಕ್ರಿಯೆಯಲ್ಲಿ ಭಾಗಿಯಾಗಲು ನೀವು ಸ್ವತಂತ್ರರು - ಒಂದು ಸಮುದಾಯವು ಅದರಲ್ಲಿ ವಾಸಿಸುವ ಮತ್ತು ಕೆಲಸ ಮಾಡುವ ಜನರು ಅದನ್ನು ಉತ್ತಮ ಸ್ಥಳವನ್ನಾಗಿಸುವಲ್ಲಿ ತೊಡಗಿದಾಗ ಅದು ಬಲಗೊಳ್ಳುತ್ತದೆ. ಆದರೆ ನೀವು ಟೆಸ್ಕೊ ಪರವಾಗಿ ಅಲ್ಲ, ಸ್ವತಃ ನಿಮ್ಮ ಪರವಾಗಿ ವರ್ತಿಸುತ್ತಿದ್ದೀರಿ ಎಂಬ ಬಗ್ಗೆ ಯಾವಾಗಲೂ ಸ್ಪಷ್ಟವಾಗಿರಿ.

- ಯಾವುದೇ ರಾಜಕೀಯ ಚಟುವಟಿಕೆ ನಿಮ್ಮ ಸ್ವಂತ ಸಮಯದಲ್ಲೇ ನಡೆಯಬೇಕು ಮತ್ತು ಅದು ನಿಮ್ಮ ಕೆಲಸದ ಮೇಲೆ ಪರಿಣಾಮ ಬೀರಬಾರದು. ಮತ್ತು ನಿಮ್ಮ ದೃಷ್ಟಿಕೋನವು ಗ್ರಾಹಕರು, ಸಹೋದ್ಯೋಗಿಗಳು ಅಥವಾ ಬೇರೆಯವರೊಂದಿಗೆ ನೀವು ಹೇಗೆ ವರ್ತಿಸಬೇಕು ಎಂಬುದರ ಮೇಲೆ ಪ್ರಭಾವ ಬೀರಬಾರದು.

ಪ್ರಶ್ನೆಗಳು & ಉತ್ತರಗಳು

Q ಟೆಸ್ಕೊ ಪರವಾಗಿ ನಾನು ರಾಜಕೀಯ ದೇಣಿಗೆ ನೀಡಬಹುದೇ?

A ಇಲ್ಲ. ನಾವು ರಾಜಕೀಯ ಪಕ್ಷಗಳಿಗೆ ಅಥವಾ ಅಭ್ಯರ್ಥಿಗಳಿಗೆ ದೇಣಿಗೆ ನೀಡುವುದಿಲ್ಲ.

Q ಮಂತ್ರಿಗಳ ದತ್ತಿ ಕಾರ್ಯಕ್ರಮವನ್ನು ಟೆಸ್ಕೊ ಪ್ರಾಯೋಜಿಸಬಹುದೇ?

A ಉದ್ದೇಶ ಧರ್ಮಕಾರ್ಯಾರ್ಥವಾಗಿದ್ದು ರಾಜಕೀಯವಲ್ಲದಿದ್ದರೂ ಸಹ, ಅಂತಹ ವಿನಂತಿಗಳನ್ನು ನೀವು ನಿಮ್ಮ ಕಾನೂನು ಮತ್ತು ಸರ್ಕಾರಿ ಸಂಬಂಧಗಳ ಅಥವಾ ಸಂವಹನ ತಂಡಗಳೊಂದಿಗೆ ಚರ್ಚಿಸಬೇಕು. ಸಮಾರಂಭದ ಪ್ರಾಯೋಜಕತ್ವವು ಲಂಚದ ಅಥವಾ ಇತರ ಖ್ಯಾತಿಗೆ ಧಕ್ಕೆ ತರುವ ಗೊಡವೆಗಳಿಗೆ ಕಾರಣವಾಗುವುದಿಲ್ಲ ಮತ್ತು ಅದು ಪಕ್ಷ ಸಂಬಂಧಿಯಾಗಿಲ್ಲ ಎಂಬುದನ್ನು ನೀವು ಖಚಿತಪಡಿಸಿಕೊಳ್ಳಬೇಕು. ಟೆಸ್ಕೊ ರಾಜಕೀಯವಾಗಿ ತಟಸ್ಥ ಸಂಸ್ಥೆ ಎಂಬುದನ್ನು ನೆನಪಿಡಿ.

Q ನಾನು ಪ್ರಾಪರ್ಟಿಯಲ್ಲಿ ಕೆಲಸ ಮಾಡುತ್ತೇನೆ. ಟೆಸ್ಕೊ ಮೇಲೆ ಪರಿಣಾಮ ಬೀರುವ ವಿಷಯವೊಂದರ ಬಗ್ಗೆ ನಾನು ಯೋಜನಾ ಸಚಿವರೊಂದಿಗೆ ಮಾತನಾಡಬಹುದೇ?

A ಸರ್ಕಾರಿ ಅಧಿಕಾರಿಗಳೊಂದಿಗೆ ಒಡನಾಡುವ ಮೊದಲು ನೀವು ನಿಮ್ಮ ಸರ್ಕಾರಿ ಸಂಬಂಧಗಳ ಅಥವಾ ಸಂವಹನ ತಂಡವನ್ನು ಸಂಪರ್ಕಿಸಬೇಕು ಮತ್ತು ಯಾವುದೇ ಒಡನಾಟದ ಯೋಜನೆಯನ್ನು ಜಂಟಿಯಾಗಿ ಒಪ್ಪಿಕೊಳ್ಳಬೇಕು. ಬಹುಪಾಲು ಸಮಯ ಸಮಸ್ಯೆಯ ಬಗ್ಗೆ ಅಧಿಕಾರಿಗಳು ನೇರವಾಗಿ ಟೆಸ್ಕೊದ ತಜ್ಞರನ್ನು ಕೇಳುವುದು ಒಳಿತು.

ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

- ಗ್ರೂಪ್ ಕಾನೂನು ಸರ್ಕಾರಿ ಸಂಬಂಧಗಳ ತಂಡ
- ಸಂವಹನ ವಿಭಾಗದ ಮುಖ್ಯಸ್ಥ
- ರಾಜಕೀಯ ಒಡನಾಟದ ಮಾರ್ಗದರ್ಶಿ
- ಉಡುಗೊರೆ & ಮನರಂಜನಾ ನೀತಿ
- ದತ್ತಿ ದೇಣಿಗೆಗಳ ನೀತಿ

Q ಸಂಸತ್ ಸ್ಥಾನಕ್ಕಾಗಿ ನಡೆಸುತ್ತಿರುವ ಸ್ಥಳೀಯ ಅಭ್ಯರ್ಥಿಯೊಬ್ಬರ ಅಭಿಯಾನಕ್ಕೆ ಸಹಾಯ ಮಾಡಲು ನಾನು ಕೆಲಸದಿಂದ ರಜೆ ತೆಗೆದುಕೊಳ್ಳಬಹುದೇ?

ಈ ವಿನಂತಿಯನ್ನು ನೀವು ನಿಮ್ಮ ಜನ ತಂಡದೊಂದಿಗೆ ಚರ್ಚಿಸಬೇಕು, ಅವರು ನಿಮಗೆ ಕೆಲಸದಿಂದ ವೇತನರಹಿತ ರಜೆ ತೆಗೆದುಕೊಳ್ಳುವ ಪ್ರಕ್ರಿಯೆಯನ್ನು ವಿವರಿಸುತ್ತಾರೆ. ಫಲಿತಾಂಶ ಏನೇ ಇರಲಿ, ನಿಮ್ಮ ರಾಜಕೀಯ ನಂಬಿಕೆಗಳು ನಿಮ್ಮ ಟೆಸ್ಕೊ ಕೆಲಸಕ್ಕೆ ಅಡ್ಡಿಯಾಗದಂತೆ ನೋಡಿಕೊಳ್ಳಬೇಕು.

Q ಮದ್ಯ ಮಾರಾಟದ ಬಗ್ಗೆ ಕಳವಳ ವ್ಯಕ್ತಪಡಿಸಲು ಮೇಯರ್ ನಮ್ಮ ಮಳಿಗೆ ವ್ಯವಸ್ಥಾಪಕರನ್ನು ಭೇಟಿ ಮಾಡಲು ಕೇಳಿಕೊಂಡಿದ್ದಾರೆ. ನಾನು ಏನು ಮಾಡಬೇಕು?

A ಉತ್ತಮ ನೆರೆಹೊರೆಯವರಾಗಲು ನಾವು ಸ್ಥಳೀಯ ಚುನಾಯಿತ ಅಧಿಕಾರಿಗಳ ಕಳವಳಗಳಿಗೆ ಸ್ಪಂದಿಸುವುದು ಮಹತ್ವಪೂರ್ಣ. ನೀವು ಪ್ರಸ್ತಾಪವನ್ನು ನಿಮ್ಮ ಸರ್ಕಾರಿ ಸಂಬಂಧಗಳ ಅಥವಾ ಸಂವಹನ ತಂಡದೊಂದಿಗೆ ಚರ್ಚಿಸಬೇಕು ಮತ್ತು ಮೇಯರ್ ಅವರನ್ನು ಭೇಟಿ ಮಾಡಲು ಮತ್ತು ಅವರ ಕಳವಳಗಳನ್ನು ಆಲಿಸಲು ಇರುವ ಉತ್ತಮ ಮಾರ್ಗವನ್ನು ಒಪ್ಪಿಕೊಳ್ಳಬೇಕು.

Q ಸ್ಥಳೀಯ ರಾಜಕಾರಣಿಯೊಬ್ಬರು ಅವರು ಮುಂದಿನ ವಾರ ನನ್ನ ಮಳಿಗೆಗೆ ಭೇಟಿ ನೀಡಬಹುದೇ ಎಂದು ಕೇಳಿದ್ದಾರೆ. ನಾನು ಇದಕ್ಕೆ ಒಪ್ಪಬಹುದೇ?

A ಯಾವಾಗಲೂ ರಾಜಕಾರಣಿಯೊಬ್ಬರ ಔಪಚಾರಿಕ ಭೇಟಿಗೆ ಒಪ್ಪುವ ಮೊದಲು ಸರ್ಕಾರಿ ಸಂಬಂಧಗಳ ಅಥವಾ ಸಂವಹನಗಳಲ್ಲಿನ ಸಹೋದ್ಯೋಗಿಗಳೊಂದಿಗೆ ಸಮಾಲೋಚಿಸಿ. ಪ್ರತಿಕ್ರಿಯೆಯನ್ನು ನೀಡುವ ಮೊದಲು ನಾವು ಯಾವುದೇ ಪ್ರಸ್ತಾವಿತ ಭೇಟಿಯ ಉದ್ದೇಶ ಮತ್ತು ಸಂದರ್ಭವನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ.

Q ಟೆಸ್ಕೊ ಒಂದು ರಾಜಕೀಯ ಪಕ್ಷ ಅಥವಾ ಟ್ರೇಡ್ ಯೂನಿಯನ್ ಆಯೋಜಿಸುವ ಸ್ವಾಗತ ಸಮಾರಂಭವನ್ನು ಪ್ರಾಯೋಜಿಸಬಹುದೇ?

A ಅಂತಹ ವಿನಂತಿಗಳನ್ನು ನೀವು ನಿಮ್ಮ ಕಾನೂನು ಮತ್ತು ಸರ್ಕಾರಿ ಸಂಬಂಧಗಳ ಅಥವಾ ಸಂವಹನ ತಂಡದೊಂದಿಗೆ ಚರ್ಚಿಸಬೇಕು. ಪ್ರಾಯೋಜಕತ್ವವನ್ನು ಅನುಮೋದಿಸಲಾದರೆ, ವಾರ್ಷಿಕ ವರದಿಗಾಗಿ ಟೆಸ್ಕೊದ ರಾಜಕೀಯ ದೇಣಿಗೆಗಳ ಕುರಿತ ಹೇಳಿಕೆಯನ್ನು ಸಿದ್ಧಪಡಿಸುವ ಗ್ರೂಪ್ ಗವರ್ನಮೆಂಟ್ ರಿಲೇಷನ್ಸ್ ಗೆ ತಿಳಿಸಬೇಕಾಗುತ್ತದೆ.

ನಿಖರವಾದ ಲೆಕ್ಕಪತ್ರ ನಿರ್ವಹಣೆ ಮತ್ತು ಹಣ ವರ್ಗಾವಣೆ

ಅದು ಏಕೆ ಮುಖ್ಯ?

ಷೇರು ಮಾರುಕಟ್ಟೆಗಳು ಮತ್ತು ಷೇರುದಾರರ ಪ್ರತಿ ನಮಗಿರುವ ನಮ್ಮ ಜವಾಬ್ದಾರಿಗಳನ್ನು ಪೂರೈಸಲು, ನಮ್ಮ ಎಲ್ಲ ಆರ್ಥಿಕ ಮಾಹಿತಿಯನ್ನು ಕಂಪನಿಯ ಖಾತೆಗಳಲ್ಲಿ ನಿಖರವಾಗಿ ವರದಿ ಮಾಡಬೇಕು. ಇದರರ್ಥ ಆದಾಯ ಮತ್ತು ವೆಚ್ಚದ ಡೇಟಾವನ್ನು ಯಾವಾಗಲೂ ಸರಿಯಾಗಿ ಮತ್ತು ಸರಿಯಾದ ಸಮಯದಲ್ಲಿ ದಾಖಲಿಸಲಾಗುತ್ತದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

ಗಲ್ಲಾಪೆಟ್ಟಿಗೆಗಳಲ್ಲಿ, ನಗದು ಕಚೇರಿಯಲ್ಲಿ ಮತ್ತು ನಮ್ಮ ಹೆಡ್ ಆಫೀಸ್ ಕಾರ್ಯಗಳಲ್ಲಿ, ನಾವೆಲ್ಲರೂ ಪ್ರಾಮಾಣಿಕರಾಗಿದ್ದೇವೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಆರ್ಥಿಕ ಮತ್ತು ಆರ್ಥಿಕೇತರ ಮಾಹಿತಿಯನ್ನು ದಾಖಲಿಸುವಲ್ಲಿ ಸಮಗ್ರತೆಯಿಂದ ವರ್ತಿಸಬೇಕು. ಸ್ಥಳೀಯ ಮತ್ತು ಅಂತರರಾಷ್ಟ್ರೀಯ ಆರ್ಥಿಕ ವರದಿ ನಿಯಮಗಳು ಹೆಚ್ಚುಹೆಚ್ಚು ಕಟ್ಟುನಿಟ್ಟಾಗುತ್ತಿವೆ ಮತ್ತು ನಮ್ಮ ಆಂತರಿಕ ವರದಿ ನೀತಿಗಳೊಂದಿಗೆ ಅವುಗಳನ್ನೂ ಅನುಸರಿಸಬೇಕು.

ದುಷ್ಕರ್ಮಿಗಳು ಟೆಸ್ಕೊ ಬ್ಯಾಂಕ್ ಸೇರಿದಂತೆ ನಮ್ಮ ವ್ಯವಹಾರವನ್ನು, ಅತ್ಯಂತ ಕೆಟ್ಟ ಪ್ರಕರಣವಾದ ಭಯೋತ್ಪಾದನೆ ಸೇರಿದಂತೆ ಅಪರಾಧ ಚಟುವಟಿಕೆಯಿಂದ ಸಂಗ್ರಹಿಸಿದ ಹಣವನ್ನು ಕಾನೂನುಸಮ್ಮತ ಆರ್ಥಿಕ ವ್ಯವಸ್ಥೆಗಳೊಳಗೆ ಸೇರಿಸಲು ಪ್ರಯತ್ನಿಸುವ ಸಾಧ್ಯತೆಯ ಬಗ್ಗೆ ನಾವು ಯಾವಾಗಲೂ ಜಾಗರೂಕರಾಗಿರಬೇಕು. ಇದನ್ನು ಸಾಮಾನ್ಯವಾಗಿ ಮನಿ ಲಾಂಡರಿಂಗ್ ಎಂದು ಕರೆಯಲಾಗುತ್ತದೆ ಮತ್ತು ಮನಿ ಲಾಂಡರಿಂಗ್ ಅಥವಾ ಇತರ ಆರ್ಥಿಕ ಅಪರಾಧಗಳಲ್ಲಿ ಭಾಗಿಯಾಗುವ ಕಂಪನಿಗಳು ಮತ್ತು ವ್ಯಕ್ತಿಗಳಿಗೆ ಕಠಿಣ ದಂಡನೆಗಳನ್ನು ವಿಧಿಸಲಾಗುತ್ತದೆ.

ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

- ಗ್ರೂಪ್ ಆರ್ಥಿಕ ತಂಡ ಅಥವಾ ಸ್ಥಳೀಯ ಆರ್ಥಿಕ ತಂಡ
- ಗ್ರೂಪ್ ಸುರಕ್ಷತೆ, ಭದ್ರತೆ ಮತ್ತು ಸ್ಥಿತಿಸ್ಥಾಪಕತ್ವ ತಂಡ ಅಥವಾ ಸ್ಥಳೀಯ ಭದ್ರತಾ ತಂಡ
- ಗ್ರೂಪ್ ಕಾನೂನು ವ್ಯವಹಾರ ಸಮಗ್ರತಾ ತಂಡ ಅಥವಾ ಸ್ಥಳೀಯ ಕಾನೂನು ತಂಡ.

ನನ್ನ ಕುರಿತಂತೆ ಇದು ಏನು ಅರ್ಥ ನೀಡುತ್ತದೆ?

- ನೀವೇನಾದರು ಆದಾಯ ಅಥವಾ ವೆಚ್ಚಗಳನ್ನು ದಾಖಲಿಸುವುದರಲ್ಲಿ ಭಾಗಿಯಾಗಿದ್ದರೆ, ನಮ್ಮ ಟೆಸ್ಕೊ ಗ್ರೂಪ್ ಅಕೌಂಟಿಂಗ್ ನೀತಿಗಳ ಬಗ್ಗೆ ಮತ್ತು ನಿಮ್ಮ ಪಾತ್ರಕ್ಕೆ ಅವು ಹೇಗೆ ಅನ್ವಯಿಸುತ್ತವೆ ಎಂಬುದರ ಬಗ್ಗೆ ನಿಮಗೆ ತಿಳಿದಿದೆಯ ಎಂಬುದನ್ನು ಖಚಿತಪಡಿಸಿಕೊಳ್ಳಿ.
- ನಿಖರವಾದ ಮತ್ತು ಸರಿಯಾದ ಆರ್ಥಿಕ ವರದಿ ಅವಧಿಗೆ ಸಂಬಂಧಿಸಿದ ಆರ್ಥಿಕ ಮಾಹಿತಿಯನ್ನು ಮಾತ್ರ ಸಲ್ಲಿಸಿ.
- ಎಲ್ಲಾ ಆರ್ಥಿಕ ಮಾಹಿತಿಯನ್ನು ಬೆಂಬಲಿಸಲು ಇನ್‌ವಾಯ್ಸ್‌ಗಳು ಮತ್ತು ರಶೀದಿಗಳು ಸೇರಿದಂತೆ ಸೂಕ್ತ ದಾಖಲೆಗಳನ್ನು ಕಾಯ್ದಿಡಿ.
- ನಮ್ಮ ಪ್ರಯಾಣ ಮತ್ತು ಖರ್ಚು ನೀತಿಗಳ ಬಗ್ಗೆ ತಿಳಿದಿರಿ ಮತ್ತು ಅನುಸರಿಸಿ ಮತ್ತು ನಿಮ್ಮ ತಂಡದ ಸದಸ್ಯರೂ ಹಾಗೆಯೇ ಮಾಡುತ್ತಾರೆ ಎಂಬುದನ್ನು ಖಚಿತಪಡಿಸಿಕೊಳ್ಳಿ.
- ನಿಮ್ಮ ಸ್ಥಳೀಯ ಹಣಕಾಸು ತಂಡದೊಂದಿಗೆ ನಿಕಟವಾಗಿ ಕೆಲಸ ಮಾಡಿ ಮತ್ತು ಆದಾಯ ಅಥವಾ ವೆಚ್ಚವನ್ನು ಹೇಗೆ ದಾಖಲಿಸುವುದು ಎಂಬುದರ ಬಗ್ಗೆ ನಿಮಗೆ ಸ್ಪಷ್ಟತೆ ಇಲ್ಲದಿದ್ದರೆ ಮಾರ್ಗದರ್ಶನ ಪಡೆಯಿರಿ.
- ನಮ್ಮ ಆಂತರಿಕ ಮತ್ತು ಬಾಹ್ಯ ಲೆಕ್ಕ ಪರಿಶೋಧಕರೊಂದಿಗೆ ಅವರಿಗೆ ನಮ್ಮ ಖಾತೆಗಳನ್ನು ಲೆಕ್ಕಪರಿಶೋಧಿಸಲು ಅಗತ್ಯವಿರುವ ಮಾಹಿತಿ ಮತ್ತು ದಾಖಲೆಗಳನ್ನು ಒದಗಿಸಿ ಸಹಕರಿಸಿ.
- ತಪ್ಪಾದ ಅಥವಾ ಸುಳ್ಳು ದಾಖಲೆಗಳನ್ನು ಇತರ ಉದ್ಯೋಗಿಗಳು ಇಟ್ಟುಕೊಂಡಿದ್ದಾರೆ ಅಥವಾ ಅವರು ಹಣವನ್ನು ದುರುಪಯೋಗಪಡಿಸಿಕೊಳ್ಳುತ್ತಿದ್ದಾರೆ ಎಂದು ನಂಬಲು ನಿಮ್ಮಲ್ಲಿ ಕಾರಣವಿದ್ದರೆ ನಿಮ್ಮ ಲೈನ್ ಮ್ಯಾನೇಜರ್, ಸುರಕ್ಷತಾ ನಿರ್ದೇಶಕ, ಆರ್ಥಿಕ ನಿರ್ದೇಶಕ ಅಥವಾ ನಿಮ್ಮ ಸ್ಥಳೀಯ ಪ್ರೊಟೆಕ್ಟರ್ ಲೈನ್‌ಗೆ Protector Line ವರದಿ ಮಾಡಿ.
- ಗ್ರಾಹಕರ ಠೇವಣಿ ಅಥವಾ ಉನ್ನತ ಮೌಲ್ಯದ ನಗದು ವಹಿವಾಟುಗಳನ್ನು ನಿರ್ವಹಿಸುವುದರಲ್ಲಿ ನೀವು ಭಾಗಿಯಾಗಿದ್ದರೆ, ಮನಿ ಲಾಂಡರಿಂಗ್ ವಿರೋಧಿ ಜಾಗೃತಿಯನ್ನು ಪಾಲಿಸಲು ನೀವು ನಿಯಮಿತ ತರಬೇತಿಯನ್ನು ಪೂರ್ಣಗೊಳಿಸುವುದನ್ನು ಖಚಿತಪಡಿಸಿಕೊಳ್ಳಿ.
- ಪೂರೈಕೆದಾರರ ವ್ಯವಸ್ಥೆಗಳಲ್ಲಾಗುವ ಅನಿರೀಕ್ಷಿತ ಬದಲಾವಣೆಗಳ ಸುತ್ತಲಿನ ಅಪಾಯಗಳ ಬಗ್ಗೆ ಜಾಗರೂಕರಾಗಿರಿ, ಉದಾಹರಣೆಗೆ, ಪೂರೈಕೆದಾರರು ತಮ್ಮ ಬ್ಯಾಂಕ್ ಖಾತೆಯನ್ನು ಒಂದು ಕುಖ್ಯಾತ

ತೆರಿಗೆ ಧಾಮಕ್ಕೆ ಸ್ಥಳಾಂತರಿಸುತ್ತಿರಬಹುದಾದು. ಇದು ಒಂದು ಕೆಂಪು ನಿಶಾನೆಯಾಗಿರಬಹುದು.

ಪ್ರಶ್ನೆಗಳು & ಉತ್ತರಗಳು

Q ನಾನು, ಸಾಮಾನ್ಯವಾಗಿ ನಮ್ಮ ಮಳಿಗೆಯ ತ್ಯಾಜ್ಯವನ್ನು ದಾಖಲಿಸುವ ನನ್ನ ಸಹೋದ್ಯೋಗಿಯೊಬ್ಬನ ಬದಲು ಅವನ ಸ್ಥಾನದಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು ನಮೂದಿಸುತ್ತಿರುವ ಅಂಕಿಅಂಶಗಳು ಸಾಮಾನ್ಯವಾಗಿ ನಮೂದಿಸುತ್ತಿರುವ ಅಂಕಿಅಂಶಗಳಿಗಿಂತ ಕಡಿಮೆಯಾಗಿರುವುದಾಗಿ ನಾನು ಗಮನಿಸಿದ್ದೇನೆ. ಇದೊಂದು ಸಮಸ್ಯೆಯೇ?

A **ತ್ಯಾಜ್ಯದ ಪ್ರಮಾಣಗಳು ವಿಭಿನ್ನವಾಗಿರಲು ಸಾಕಷ್ಟು ಕಾರಣಗಳಿವೆ. ನಿಮಗೇನಾದರು ಯಾವುದೇ ಒಂದು ರೀತಿಯಲ್ಲಿ ನಮ್ಮ ನೀತಿಗಳು ಮತ್ತು ಪ್ರಕ್ರಿಯೆಗಳಿಗೆ ಅನುಗುಣವಾಗಿ ಡೇಟಾವನ್ನು ದಾಖಲಿಸಲಾಗಿಲ್ಲ ಎಂದು ಅನಿಸುತ್ತಿದ್ದರೆ, ಮೊದಲ ಬಾರಿಗೆ ನೀವು ನಿಮ್ಮ ಲೈನ್ ಮ್ಯಾನೇಜರ್‌ರೊಂದಿಗೆ ಮಾತನಾಡಿ ಅಥವಾ ಪ್ರೊಟೆಕ್ಟರ್ ಲೈನ್ Protector Line ಗೆ ಕರೆ ಮಾಡಿ.**

Q ಗ್ರಾಹಕರೊಬ್ಬರ ಟೆಸ್ಕೊ ಬ್ಯಾಂಕ್ ಖಾತೆಯ ಮೂಲಕ ಸಾಮಾನ್ಯಕ್ಕಿಂತ ದೊಡ್ಡದಾದ ವಹಿವಾಟುಗಳಾಗುತ್ತಿರುವುದನ್ನು ನಾನು ಗಮನಿಸಿದ್ದೇನೆ. ನಾನು ಇದನ್ನು ವರದಿ ಮಾಡಬೇಕೇ?

A **ಮನಿ ಲಾಂಡರಿಂಗ್‌ಗೆ ಸಂಬಂಧಿಸಿರಬಹುದೆಂದು ನೀವು ಅನುಮಾನಿಸುವ ಯಾವುದೇ ಚಟುವಟಿಕೆಯನ್ನು ನೇರವಾಗಿ ವರದಿ ಮಾಡಬೇಕಾಗುತ್ತದೆ. ಮನಿ ಲಾಂಡರಿಂಗ್ ಕಳವಳಗಳನ್ನು ವರದಿ ಮಾಡುವಲ್ಲಿ ವಿಫಲವಾದರೆ ಗಂಭೀರ ಪರಿಣಾಮಗಳನ್ನು ಎದುರಿಸಬೇಕಾಗುತ್ತದೆ.**

Q ನನ್ನ ಸಾಮಾನ್ಯ ಗ್ರಾಹಕರೊಬ್ಬರು ಅಸಾಧಾರಣವಾಗಿ ದೊಡ್ಡ ಪ್ರಮಾಣದ ಸರಕುಗಳಿಗೆ ನಗದು ರೂಪದಲ್ಲಿ ಪಾವತಿಸಿದ್ದಾರೆ. ಈ ಬಗ್ಗೆ ನಾನು ಕಳವಳಕ್ಕೊಳಗಾಗಬೇಕೇ?

A **ಹೌದು. ಇದು ನಾವು ಗಮನಿಸಬೇಕಾಗಿರುವ "ಕೆಂಪು ನಿಶಾನೆ" ಗಳಲ್ಲಿ ಒಂದು. ನೀವು ನಿಮ್ಮ ಲೈನ್ ಮ್ಯಾನೇಜರ್‌ರೊಂದಿಗೆ ಮಾತನಾಡಬೇಕು.**

Q ನಾನು P8 ನಲ್ಲಿ ಒಂದು ಪ್ರಚಾರಾಭಿಯಾನವನ್ನು ನಡೆಸುತ್ತಿದ್ದೇನೆ ಮತ್ತು ಪೂರೈಕೆದಾರನು £1 ಮಿಲಿಯನ್ ಧನನಿಧಿಯನ್ನು ಒದಗಿಸುತ್ತಿದ್ದಾನೆ. ಈ ಪ್ರಚಾರವು ಖಂಡಿತವಾಗಿಯೂ ನಡೆಯುವುದರಿಂದ ನಾನು ಆದಾಯದ ಲೆಕ್ಕವನ್ನು ಒಂದು ಹಿಂದಿನ ಅವಧಿಯಲ್ಲಿಗೆ ತೋರಿಸಬಹುದೇ?

A **ಸಾಮಾನ್ಯ ಲೆಕ್ಕಪತ್ರ ಅಭ್ಯಾಸದ ಪ್ರಕಾರ, ಆದಾಯವನ್ನು ಚಟುವಟಿಕೆ ನಡೆಯುವ ಆರ್ಥಿಕ ಅವಧಿಯಲ್ಲಿ ದಾಖಲಿಸಬೇಕು. ಅದನ್ನು P8 ನಲ್ಲಿ ಮಾತ್ರ ನಮೂದಿಸಬೇಕು. ಹೆಚ್ಚಿನ ಮಾಹಿತಿಗಾಗಿ ನಿಮ್ಮ ಆರ್ಥಿಕ ವ್ಯವಸ್ಥಾಪಕರೊಂದಿಗೆ ಮಾತನಾಡಿ.**

Q ಒಬ್ಬ ಸಂಭಾವ್ಯ ಪೂರೈಕೆದಾರ ತನ್ನ ಮಾಲೀಕರ ಗುರುತನ್ನು ಅದು ಗೌಪ್ಯ ಮಾಹಿತಿ ಎಂದು ಹೇಳಿ ಬಹಿರಂಗಪಡಿಸಲು ನಿರಾಕರಿಸುತ್ತಿದೆ. ಎಲ್ಲಾ ಹಿನ್ನೆಲೆ ಪರಿಶೀಲನೆ ಅದನ್ನು ಒಂದು ತೀರದಾಚೆಯ ನ್ಯಾಯವ್ಯಾಪ್ತಿಯಲ್ಲಿರುವ ಸಂಸ್ಥೆಯೊಂದರ ಒಡೆತನದಲ್ಲಿದೆ ಎಂದು ಸೂಚಿಸಿವೆ. ನಾನು ಏನು ಮಾಡಬೇಕು?

A **ಇದು ಒಂದು ಕೆಂಪು ನಿಶಾನೆ ಆಗಿದ್ದು, ನೀವು ಲೀಗಲ್ ನಿಂದ ಸಲಹೆ ಮತ್ತು ಮಾರ್ಗದರ್ಶನ ಪಡೆಯಬೇಕು. ಕಂಪನಿಯ ಅಂತಿಮ ಮಾಲೀಕರ ಗುರುತನ್ನು ಮರೆಮಾಚುವಂತ ಸಂಕೀರ್ಣ ಮಾಲೀಕತ್ವದ ರಚನೆಗಳನ್ನು ರಚಿಸುವುದು ಹಣದ ಮೂಲವನ್ನು ಮರೆಮಾಚುವ ಒಂದು ಮಾರ್ಗವಾಗಿದೆ ಮತ್ತು ಇದನ್ನು ಮನಿ ಲಾಂಡರಿಂಗ್ ನಡೆಸಲು ಬಳಸಬಹುದು.**

ನಮ್ಮ ಮಾಹಿತಿಯನ್ನು ಸುರಕ್ಷಿತವಾಗಿರಿಸುವುದು

ಅದು ಏಕೆ ಮುಖ್ಯ?

ಮಾಹಿತಿಯೇ ನಮ್ಮ ಯಶಸ್ಸಿ ಗುಟ್ಟು. ಮಾಹಿತಿಯನ್ನು ತ್ವರಿತವಾಗಿ ಮತ್ತು ಸುರಕ್ಷಿತವಾಗಿ ಹಂಚಿಕೊಳ್ಳುವಲ್ಲಿನ ನಮ್ಮ ಸಾಮರ್ಥ್ಯ ನಮಗೆ ಸಮಯಕ್ಕೆ ಸರಿಯಾಗಿ ಮಳಿಗೆಗಳಿಗೆ ಉತ್ಪನ್ನಗಳನ್ನು ಪಡೆಯಲು, ಮಾರಾಟದ ಡೇಟಾವನ್ನು ವಿಶ್ಲೇಷಿಸಲು ಮತ್ತು ಅದಕ್ಕೆ ಪ್ರತಿಸ್ಪಂದಿಸಲು ಮತ್ತು ಗ್ರಾಹಕರಿಗೆ ಅವರ ಸದ್ಯೋಚಿತ ವಿತರಣಾ ಮಾಹಿತಿ ಒದಗಿಸುವುದನ್ನು ಅನುಮತಿಸುತ್ತದೆ.

ಟೆಸ್ಕೊ ಮಾಹಿತಿಯು ದುಷ್ಕರ್ಮಿಗಳಿಗೆ ಮತ್ತು ವಂಚಕರಿಗೆ ತುಂಬಾ ಮೌಲ್ಯಯುತವಾಗಿರಬಹುದಾಗಿರುವುದರಿಂದ ನಾವು ಮಾಹಿತಿಯನ್ನು ಎಚ್ಚರಿಕೆಯಿಂದ ಬಳಸುವುದು ಮತ್ತು ಕಳೆದುಕೊಳ್ಳದೇ ಇರುವುದು ಮತ್ತು ಯುಕ್ತವಾಗಿ ನಿರ್ವಹಿಸದೇ ಇರುವುದು ಮಾಡಬೇಡಿ. ಮಾಹಿತಿಯನ್ನು ವೈಯಕ್ತಿಕ ಸಾಧನಗಳ ಮೂಲಕ ಅಥವಾ ಸಾರ್ವಜನಿಕ ವೈ-ಫೈ ನೆಟ್‌ವರ್ಕ್ ಸಂಪರ್ಕಗಳ ಮೂಲಕ ಸೇರಿದಂತೆ ಮಾಹಿತಿಯನ್ನು ಬಳಸುವಾಗ ಟೆಸ್ಕೊ ಸಾಧನಗಳು ಮತ್ತು ಟೆಸ್ಕೊ ಮಾಹಿತಿಯನ್ನು ಸರಿಯಾಗಿ ಮತ್ತು ಸುರಕ್ಷಿತವಾಗಿ ಹೇಗೆ ಬಳಸುವುದು ಎಂಬುದನ್ನು ಅರ್ಥಮಾಡಿಕೊಳ್ಳುವ ಜವಾಬ್ದಾರಿ ಎಲ್ಲಾ ಸಹೋದ್ಯೋಗಿಗಳ ಮೇಲೂ ಇದೆ.

ನನ್ನ ಕುರಿತಂತೆ ಇದು ಏನು ಅರ್ಥ ನೀಡುತ್ತದೆ?

ಮಾಹಿತಿಯನ್ನು ಸುರಕ್ಷಿತವಾಗಿಡುವುದು

- ಯಾವಾಗಲೂ ಬಲವಾದ ಪಾಸ್‌ವರ್ಡ್‌ಗಳನ್ನು ಬಳಸಿ. ನಿಮ್ಮ ಪಾಸ್‌ವರ್ಡ್ ಅನ್ನು ರಚಿಸಲು ನೀವು ಸಂಬಂಧವಿಲ್ಲದ ನಾಲ್ಕು ನಿಘಂಟು ಪದಗಳನ್ನು ಒಟ್ಟಿಗೆ ಬಳಸಬಹುದು. ನಿಮಗೆ ಸ್ಮರಣೀಯವಾದಂತ ಆದರೆ ಇತರರಿಗೆ ಊಹಿಸಲು ಸುಲಭವಲ್ಲದ ಪದಗಳನ್ನು ಆರಿಸಿಕೊಳ್ಳಿ.
- ಪಾಸ್‌ವರ್ಡ್‌ಗಳು, ಪಿನ್‌ಗಳು ಅಥವಾ ಬ್ಯಾಂಕ್ ವಿವರಗಳಂತಹ ಮಹತ್ವಪೂರ್ಣ ಮಾಹಿತಿಯನ್ನು ಎಂದಿಗೂ ಹಂಚಿಕೊಳ್ಳಬೇಡಿ.
- ಮಾಹಿತಿಯನ್ನು ಸಂಘಟಿತವಾಗಿ, ಗುರುತಿಸಬಹುದಾದಂತೆ ಮತ್ತು ಬಳಸಬಹುದಾದಂತ ರೀತಿಯಲ್ಲಿ ಇರಿಸಿ.
- ಮಾಹಿತಿಯನ್ನು ಉಳಿಸಿಕೊಳ್ಳುವ ಅಥವಾ ಅಳಿಸುವ ಬಗ್ಗೆ ಇರುವ ಯಾವುದೇ ಅವಶ್ಯಕತೆಗಳ ಬಗ್ಗೆ ತಿಳಿದುಕೊಳ್ಳಿ ಮತ್ತು ಗೌರವಿಸಿ.
- ಕೆಲಸದ ವಿಷಯಗಳಿಗಾಗಿ ವೈಯಕ್ತಿಕ ಇಮೇಲ್ ಖಾತೆಗಳನ್ನು ಬಳಸಬೇಡಿ.
- ಡಾಕ್ಯುಮೆಂಟ್‌ಗಳನ್ನು ಹಂಚಿಕೊಳ್ಳಲು ಸಹೋದ್ಯೋಗಿಗಳಿಗೆ ಹೆಸರಿಸಲಾದ ವ್ಯಕ್ತಿಗಳಿಗೆ ಪ್ರವೇಶವನ್ನು ನೀಡುವ ನಿಮ್ಮ ಟೆಸ್ಕೊ ಅನುಮೋದಿತ OneDrive ಅನ್ನು ಬಳಸಿ.
- ಅನುಮೋದಿಸದ ಅಥವಾ ಸಾರ್ವಜನಿಕ ಫೈಲ□ ಹಂಚಿಕೆ ವೆಬ್‌ಸೈಟ್‌ಗಳನ್ನು ಬಳಸಬೇಡಿ ಉದಾ. ಡ್ರಾಪ್‌ಬಾಕ್ಸ್, ಗೂಗಲ್ ಡ್ರೈವ್.
- ಸೂಕ್ಷ್ಮ ಮಾಹಿತಿಯನ್ನು ಎಚ್ಚರಿಕೆಯಿಂದ ನಿರ್ವಹಿಸಿ, ಅದನ್ನು ಸುರಕ್ಷಿತವಾಗಿರಿಸಿಕೊಳ್ಳಿ ಮತ್ತು ಅದನ್ನು ಸುರಕ್ಷಿತವಾಗಿ ವಿಲೇ ಮಾಡಿ. ಹಾಗೆ ಮಾಡುವುದು ಸೂಕ್ತ ಮತ್ತು ಸುರಕ್ಷಿತವಾಗಿರದ ಹೊರತು ಮಾಹಿತಿಯನ್ನು ಬಹಿರಂಗಪಡಿಸಬೇಡಿ.
- ಎಲ್ಲಾ ಸಹೋದ್ಯೋಗಿಗಳಿಗೂ ಮಾಹಿತಿ ಭದ್ರತಾ ಜಾಗೃತಿ ತರಬೇತಿಯು ಕಡ್ಡಾಯವಾಗಿದೆ. ನಿಮಗೆ ನಿಯೋಜಿಸಲಾದ ಎಲ್ಲ ತರಬೇತಿಯನ್ನು ಸಮಯೋಚಿತವಾಗಿ ಪೂರ್ಣಗೊಳಿಸುವುದನ್ನು ಖಚಿತಪಡಿಸಿಕೊಳ್ಳಿ.
- ನಿಮೇನಾದರು ಡೇಟಾ ಉಲ್ಲಂಘನೆ ಕಂಡುಬಂದಿದೆ ಎಂದು ಅನುಮಾನ ಮೂಡಿದರೆ ತಕ್ಷಣ ಧ್ವನಿಯೆತ್ತಿ. ಗೌಪ್ಯತಾ ಪೋರ್ಟಲ್‌ನಲ್ಲಿನ (ಅಥವಾ ಪೋರ್ಟಲ್ ಇಲ್ಲದಿದ್ದರೆ ನಿಮ್ಮ ಸ್ಥಳೀಯ ಗೌಪ್ಯತಾ ತಂಡವನ್ನು ಸಂಪರ್ಕಿಸಿ) ಮಾರ್ಗದರ್ಶನವನ್ನು ಅನುಸರಿಸಿ.

ಐಟಿ ಉಪಕರಣಗಳು ಮತ್ತು ಸೌಲಭ್ಯಗಳನ್ನು ಬಳಸುವುದು

- ಆಕ್ರಮಣಕಾರಿ, ತಾರತಮ್ಯಕರ, ಕಾನೂನುಬಾಹಿರ ಅಥವಾ ಯಾವುದೇ ಟೆಸ್ಕೊ ನೀತಿಯ ಉಲ್ಲಂಘನೆ ಮಾಡಬಹುದು ಎಂದು ಪರಿಗಣಿಸಬಹುದಾದ ಯಾವುದೇ ವಿಷಯಗಳನ್ನು ರಚಿಸಲು, ಬಳಸಲು ಅಥವಾ ವಿತರಿಸಲು ಟೆಸ್ಕೊ ಲ್ಯಾಪ್‌ಟಾಪ್‌ಗಳು, ಮೊಬೈಲ್ ಸಾಧನಗಳು, ವ್ಯವಸ್ಥೆಗಳು ಅಥವಾ ನೆಟ್‌ವರ್ಕ್‌ಗಳನ್ನು ಬಳಸಬೇಡಿ.
ನಿಧಾನ ಕಂಪ್ಯೂಟರ್‌ಗಳು, ಆಗಾಗ್ಗೆ ಸಂಭವಿಸುವ ಕ್ರ್ಯಾಶಿಂಗ್, ಪಾಪ್-ಅಪ್‌ಗಳು ಮತ್ತು ಅಸಾಮಾನ್ಯ ವರ್ತನೆ ಸೇರಿದಂತೆ ಮಾಲ್‌ವೇರ್ ಸೂಚನೆಗಳಿಗಾಗಿ ಯಾವಾಗಲೂ ಗಮನಿಸಿ.

ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

- ತಂತ್ರಜ್ಞಾನ ಅಪಾಯ ಮತ್ತು ಅನುಸರಣಾ ತಂಡ ಅಥವಾ ಸ್ಥಳೀಯ ಮಾಹಿತಿ ಭದ್ರತಾ ತಂಡ
- ಸ್ವೀಕಾರಾರ್ಹ ಬಳಕೆ ನೀತಿ

ಪ್ರಶ್ನೆಗಳು & ಉತ್ತರಗಳು

Q ಮಾಲ್ವೇರ್ ಹೊಂದಿರಬಹುದು ಎಂದು ನಾನು ನಂಬುವ ಲಿಂಕ್‌ಗಳನ್ನು ಒಳಗೊಂಡಂತ ಇಮೇಲ್ ವೊಂದನ್ನು ನನಗೆ ಕಳುಹಿಸಲಾಗಿದೆ. ನಾನು ಆಕಸ್ಮಿಕವಾಗಿ ಲಿಂಕ್ ಅನ್ನು ಕ್ಲಿಕ್ ಮಾಡಿದ್ದರೆ ನಾನು ಏನು ಮಾಡಬೇಕು?

A **ನೀವು ಬಲ್ಲ ಮೂಲಗಳಿಂದ ಬಂದ ಇಮೇಲ್ ಗಳನ್ನು ಮಾತ್ರ ತೆರೆಯಬೇಕು ಮತ್ತು ನಿಮಗೆ ಪರಿಚಯವಿಲ್ಲದ ಅಥವಾ ಅನುಮಾನಾಸ್ಪದವೆಂದು ತೋರುವ ಲಿಂಕ್‌ಗಳು ಅಥವಾ ತೆರೆದ ಲಗತ್ತುಗಳ ಮೇಲೆ ಎಂದಿಗೂ ಕ್ಲಿಕ್ ಮಾಡಬಾರದು.**

ನಿಮ್ಮ ಟೆಸ್ಕೊ ಕಂಪ್ಯೂಟರ್ ಮಾಲ್ವೇರ್ ಸೋಂಕಿಗೆ ಒಳಗಾಗಿದೆ ಎಂದು ನೀವು ಭಾವಿಸಿದರೆ, ಅದನ್ನು ತಕ್ಷಣವೇ information.security@tesco.com ಗೆ ಇಮೇಲ್ ಮಾಡುವ ಮೂಲಕ 24/7 ಭದ್ರತಾ ಕಾರ್ಯಾಚರಣೆ ಕೇಂದ್ರಕ್ಕೆ ವರದಿ ಮಾಡಿ. ಅದು ಒಂದು ಫಿಶಿಂಗ್ ಇಮೇಲ್ ಆಗಿರಬಹುದು ಎಂದು ನಿಮಗೆ ಅನಿಸಿದರೆ, ಅದನ್ನು phishing@tesco.com ಗೆ ಕಳುಹಿಸುವ ಮೂಲಕ ತಕ್ಷಣ ವರದಿ ಮಾಡಿ ಮತ್ತು ನಂತರ ಇಮೇಲ್ ಅನ್ನು ಅಳಿಸಿ.

Q ಮನೆಯಿಂದ ಕೆಲಸ ಮಾಡುವ ಸಹೋದ್ಯೋಗಿ ಎಂದು ಹೇಳಿಕೊಳ್ಳುವ ಯಾರೋ ಒಬ್ಬರಿಂದ ನನಗೆ ಕರೆ ಬಂತು. ಅವರು ತಮ್ಮ ಕೆಲಸೇತರ ಇಮೇಲ್‌ಗೆ ಹಲವು ಕಡತಗಳನ್ನು ಕಳುಹಿಸುವಂತೆ ನನ್ನನ್ನು ಕೇಳಿದರೆ? ನಾನು ಇದನ್ನು ಮಾಡಬಹುದೇ?

A **ಇಲ್ಲ. ಅದು ಸುರಕ್ಷಿತವಲ್ಲದ ಕಾರಣ ಯಾವುದೇ ಮಾಹಿತಿಯನ್ನು ವೈಯಕ್ತಿಕ ಇಮೇಲ್ ವಿಳಾಸಕ್ಕೆ ಕಳುಹಿಸಬಾರದು. ನಮ್ಮ ಮಾಹಿತಿಯು ಬೆಲೆಬಾಳುವಂತದು ಅದು ಕಳವಾಗುವುದನ್ನು ತಡೆಯಲು ಅಥವಾ ಅನಧಿಕೃತ ಜನರಿಗೆ ಪ್ರಕಟವಾಗುವುದನ್ನು ತಡೆಯಲು ಅದನ್ನು ಕಳುಹಿಸುವ ಮೊದಲು ನೀವು ಯಾವಾಗಲೂ ಕಾಳಜಿ ವಹಿಸಬೇಕು ಮತ್ತು ಯೋಚಿಸಬೇಕು. ಸೂಕ್ಷ್ಮ ಡೇಟಾವನ್ನು ಕಳುಹಿಸುವಾಗ, ಫೈಲ್‌ಗಳು ಪಾಸ್‌ವರ್ಡ್ ರಕ್ಷಿತವಾಗಿವೆಯೆ ಎಂದು ನೀವು ಖಚಿತಪಡಿಸಿಕೊಳ್ಳಬೇಕು.**

Q ಮನೆಗೆ ಹೋಗುವ ಭರಾಟೆಯಲ್ಲಿ ನಾನು ನನ್ನ ಲ್ಯಾಪ್‌ಟಾಪ್ ಅನ್ನು ರೈಲಿನಲ್ಲಿ ಬಿಟ್ಟಿದ್ದೇನೆ ಮತ್ತು ಅದು ಮತ್ತೆ ದೊರೆತಿಲ್ಲ. ನಾನು ಏನು ಮಾಡಬೇಕು?

A **ಅದು ಕಳೆದಿರುವ ಬಗ್ಗೆ ನೀವು ತಕ್ಷಣ ನಿಮ್ಮ ಲೈನ್ ಮ್ಯಾನೇಜರ್‌ಗೆ ವರದಿ ಮಾಡಬೇಕು ಮತ್ತು ಕಚೇರಿ ಬೆಂಬಲ ಕೇಂದ್ರದಲ್ಲಿ ಒಂದು ಟಿಕೆಟ್ ಅನ್ನು ನಮೂದಿಸಬೇಕು.**

Q ಗೌಪ್ಯ ಅಥವಾ ವ್ಯವಹಾರ ಸೂಕ್ಷ್ಮ ಮಾಹಿತಿಯನ್ನು ನಾನು ಹೇಗೆ ವಿಲೇವಾರಿ ಮಾಡಬೇಕು?

A **ಅದನ್ನು ಚೂರುಚೂರು ಮಾಡುವ ಯಂತ್ರದಲ್ಲಿ ಹಾಕಿ ಅಥವಾ ಗೌಪ್ಯ ತ್ಯಾಜ್ಯ ಚೀಲ/ಡಬ್ಬಿಯಲ್ಲಿ ಇರಿಸಿ.**

Q ಕರೆ ಮಾಡಿ ಹೀಗೆ ಹೇಳುವವರಿಗೆ ನಾನು ಹೇಗೆ ಪ್ರತಿಕ್ರಿಯಿಸಬೇಕು? "ಹಲೋ, ಇದು ಐಟಿ ಹೆಲ್ಪ್‌ಡೆಸ್ಕ್‌ನ ಪಾಲ್. ನಿಮ್ಮ ಕಂಪ್ಯೂಟರ್‌ಗೆ ವೈರಸ್ ತಗುಲಿದೆ, ಮತ್ತು ನಾವು ಅದಕ್ಕೆ ತಕ್ಷಣ ಒಂದು ಫಿಕ್ಸ್ ಅನ್ನು ಅನ್ವಯಿಸಬೇಕಾಗಿದೆ. ನಾನು ಫಿಕ್ಸ್ ಅನ್ನು ದೂರದಿಂದಲೇ ಅನ್ವಯಿಸಬಹುದು ಇದಕ್ಕಾಗಿ ನೀವು ನಿಮ್ಮ ಇಮೇಲ್ ವಿಳಾಸ, ಬಳಕೆದಾರರ ಐಡಿ ಮತ್ತು ಪಾಸ್‌ವರ್ಡ್ ಅನ್ನು ದೃ ಢೀಕರಿಸಬಲ್ಲಿರೇ?"

A **ನಿಮ್ಮ ಪಾಸ್‌ವರ್ಡ್ ಅನ್ನು ನೀವು ಯಾರೊಂದಿಗೂ ಹಂಚಿಕೊಳ್ಳಬಾರದು, ಸಹಾಯ ಕೇಂದ್ರದೊಂದಿಗೂ ಅಲ್ಲ. ಅಲ್ಲದೆ, ಯಾರಿಗಾದರೂ ಯಾವುದೇ ಮಾಹಿತಿಯನ್ನು ನೀಡುವ ಮೊದಲು, ಅದನ್ನು ಯಾರು ಕೇಳುತ್ತಿದ್ದಾರೆ ಎಂಬುದನ್ನು ನೀವು ಪರಿಶೀಲಿಸಿದ್ದೀರಿ ಎಂಬುದನ್ನು ಖಚಿತಪಡಿಸಿಕೊಳ್ಳಿ. ಸಾಮಾಜಿಕ ಎಂಜಿನಿಯರಿಂಗ್ ದಾಳಿಯ ಬಗ್ಗೆ ಎಚ್ಚರವಿರಲಿ – ಇವು ಜನರು ನೀಡಬಾರದ ಮಾಹಿತಿಯನ್ನು ನೀಡುವಂತೆ ಮೋಸಗೊಳಿಸುವ ವಿಧಾನಗಳಾಗಿವೆ. ಇದನ್ನು ಮಾಡಲು ಸಾಮಾಜಿಕ ಎಂಜಿನಿಯರ್‌ಗಳು ವಿಭಿನ್ನ ಉಪಾಯಗಳನ್ನು ಬಳಸುತ್ತಾರೆ, ಉದಾಹರಣೆಗೆ ಫೋನ್ ಕರೆಗಳು, ವೈಯಕ್ತಿಕವಾಗಿ ಮತ್ತು ಎಲೆಕ್ಟ್ರಾನಿಕ್ ವಿಧಾನಗಳಲ್ಲಿ (ಉದಾ. ಇಮೇಲ್/ಪತ್ರ).**

ಬಾಹ್ಯ ಸಂವಹನ & ಸಾಮಾಜಿಕ ಮಾಧ್ಯಮವನ್ನು ಬಳಸುವುದು

ಅದು ಏಕೆ ಮುಖ್ಯ?

ಅಂತರ್ಜಾಲ ನಮ್ಮ ವ್ಯವಹಾರಕ್ಕೆ ಒದಗಿಸುವ ಅನೇಕ ಅನುಕೂಲಗಳು ಮತ್ತು ಅವಕಾಶಗಳನ್ನು ನಾವು ಅತ್ಯಂತ ಸಮರ್ಥವಾಗಿ ಬಳಸಿಕೊಳ್ಳುತ್ತೇವೆ. ಸಾಮಾಜಿಕ ನೆಟ್‌ವರ್ಕ್‌ಗಳು ಮತ್ತು ಆನ್‌ಲೈನ್ ಸಮುದಾಯಗಳನ್ನು ಬಳಸುವುದು ವ್ಯಕ್ತಿಗಳಾಗಿ ಮತ್ತು ಒಂದು ವ್ಯವಹಾರವಾಗಿ ನಮಗೆ ನಾವು ಏನು ಮಾಡುತ್ತಿದ್ದೇವೆ ಎಂಬುದಾಗಿ ನಮ್ಮ ಸಹೋದ್ಯೋಗಿಗಳು, ಗ್ರಾಹಕರು ಅಥವಾ ಇತರ ಪ್ರಮುಖ ಪಾಲುದಾರರಿಗೆ ಸಂವಹನ ಮಾಡುವಲ್ಲಿ ಉತ್ತಮ ಪ್ರಯೋಜನಗಳನ್ನು ನೀಡುತ್ತವೆ.

ಟೆಸ್ಕೊ ಕುರಿತ ಸುದ್ದಿಗಳು ತ್ವರಿತವಾಗಿ ಚಲಿಸುತ್ತವೆ ಮತ್ತು ಮಾಧ್ಯಮಗಳು ಮತ್ತು ನಮ್ಮ ಪ್ರತಿಸ್ಪರ್ಧಿಗಳು ನಮ್ಮ ಕುರಿತ ಮಾಹಿತಿಗಾಗಿ ನಿರಂತರವಾಗಿ ಅಂತರ್ಜಾಲವನ್ನು ಹುಡುಕುತ್ತಾರೆ. ಯಾವುದೇ ಒಂದು ರೀತಿಯಿಂದ ತಪ್ಪಾದ ಮಾಹಿತಿಯೇನಾದರು ಸಾರ್ವಜನಿಕವಾಗಿದ್ದರೆ, ಅದು ನಮ್ಮ ಖ್ಯಾತಿ, ನಮ್ಮ ಸ್ಪರ್ಧಾತ್ಮಕತೆ ಮತ್ತು ನಮ್ಮ ಗ್ರಾಹಕರು ನಮ್ಮ ಮೇಲೆ ಇಟ್ಟಿರುವ ನಂಬಿಕೆಯನ್ನು ಹಾನಿಗೊಳಿಸುತ್ತದೆ. ತಪ್ಪು ಮಾಹಿತಿಯು ಟೆಸ್ಕೊ ಬ್ರಾಂಡ್ ಮತ್ತು ಸಹೋದ್ಯೋಗಿಗಳನ್ನು ಕಾನೂನು ಕ್ರಮದ ಅಪಾಯಕ್ಕೂ ಕೂಡ ತಳ್ಳಬಹುದು.

ನನ್ನ ಕುರಿತಂತೆ ಇದು ಏನು ಅರ್ಥ ನೀಡುತ್ತದೆ?

ಒಬ್ಬ ಟೆಸ್ಕೊ ಸಹೋದ್ಯೋಗಿಯಾಗಿ, ನೀವು ವ್ಯವಹಾರವನ್ನು ಪ್ರತಿನಿಧಿಸುತ್ತೀರಿ. ನೀವು ಟೆಸ್ಕೊ ಬಗ್ಗೆ ಮಾತನಾಡುವಾಗ ಎಲ್ಲಾ ಸಮಯದಲ್ಲೂ ಸಾಮಾನ್ಯ ಪ್ರಜ್ಞೆಯನ್ನು ಬಳಸಿ ಮತ್ತು ಎಂದಿಗೂ ತಪ್ಪಾದ ಅಥವಾ ಮನನೋಯಿಸುವ ಟೀಕೆಗಳನ್ನು ಅಥವಾ ಕಾಮೆಂಟ್‌ಗಳನ್ನು ಮಾಡಬೇಡಿ, ಅಂತಹ ಚಿತ್ರಗಳು ಅಥವಾ ಲಿಂಕ್‌ಗಳನ್ನು ಪೋಸ್ಟ್ ಮಾಡಬೇಡಿ. ಯಾವಾಗಲೂ ನಿಮ್ಮ ಕೆಲಸ ಮತ್ತು ಸಹೋದ್ಯೋಗಿಗಳ ಬಗ್ಗೆ ಗೌರವಯುತವಾಗಿ ಮತ್ತು ಸಕಾರಾತ್ಮಕವಾಗಿ ಇರವುದಾಗಿ ಗುರಿ ಇಟ್ಟುಕೊಳ್ಳಿ. ನೀವು ಸಾರ್ವಜನಿಕವಾಗಿ ಯಾವುದೇ ಭಾಷಣದ ಸಮಯದಲ್ಲಿ ಅಥವಾ ಸಮ್ಮೇಳನದಲ್ಲಿ ಹೇಳುವುದು, ಪತ್ರಕರ್ತರಿಗೆ ಹೇಳುವುದು ಅಥವಾ ಸಾಮಾಜಿಕ ಮಾಧ್ಯಮದಲ್ಲಿ ಬರೆಯುವುದು ಬ್ರ್ಯಾಂಡ್‌ಗೆ ಹಾನಿಮಾಡಬಹುದು ಮತ್ತು ತಿರುಗಿ ಅದು ನಿಮ್ಮ ಕೆಲಸದ ವಾತಾವರಣದ ಮೇಲೆ ನಕಾರಾತ್ಮಕ ಪರಿಣಾಮ ಬೀರಬಹುದು ಎಂಬುದನ್ನು ನೆನಪಿಡಿ.

ನಮ್ಮ ಸಾಮಾಜಿಕ ಮಾಧ್ಯಮ ನೀತಿಯು ಆನ್‌ಲೈನ್ ಸಂವಹನದ ಕುರಿತ ನಮ್ಮ ವಿಧಾನವನ್ನು ಸ್ಥಾಪಿಸುತ್ತದೆ ಮತ್ತು ಇದನ್ನು ನಾಲ್ಕು ಪ್ರಮುಖ ಕ್ಷೇತ್ರಗಳ ಸುತ್ತ ನಿರ್ಮಿಸಲಾಗಿದೆ:

1. ಪ್ರಾಮಾಣಿಕರಾಗಿರಿ – ನಮ್ಮ ವ್ಯವಹಾರದ ಮೌಲ್ಯಗಳನ್ನು ಅನುಸರಿಸಿ ಮತ್ತು ವಿಶುದ್ಧರಾಗಿರಿ. ನಿಮ್ಮನ್ನು ನೀವು ಒಬ್ಬ ಟೆಸ್ಕೊ ಸಹೋದ್ಯೋಗಿ ಎಂದು ಗುರುತಿಸಿಕೊಳ್ಳಿ ಮತ್ತು ದಯವಿಟ್ಟು ನಿಮ್ಮ ಪ್ರೊಫೈಲ್‌ನಲ್ಲಿ 'ಎಲ್ಲಾ ಅನಿಸಿಕೆಗಳು ಸ್ವತಃ ನನ್ನವು' ಎಂದು ತಿಳಿಸಿ. ಅಲಿಯಾಸ್ ಅನ್ನು ಬಳಸಬೇಡಿ ಅಥವಾ ಕಂಪನಿಯೊಂದಿಗಿನ ನಿಮ್ಮ ಸಂಪರ್ಕದ ಬಗ್ಗೆ ಜನರನ್ನು ದಾರಿ ತಪ್ಪಿಸಬೇಡಿ.
2. ಅರಿತಿರಿ – ನೀವ□ ಅಂತರ್ಜಾಲದಲ್ಲಿ ಪೋಸ್ಟ್ ಮಾಡುವ ಎಲ್ಲವೂ ಸಾರ್ವಜನಿಕವಾಗಿರುತ್ತದೆ ಎಂಬುದನ್ನು ನೆನಪಿಡಿ ಮತ್ತು ಮಾಧ್ಯಮ ಮತ್ತು ಪ್ರತಿಸ್ಪರ್ಧಿಗಳು ವೀಕ್ಷಿಸುತ್ತಿದ್ದಾರೆ ಎಂಬುದನ್ನು ಗಮನದಲ್ಲಿರಿಸಿಕೊಳ್ಳಿ.
3. ಯೋಚಿಸಿ – ನೀವು ಹಂಚಿಕೊಳ್ಳುವ ವಿಷಯದ ಕುರಿತು ಜವಾಬ್ದಾರಿಯುತರಾಗಿರಿ. ನಿಮ್ಮ ಪೋಸ್ಟ್‌ಗಳು ಕರಾರುವಾಕ್ಕಾಗಿವೆ, ದಾರಿತಪ್ಪಿಸುವಂತಿಲ್ಲ ಅಥವಾ ಹಾನಿಕಾರಕವಾಗಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ಪ್ರಯತ್ನಿಸಿ ಮತ್ತು ಕಂಪನಿಯ ಗೌಪ್ಯ ಮಾಹಿತಿಯನ್ನು ಬಹಿರಂಗಪಡಿಸದಂತೆ ಜಾಗರೂಕರಾಗಿರಿ.
4. ಕೃತಜ್ಞತೆಯಿಂದಸ್ಮರಿಸಿ – ಕಾಪಿರೈಟ್‌ಅನ್ನು ಗೌರವಿಸಿ ಮತ್ತು ಸೂಕ್ತವಾಗಿ ಮನ್ನಣೆಗಳನ್ನು ನೀಡಬೇಕಾದಲ್ಲೆಲ್ಲ ನೀಡಿ. ಬೇರೊಬ್ಬರು ರಚಿಸಿದ ಪಠ್ಯ, ಚಿತ್ರಗಳು ಅಥವಾ ವೀಡಿಯೊಗಳನ್ನು ಅವರಿಗೆ ಮನ್ನಣೆ ನೀಡದೆ ಪೋಸ್ಟ್ ಮಾಡಬೇಡಿ. ಮೊದಲು ಪತ್ರಿಕಾ ಕಚೇರಿ ಮತ್ತು ನಿಮ್ಮ ಸ್ಥಳೀಯ ಗೌಪ್ಯತಾ ತಂಡವನ್ನು ಸಂಪರ್ಕಿಸದೆ ಎಂದಿಗೂ ಪತ್ರಕರ್ತರಿಗೆ ಸಿಸಿಟಿವಿ ಅಥವಾ ಕ್ಯಾಮೆರಾ ಫೋನ್ ವೀಡಿಯೊವನ್ನು ನೀಡಬೇಡಿ.

ಪತ್ರಕರ್ತರೊಂದಿಗೆ ವ್ಯವಹರಿಸುವುದು

ಕಥೆ ಸ್ಥಳೀಯವಾದುದೋ, ಪ್ರಾದೇಶಿಕವಾದುದೋ, ರಾಷ್ಟ್ರೀಯವಾದುದೋ ಅಥವಾ ಅಂತರರಾಷ್ಟ್ರೀಯವಾದುದೋ ಆಗಿರಲಿ, ಎಲ್ಲಾ ವಿಚಾರಣೆಗಳನ್ನು ಟೆಸ್ಕೊ ಪ್ರೆಸ್ ತಂಡಕ್ಕೆ ಸೂಚಿಸಿ. ಅವರು ನಿಮಗೆ ನಿಮ್ಮ ಪ್ರತಿಸ್ಪಂದನಗಳನ್ನು ನಿರ್ವಹಿಸಲು, ಚಿತ್ರೀಕರಣ ಅಥವಾ ರೇಡಿಯೊ



ವಿನಂತಿಗಳನ್ನು ಸಂಘಟಿಸಲು ಮತ್ತು ನೀವು ಕಾನೂನುಬದ್ಧವಾಗಿ ಇರಲು ಸಹಾಯ ಮಾಡಬಲ್ಲರು. ಇದು ನಮಗೆ ಟೆಸ್ಕೊದಾದ್ಯಂತ ಸ್ಥಿರ ಮತ್ತು ಸದ್ಯೋಚಿತ ಸಂದೇಶವನ್ನು ತಲುಪಿಸಲು ಸಹಾಯ ಮಾಡುತ್ತದೆ.

ಪ್ರಶ್ನೆಗಳು & ಉತ್ತರಗಳು

Q ಸಹೋದ್ಯೋಗಿಯೊಬ್ಬರು ಸಾಮಾಜಿಕ ಮಾಧ್ಯಮದಲ್ಲಿ ಅನುಚಿತ ಹೇಳಿಕೆಗಳನ್ನು ನೀಡುವ ಉದಾಹರಣೆಯನ್ನು ನಾನು ನೋಡಿದ್ದೇನೆ – ನಾನು ಏನು ಮಾಡಬೇಕು?

A ನೀವು ನೋಡಿದ್ದನ್ನು ಸಾಮಾಜಿಕ ಮಾಧ್ಯಮ ಮಾರ್ಗಸೂಚಿಗಳ ಎದುರು ಪರಿಶೀಲಿಸಿ. 'ನೈಜ ಜಗತ್ತಿನಲ್ಲಿ'ನಂತೆ ವಸ್ತುತಃ ಜಗತ್ತಿನಲ್ಲಿ ನಾವು ಮಾಡುವ ಕಾಮೆಂಟ್‌ಗಳು ನಮ್ಮ ಮೌಲ್ಯಗಳನ್ನು ಪ್ರತಿಬಿಂಬಿಸಬೇಕು. ನೀವು ಇನ್ನೂ ಕಳವಳದಲ್ಲಿದ್ದರೆ, ದಯವಿಟ್ಟು ನಿಮ್ಮ ಲೈನ್ ಮ್ಯಾನೇಜರ್‌ರೊಂದಿಗೆ ಮಾತನಾಡಿ ಅಥವಾ ನಿಮ್ಮ ಸ್ಥಳೀಯ ಕಾರ್ಪೊರೇಟ್ ವ್ಯವಹಾರಗಳ ತಂಡ ಅಥವಾ ಗ್ರೂಪ್ ಸಂವಹನ ತಂಡವನ್ನು ಸಂಪರ್ಕಿಸಿ.

Q ನಾನು ಟೆಸ್ಕೊ ಬಗ್ಗೆ ಸಾಕಷ್ಟು ಆಸಕ್ತಿದಾಯಕ ಲೇಖನಗಳು, ಟ್ವೀಟ್‌ಗಳು ಮತ್ತು ಫೇಸ್‌ಬುಕ್ ಪೋಸ್ಟ್‌ಗಳನ್ನು ನೋಡುತ್ತೇನೆ. ಇವುಗಳನ್ನು ನಾನು ಆನ್ ಲೈನ್‌ನಲ್ಲಿ ಬಾಹ್ಯವಾಗಿ ಪೋಸ್ಟ್ ಮಾಡಬಹುದೇ ಅಥವಾ ಸ್ನೇಹಿತರು ಮತ್ತು ಕುಟುಂಬಕ್ಕೆ ಕಳುಹಿಸಬಹುದೇ?

A ಹೌದು ಸಂದೇಶವು ಸಕಾರಾತ್ಮಕವಾಗಿದ್ದರೆ, ಆದರೆ ನೀವು ಬಳಸುತ್ತಿರುವ ಮಾಹಿತಿಯು ಹಂಚಿಕೊಳ್ಳಲು ಸೂಕ್ತವಾದುದಾಗಿದೆ ಅಥವಾ ಆಂತರಿಕ ಬಳಕೆಗೆ ಮಾತ್ರ ಉದ್ದೇಶಿಸಲಾಗಿದೆಯೇ ಎಂದು ಯೋಚಿಸಿ. ಇದು "ನಕಲಿ ಸುದ್ದಿ"ಯೇ ಎಂದು ಕೂಡ ಪರಿಗಣಿಸಿ. ಸಾಮಾನ್ಯ ಜನರಿಗೆ ಉದ್ದೇಶಿಸಿರುವ ಮಾಹಿತಿಯನ್ನು ಮಾತ್ರ ಹಂಚಿಕೊಳ್ಳಿ. ಸುವರ್ಣ ನಿಯಮವನ್ನು ನೆನಪಿಡಿ: ಸಕಾರಾತ್ಮಕವಾಗಿ ಪೋಸ್ಟ್ ಮಾಡಿ.

Q ನಾನು ಒಂದು ಟೆಸ್ಕೊ ವೆಬ್‌ಸೈಟ್ ಮತ್ತು ಸಾಮಾಜಿಕ ಮಾಧ್ಯಮ ಚಾನಲ್ ಅನ್ನು ನಿರ್ವಹಿಸುತ್ತೇನೆ (ಉದಾ. ಟೆಸ್ಕೊ ಫೇಸ್‌ಬುಕ್ ಅಥವಾ ಟ್ವಿಟರ್). ಅದರಲ್ಲಿ ನಾನು ಟೆಸ್ಕೊ ಕುರಿತ ಅಂಕಿಅಂಶಗಳನ್ನು ಮತ್ತು ಸಂಖ್ಯೆಗಳನ್ನು ಪ್ರಕಟಿಸಬಹುದೇ?

A ಹೌದು, ಆದರೆ ದಯವಿಟ್ಟು ಅಂಕಿಅಂಶಗಳು ಅಥವಾ ಸಂಖ್ಯೆಗಳು ನಿಖರವಾಗಿವೆಯೇ ಮತ್ತು ಈಗಾಗಲೇ ಸಾರ್ವಜನಿಕ ವಲಯದಲ್ಲಿವೆಯೇ ಎಂದು ಪರಿಶೀಲಿಸಿ. ಟೆಸ್ಕೊ ಪಿಎಲ್‌ಸಿ ವೆಬ್‌ಸೈಟ್ ಹಣಕಾಸು ಮತ್ತು ಸಮುದಾಯ ಕಾರ್ಯಕ್ರಮದ ಡೇಟಾವನ್ನು ಒಳಗೊಂಡಂತೆ ನಮ್ಮ ಇತ್ತೀಚಿನ ಕಾರ್ಪೊರೇಟ್ ಪ್ರಕಟಣೆಗಳನ್ನು ಹೊಂದಿದೆ. ಸಾಧ್ಯವಾದರೆ, ಸಂಬಂಧಿತ ಟೆಸ್ಕೊ ಪಿಎಲ್‌ಸಿ ಪುಟದ ಲಿಂಕ್ ಒದಗಿಸಿ. ಟೆಸ್ಕೊ ಪಿಎಲ್‌ಸಿ ವೆಬ್ ಸೈಟ್‌ನಲ್ಲಿರುವ ಮಾರಾಟದ ಅಂಕಿಅಂಶಗಳನ್ನು ಹೊರತುಪಡಿಸಿ ಬೇರಾವ ಮಾರಾಟದ ಅಂಕಿಅಂಶಗಳ ಡೇಟಾವನ್ನು ಹಂಚಿಕೊಳ್ಳಬೇಡಿ.

Q ನಮ್ಮ ಹೊಸ ಆಲ್ಕೋಹಾಲ್ ಪರವಾನಗಿಯ ಪ್ರಭಾವದ ಕುರಿತು ಒಂದು ಲೇಖನವನ್ನು ಪ್ರಕಟಿಸಲು ಅವರು ಬಯಸಿದ್ದರಿಂದ ಸ್ಥಳೀಯ ಪತ್ರಿಕೆ ಈಗತಾನೇ ಕರೆ ಮಾಡಿತ್ತು. ಅವರೊಂದಿಗೆ ಮಾತನಾಡುವುದು ಸರಿಯೇ?

A ನೀವು ಅವರನ್ನು ಮೊದಲಿಗೆ ಟೆಸ್ಕೊ ಪ್ರೆಸ್ ಆಫೀಸ್‌ಗೆ ಸೂಚಿಸಬೇಕು, ತದನಂತರ ಸ್ಥಳೀಯ ಪತ್ರಿಕೆಯೊಂದಿಗೆ ಯಾರು ಮಾತನಾಡುತ್ತಾರೆ ಎಂಬುದಾಗಿ ಒಪ್ಪಿಕೊಳ್ಳಿ.

Q ಟೆಸ್ಕೊ ಬಗ್ಗೆ ಸಾರ್ವಜನಿಕವಾಗಿ ಮಾತನಾಡಲು ನನ್ನನ್ನು ಕೇಳಲಾಗಿದೆ. ಈ ಆಹ್ವಾನವನ್ನು ಸ್ವೀಕರಿಸುವುದು ಸರಿಯೇ?

A ಯಾವುದೇ ಆಹ್ವಾನವನ್ನು ಸ್ವೀಕರಿಸುವ ಮೊದಲು, ನೀವು ನಿಮ್ಮ ವ್ಯಾಪಾರ ಮುಖಂಡರೊಂದಿಗೆ ಚರ್ಚಿಸಬೇಕು ಮತ್ತು ನಂತರ ಗ್ರೂಪ್ ಸಂವಹನ ತಂಡ ಅಥವಾ ಸ್ಥಳೀಯ ಕಾರ್ಪೊರೇಟ್ ವ್ಯವಹಾರಗಳ ತಂಡವನ್ನು ಸಂಪರ್ಕಿಸಬೇಕು. ಅವರು ನಿಮಗೆ ನಿಮ್ಮ ಪ್ರೇಕ್ಷಕರಿಗೆ ಸರಿಯಾದ ಸಂದೇಶಗಳನ್ನು ಸಂವಹನ ಮಾಡಲು ಮತ್ತು ಯಾವುದೇ ಖ್ಯಾತಿಯ ಕುರಿತ ಅಪಾಯಗಳನ್ನು ತಪ್ಪಿಸಲು ಸಲಹೆ ನೀಡಬಲ್ಲರು. ಆಹ್ವಾನಗಳು ಟೆಸ್ಕೊಗೆ ಪ್ರಯೋಜನಕಾರಿಯಾಗಿರಬೇಕು ಮತ್ತು ಪ್ರಸ್ತುತಿಗಳು ಯಾವುದೇ ಹೊಸ, ಗೌಪ್ಯ ಅಥವಾ ವಾಣಿಜ್ಯಿಕವಾಗಿ ಸೂಕ್ಷ್ಮವಾಗಿರುವ ಸುದ್ದಿಗಳನ್ನು ಹೊಂದಿರಬಾರದು.

ಇನ್ನಷ್ಟು ಹೆಚ್ಚಿನದನ್ನು ನಾನು ಎಲ್ಲಿ ನೋಡಬಹುದು?

- ಗ್ರೂಪ್ ಸಂವಹನ ತಂಡ ಅಥವಾ ಸ್ಥಳೀಯ ಸಂವಹನ ತಂಡ
- ಪತ್ರಿಕಾ ತಂಡ
- ಕಾರ್ಪೊರೇಟ್ ವ್ಯವಹಾರಗಳ ತಂಡ
- ಸಾಮಾಜಿಕ ಮಾಧ್ಯಮ ನೀತಿ
- ಸಿಸಿಟಿವಿ ಪ್ರವೇಶ ಮತ್ತು

ನಮ್ಮ ಮೌಲ್ಯಗಳು

ನಾವು ಕಷ್ಟಕರವಾದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಿರುವಾಗ ನಮ್ಮ ಮೌಲ್ಯಗಳು ನಮಗೆ ಮಾರ್ಗದರ್ಶನ ನೀಡುತ್ತವೆ. ನಮ್ಮ ಮೌಲ್ಯಗಳನ್ನು ಅನುಸರಿಸುವ ಮೂಲಕ, ನಾವು ಸರಿಯಾದ ಕೆಲಸವನ್ನು ಮಾಡುವುದು ಖಚಿತ.

ಗ್ರಾಹಕರಿಗಾಗಿ
ಬೇರಾರೂ ನಮಗಿಂತ
ಕಷ್ಟಪಟ್ಟು
ಪ್ರಯತ್ನಿಸುವುದಿಲ್ಲ

ತಿ ಸಣ್ಣ ಸಹಾಯವು
ಒಂದು ದೊಡ್ಡ
ವ್ಯತ್ಯಾಸವನ್ನುಂಟುಮಾಡುತ್ತ

ಾವು ಜನರನ್ನು ಅವರ
ಹೇಗೆ ಉಪಚರಿಸಲ್ಪಡಲು
ಬಯಸುವರೋ ಹಾಗೆಯೇ
ಉಪಚರಿಸುತ್ತೇವೆ

ಕಾರ್ಯನಿರ್ವಹಿಸಿ

- ಹೊರಹೋಗಿ ಜನರೊಂದಿಗೆ ಸಂಪರ್ಕ ಸಾಧಿಸುವುದು.
- ಒಂದು ತಂಡವಾಗಿ ಕೆಲಸ ಮಾಡುವುದು ಮತ್ತು ಜಂಟಿ ಯಶಸ್ಸಿನ್ನು ಹಂಚಿಕೊಳ್ಳುವುದು.
- ವಿಷಯಗಳನ್ನು ಸರಳವಾಗಿಡಲು ಇತರರೊಂದಿಗೆ ಸಹಕರಿಸುವುದು.

ಪರಾನುಭೂತಿ

ಜನರನ್ನು ಮೊದಲಿಗಿಡುವುದು

- ಪ್ರಾಮಾಣಿಕ, ವಿಶ್ವಾಸಾರ್ಹ ಮತ್ತು ಉಪಯುಕ್ತ ಸಂಬಂಧಗಳನ್ನು ನಿರ್ಮಿಸುವುದು.
- ಇತರರನ್ನು ನೋಡಲು, ಆಲಿಸಲು ಮತ್ತು ಗುರುತಿಸಲು ಸಮಯ

ಸ್ಥಿತಿಸ್ಥಾಪಕತ್ವ

ನಿಮ್ಮಿಂದ ಉತ್ತಮವಾದದ್ದನ್ನು ಪಡೆಯುವುದು

- ನೀವು ನಿಮ್ಮ ಅತ್ಯುತ್ತಮ ಕ್ಷಮತೆಯಲ್ಲಿರಲು ಸಾಧ್ಯವಾಗುವಂತೆ ನಿಮ್ಮನ್ನು ನೀವು ಚೆನ್ನಾಗಿ ನೋಡಿಕೊಳ್ಳುವುದು.
- ನಿಮ್ಮ ಸುತ್ತಲಿನ ಸಕಾರಾತ್ಮಕ ಅಂಶಗಳನ್ನು ನೋಡುವ ಆಯ್ಕೆ ಮಾಡುವುದು.
- ಸಂಗತಿಗಳು ಕಠಿಣವಾದಾಗ ಹೇಗೆ ಪ್ರತಿಕ್ರಿಯಿಸಬೇಕು ಎಂದು ತಿಳಿದುಕೊಳ್ಳುವುದು.

ಪ್ರತಿಕ್ರಿಯಾಶೀಲತೆ

ನಿಂತಲ್ಲೇ ಯೋಚಿಸುವುದು

- ಅನಿರೀಕ್ಷಿತ ಪ್ರಪಂಚದ ಸವಾಲುಗಳನ್ನು ಸ್ವೀಕರಿಸುವುದು.
- ಧೈರ್ಯಶಾಲಿಯಾಗಿರುವುದು, ತೂಗಿ ಅಳೆದ ಸವಾಲನ್ನು ತೆಗೆದುಕೊಳ್ಳುವುದು ಮತ್ತು ಅದರ ಫಲಿತಾಂಶದಿಂದ ಕಲಿಯುವುದು.
- ಉತ್ತರವು ಸ್ಪಷ್ಟವಾಗಿಲ್ಲದಿದ್ದರೂ ನಿರ್ಧಾರಗಳನ್ನು ತೆಗೆದುಕೊಳ್ಳುವುದು.

ಡಿಸೆಂಬರ್ 2018. apecreative.com ನಿಂದ ವಿನ್ಯಾಸಗೊಳಿಸಲಾಗಿದೆ.

ನಮ್ಮ ಸಹೋದ್ಯೋಗಿಗಳನ್ನು ಮತ್ತು ನಮ್ಮ ವ್ಯವಹಾರವನ್ನು ರಕ್ಷಿಸುತ್ತ .